ಸಂವಾದ

ಫೆಬ್ರವರಿ - 2003

ಮಾಸ ಪತ್ರಿಕೆ

ರೂ. 10/-

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 4

ಫೆಬ್ರುವರಿ 2003

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು :
ಕೆ.ಸಿ. ಶಿವರಾಂ
ಡಾ|| ಎಂ. ಶಿವಲಿಂಗಯ್ಯ
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಬ್ರಾಹ್ಮಣ್ಯದ ಗುಲಾಮರಾಗುತ್ತಿರುವ ಹಿಂದುಳಿದ ವರ್ಗ 6
  —ಪ್ರೊ. ಕಾಂಚಾ ಐಲಯ್ಯ
- ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಪ್ರಾಂತ್ಯದ ರೂವಾರಿ 8

- ಕೋಮುವಾದಿ ಹಿಂಸೆ ಮತ್ತು ಮಹಿಳಾ ಚಳವಳಿ 10
- ನನ್ನ ದನಿ 15
- ಜಾಗತೀಕರಣದ ಐಡಿಯಾಲಜಿ 16
- ದಲಿತ ಬುದ್ಧಿಜೀವಿಗಳು ಮತ್ತು ಹಿಂದುಳಿದ ವರ್ಗದ ಬುದ್ಧಿ ಜೀವಿಗಳು 18
  —ನಟರಾಜ್ ಹುಳಿಯಾರ್

- ಯಾವುದು 'ಹಿಂದುತ್ವ'? 21
- ನಾವೇಕೆ ಬೌದ್ಧರಾಗಬೇಕು ? 22
- ದಲಿತ; ಜಾತಿಯೋ... ಜನಾಂಗವೋ... 26
  —ಶಿವ ವಿಶ್ವನಾಥನ್
- ಹಿಂದೂ ವಿವಾಹಗಳ ಸುತ್ತ ಮುತ್ತ 34

ಇಲ್ಲಿನ ಲೇಖನಗಳಲ್ಲಿ ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವುಗಳಾಗಿವೆ.

ಮುಖಪುಟ ಚಿತ್ರ ಕಲಾವಿದ : ಆರ್. ಎಂ. ಹಡಪದ್

ಸಂಗ್ರಹ ಯೋಗ್ಯ ಸಂಚಿಕೆ

ಆತ್ಮೀಯರೇ,

ಮೊದಲ ನವೆಂಬರ್ ತಿಂಗಳ ಸಂವಾದ ಸಂಚಿಕೆಯನ್ನು ನೋಡಿ, 70ರ ದಶಕದ 'ಪಂಚಮ'ದ ಪುನರ್ಜನ್ಮದ ಪ್ರತೀಕವೆಂದೇ ಭಾವಿಸಿದ್ದ ನನಗೆ ಡಿಸೆಂಬರ್ ತಿಂಗಳ ಪ್ರತಿ ಕಾಣದಿದ್ದುದು ಬೇಸರವೆನಿಸಿದ್ದು ನಿಜ. ಆದರೆ ನನ್ನ ಮನದ ಆಸೆಯನ್ನು ಅರಿತುಕೊಂಡಂತೆ, ಪ್ರಕಟಗೊಂಡು ಮಾರುಕಟ್ಟೆಗೆ ಬಂದ ಡಿಸೆಂಬರ್-ಜನವರಿ ತಿಂಗಳ ಸಂಯುಕ್ತ ಸಂಚಿಕೆಯನ್ನು ಕೊಂಡು ಓದಿ ಆನಂದವಾಯಿತು.

ನಿಜ ಹೇಳಬೇಕೆಂದರೆ ಹಿಂದಿನ ಸಂಚಿಕೆಗಿಂತಲೂ ಉತ್ತಮವಾಗಿ ಮೂಡಿ ಬಂದಿರುವ ಲೇಖನಗಳು ದೀರ್ಘ ವೆನಿಸಿದರೂ, ಅಧ್ಯಯನ ಮತ್ತು ಸಂಗ್ರಹ ಯೋಗ್ಯವಾಗಿವೆ. ದಯಮಾಡಿ ಇನ್ನೆಂದೂ ಹೀಗೆ ಸತಾಯಿಸದೆ, ತಡಮಾಡದೆ 'ಸಂವಾದ' ಪ್ರಕಟಗೊಳ್ಳಲಿ ಎಂದು ಕೋರುತ್ತೇನೆ.

ಪ್ರೀತಿಯಿಂದ

ಮಹದೇವಪ್ಪ, ಚಾಮರಾಜನಗರ

ನಿಜವಾದ ನಿರೀಕ್ಷೆ

ಸಂಪಾದಕ ಬಳಗಕ್ಕೆ ಧನ್ಯವಾದಗಳು

ಒಂದು ತಿಂಗಳು ತಡವಾಗಿಯಾದರೂ ಹೆಚ್ಚು ಆಕರ್ಷಕವಾಗಿ, ಮನ ಕುಲುಕುವ ಮುಖಪುಟ ಹೊತ್ತು ಪ್ರಕಟವಾಗಿ ಕೈಸೇರಿದ ಸಂವಾದವನ್ನು ಬೆಂಗಳೂರಿನ ಸಿವಿಲ್ ಕೋರ್ಟ್ ಕ್ಯಾಂಪಸ್ಸಿನ ಅಂಗಡಿ ಯೊಂದರಲ್ಲಿ ಕೊಂಡು ಒಂದೇ ಉಸಿರಿಗೆ ಓದಿ ಮುಗಿಸಿದೆ. ನಿಜವಾಗಿಯೂ ಸಂವಾದದ 2ನೇ ಸಂಚಿಕೆ ಚೆನ್ನಾಗಿದೆ.

ಮತ್ತೆ ಮತ್ತೆ ಮರೆಯದೇ ಓದಬೇಕೆನ್ನುವ ಲೇಖನಗಳನ್ನು ಕೊಟ್ಟು ನನ್ನಂತಹ ನೂರಾರು ಓದುಗರ ನಿರೀಕ್ಷೆಯನ್ನು ನಿಜಗೊಳಿಸಿದ್ದಕ್ಕಾಗಿ ಸಂವಾದದ ಬಳಗಕ್ಕೆ ನನ್ನ ಅನಂತ ಧನ್ಯವಾದಗಳು.

ಇಂತಿ

ವೆಂಕಟೇಶ್, ಕೋಲಾರ

ವೈಚಾರಿಕ ಪ್ರಜ್ಞೆ

ವ್ಯಕ್ತಿಗತ ನಿಂದನೆ, ಸುದ್ದಿಯ ವೈಭವೀಕರಣ ಮತ್ತು ಕಲ್ಪನಾತೀತವಾದ ವರ್ಣರಂಜಿತ ಸುದ್ದಿ ಹೊಸೆಯುವುದೇ ಪತ್ರಿಕಾಧರ್ಮವೆಂಬಂತಾಗಿರುವ ಇಂದಿನ ಸಂದರ್ಭದಲ್ಲಿ ವ್ಯಕ್ತಿಯ ವೈಚಾರಿಕ ಪ್ರಜ್ಞೆಯನ್ನು ಇಮ್ಮಡಿಗೊಳಿಸುವಲ್ಲಿ ಸಂವಾದದ ಪ್ರಯತ್ನ ಯಶಸ್ವಿಯಾಗಲಿ.

ಅಭಿಮಾನಪೂರ್ವಕವಾಗಿ

ಹೆಚ್.ಆರ್. ಕೃಷ್ಣ, ಹಾಸನ

ನಿತ್ಯ ಸಂವಾದ

ಕಳೆದ ಒಂದು ದಶಕಗಳಿಂದಲೂ, ದಲಿತರ-ಹಿಂದುಳಿದವರ ಮತ್ತು ಅಶಕ್ತ ಮಹಿಳೆಯರ ಅಭ್ಯುದಯಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ಫೂರ್ತಿಧಾಮದಿಂದ ಮತ್ತು ಪ್ರಜಾವಾಣಿಯಂತಹ ಪ್ರತಿಷ್ಠಿತ ದಿನ ಪತ್ರಿಕೆಯಲ್ಲಿ ವರದಿಗಾರರಾಗಿ ಸುದ್ದಿಸಂಗಾತಿಯಂತಹ ವಿಶಿಷ್ಟ ವಾರ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಇಂದೂಧರ್ ಹೊನ್ನಾಪುರ್ ರವರ ಸಂಪಾದಕತ್ವದಿಂದ ಹೊರ ಬರುತ್ತಿರುವ 'ಸಂವಾದ' ಪತ್ರಿಕೆಯ ಆಶಯ ಮತ್ತು ಮೂಡಿಬರುತ್ತಿರುವ ಲೇಖನಗಳು ನೊಂದ ಜನರ ನೋವು ನಿವಾರಿಸುವ ನಿಟ್ಟಿನಲ್ಲಿನ ಅತ್ಯುತ್ತಮ ಪ್ರಯತ್ನ 'ಸಂವಾದ' ಎಂದಿಗೂ ಹೀಗೆಯೇ ನಮ್ಮ ನಡುವೆ ನಿತ್ಯ ಸಂವಾದಿಸುತ್ತಿರಲಿ ಎಂದು ಕೋರುವ,

ಶಿವಕುಮಾರ್ ತಳಗವಾಡಿ,

ಮಳವಳ್ಳಿ ತಾಲ್ಲೂಕು

ಲೇಖನಗಳ ಕೊರತೆ

ಅಧಿಕಾರ-ಕುರ್ಚಿ, ಸನ್ಮಾನ ಪ್ರಶಸ್ತಿಗಳಂತಹ ಮಾತು ಬಂದಾಗಲೆಲ್ಲಾ ಬಂಡಾಯ, ಪ್ರಗತಿ ಪರ ನಿಲುವು ಸುಧಾರಣಾವಾದ, ದಲಿತಪರ ಕಾಳಜಿಗಳನ್ನು ಹೊತ್ತು ಮೈಕೊಡವಿ ನಿಲ್ಲುವ ನೂರಾರು ಜನ ಬುದ್ಧಿಜೀವಿಗಳನ್ನು, ಪತ್ರಿಕೆಗಳಲ್ಲಿ ಏಣಿಸುವ ಸಂದರ್ಭ ಬಂದರೂ, ಸಂವಾದಕ್ಕಾಗಿ ಪ್ರಗತಿಯ ಉದ್ದೇಶಹೊತ್ತ ಲೇಖನಗಳ ಕೊರತೆ ಕಾಡುತ್ತಿದೆ ಎಂಬ ಸಂಪಾದಕರ ಸಂಪಾದಕೀಯ ಲೇಖನ ಓದಿ ದುಃಖವಾಯಿತು.

ಒಂದು ವಿಧದಲ್ಲಿ ಮುಖಪುಟದ ಚಿತ್ರ ಮತ್ತು ಲೇಖನಗಳಿಗಿಂತಲೂ ನೋವು ತಂದ ಸಂಗತಿ ಇದು. ಇನ್ನು ಮುಂದಾದರೂ, ನಾಡಿನ ಪ್ರಗತಿ ಶೀಲ ಲೇಖಕರು, ಚಿಂತಕರು, ಬುದ್ಧಿಜೀವಿಗಳು ವೈಚಾರಿಕ ಲೇಖನಗಳನ್ನು ಬರೆಯುವ ಮನಸ್ಸು ಮಾಡಲಿ.

ಶಾಂತವೀರಪ್ಪ, ದಾವಣಗೆರೆ

ನಿರಾಶೆ ತಂದ ಲೇಖನ

ಆತ್ಮೀಯ ಸಂಪಾದಕರೆ,

ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಿ, ಗೊಂದಲ-ಗೋಜಲುಗಳಲ್ಲಿ ಮುಳುಗಿ ವಿಚಾರಶೂನ್ಯರಾಗುತ್ತಿರುವ ಜನರನ್ನು ಗಂಭೀರ ಚರ್ಚೆಗೆ ಹಚ್ಚುವುದರ ಜತೆಗೆ ವೈಚಾರಿಕ ನೆಲೆಗಟ್ಟನ್ನು ಒದಗಿಸಿಕೊಡುವ ಮಹದಾಸೆಯೊಂದಿಗೆ 'ಸಂವಾದ' ಪತ್ರಿಕೆ ಹೊರತರಲಾಗುತ್ತಿದೆ ಎಂಬ ಮೊದಲ ಸಂಚಿಕೆಯ ನಿಮ್ಮ ಅಂತರಂಗದ ಮಾತುಗಳನ್ನು ಓದಿ ಆನಂದತುಂದಿಲನಾಗಿದ್ದ ನನಗೆ, 'ಸಂವಾದ'ದ 2ನೇ ಸಂಚಿಕೆಯ ಲೇಖನವೊಂದು ನಿರಾಶೆ ತಂದಿದೆ.

ತೀರಾ ವಿಭಿನ್ನ ಲೇಖನಗಳು ಮತ್ತು ನಾಗರೀಕ ಸಮಾಜ ನಾಚಿ ತಲೆ ತಗ್ಗಿಸುವಂತಹ ಮುಖಪುಟ್ಟ ಹೊತ್ತ ಸಂಚಿಕೆಯಲ್ಲಿ ಜಾಗತೀಕರಣದಿಂದ ದಲಿತರ ವಿಮೋಚನೆ ಎಂಬ ಬಾಲಿಷ ಲೇಖನ ಕಪ್ಪುಚುಕ್ಕೆಯಂತೆ ನನ್ನನ್ನು ಕಾಡುತ್ತಿದೆ.

ಅರ್ಥವಿಲ್ಲದ ಕಾರ್ಯಕ್ರಮಗಳು ಕೆಲಸಕ್ಕೆಬಾರದ ಯೋಜನೆಗಳ ಹೆಸರಿನಲ್ಲಿ ದಲಿತರನ್ನು ಹುರಿದು ಮುಕ್ಕುತ್ತಾ, ವಿಶ್ವ ಸರ್ಕಾರಗಳೆದುರು ಭಿಕ್ಷಾಪಾತ್ರೆ ಹಿಡಿದು ನಿಲ್ಲುತ್ತಿರುವ ಭಾರತದಲ್ಲೇ ಬದುಕುತ್ತಿರುವ ಈ ಲೇಖನದ ಲೇಖಕರಿಗೆ ನಿಜವಾಗಿಯೂ ಜಾಗತೀಕರಣವೆಂದರೇನು ಎಂಬುದೇ ತಿಳಿದಂತಿಲ್ಲ. ಜಾಗತೀಕರಣ-ಖಾಸಗೀಕರಣದ ಕಬಂಧ ಬಾಹುಗಳು ದಲಿತರು, ಹಿಂದುಳಿದವರು ಮತ್ತು ಮಹಿಳೆಯರ ಶಿಕ್ಷಣ, ಉದ್ಯೋಗ, ಮೌಖಿಕ ಕಲೆ-ಸಂಸ್ಕೃತಿಗಳ ಜತೆಗೆ ಮುಖ್ಯವಾಗಿ ಪರಂಪರಾಗತವಾಗಿ ಬದುಕಿಗೆ ಆಸರೆಯಾಗಿದ್ದ ಕುಲಕಸುಬುಗಳ ಮತ್ತು ಕೈಕೆಲಸಗಳನ್ನು ಗುಡಿಸಿಹಾಕುತ್ತಿರುವ ಸಂಧಿಗ್ಧ ಸಂದರ್ಭದಲ್ಲಿ ಸಿಕ್ಕು ನರಳುತ್ತಿರುವಾಗ ಲೇಖಕರು ಅದಾವ ಪೂರ್ವಾಗ್ರಹಕ್ಕೆ ಸಿಕ್ಕು ಈ ಲೇಖನ ಬರೆದಿದ್ದಾರೋ ಗೊತ್ತಾಗುತ್ತಿಲ್ಲ.

'ಸಂವಾದ'ಕ್ಕೆ ಇಂತಹ ಲೇಖನದ ಅಗತ್ಯವಿತ್ತೇ ಎಂಬುದು ಒಂದು ನೋವಾದರೆ, ಲೇಖಕರು ನಿಮ್ಮ ಸಂಪಾದಕೀಯ ಬಳಗದ ಒಬ್ಬ ಸದಸ್ಯರು ಎಂಬುದು ಮತ್ತೊಂದು ನೋವು. ಈ ಮಧ್ಯೆ ನನ್ನದೊಂದು ಮನವಿಯೆಂದರೆ, ಇನ್ನು ಮುಂದೆ ಇಂತಹ ಲೇಖನಗಳನ್ನು ಪ್ರಕಟಿಸುವ ಮುನ್ನ ಯೋಚಿಸಬೇಕು ಹಾಗೂ ಈ ಲೇಖನಕ್ಕೆ ತಾವು ಸ್ಪಷ್ಟನೆ ನೀಡಲೇಬೇಕು.

ಸಂವಾದ ಪತ್ರಿಕೆಯ ಬೆಳವಣಿಗೆಯ ನಿರೀಕ್ಷೆಯಲ್ಲಿ ನಿಮ್ಮ ಪ್ರೀತಿಯ

ಮೋಹನ್‌ಕುಮಾರ್ ಆರ್., ಮೈಸೂರು

'ಸಂವಾದ'ದಲ್ಲಿ ಪ್ರಕಟವಾಗುವ ಎಲ್ಲಾ ಲೇಖನಗಳ ಅಭಿಪ್ರಾಯಗಳು ಪತ್ರಿಕೆಯವೇ ಆಗಬೇಕೆಂಬುದು ನಮ್ಮ ಆಸೆಯಾದರೂ, ಕೆಲವು ಬಾರಿ ಅದಕ್ಕೆ ಹೊರತಾದ ಲೇಖನಗಳನ್ನು ಪ್ರಕಟಿಸಬಾರದೆಂದೇನೂ ಇಲ್ಲ. ಸದರಿ ಲೇಖನ ಹಿಂದಿನ ಸಂಚಿಕೆಯ ಲೇಖನವೊಂದಕ್ಕೆ ಪ್ರತಿಕ್ರಿಯೆಯಾಗಿದ್ದು ಅಲ್ಲಿನ ಅಭಿಪ್ರಾಯಗಳು 'ಸಂವಾದ'ದ ಆಶಯಗಳ ಪರವಾಗಿಲ್ಲದಿದ್ದರೂ, ಅಭಿಪ್ರಾಯ ಬೇಧವನ್ನು ಹತ್ತಿಕ್ಕಬಾರದೆಂಬ ಕಾರಣಕ್ಕಾಗಿ ಪ್ರಕಟಿಸಲಾಯಿತು. ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಲಾಗುವುದು. —ಸಂ.



ಮೇರಾ ಭಾರತ್ ಮಹಾನ್

ದಲಿತ ಪ್ರೇಮಿಗಳ ಸಜೀವ ದಹನ

ಶಹರಾನ್‌ಪುರ, ಜ. 15 : ದಲಿತ ಜನಾಂಗಕ್ಕೆ ಸೇರಿದ ಇಬ್ಬರು ಪ್ರೇಮಿಗಳನ್ನು ಚೆನ್ನಾಗಿ ಥಳಿಸಿ ಬಳಿಕ ಸಜೀವ ದಹನ ಮಾಡಿದ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಶಹರಾನ್‌ಪುರ ಜಿಲ್ಲೆಯ ತೀತರೋನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಅವರ ವಿರುದ್ಧ ಕೊಲೆ ಮೊಕದ್ದಮೆಯನ್ನು ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಗ್ಯಾನ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದರು.

(ಸಂಯುಕ್ತ ಕರ್ನಾಟಕ)

ದನದ ಮಾಂಸ ತಿನ್ನುವ ವಿದ್ಯಾರ್ಥಿಗಳಿಗೆ ಬಹಿಷ್ಕಾರ

ಟೇಕಲ್ (ಮಾಲೂರು ತಾ.) ಜ.15 : ದಲಿತ ವಿದ್ಯಾರ್ಥಿಗಳು ದನದ ಮಾಂಸ ತಿನ್ನುತ್ತಾರೆಂದು ಅವಹೇಳನ ಮಾಡಿ ಅವರನ್ನು ದೇವಾಲಯದಿಂದ ಹೊರಕ್ಕೆ ಹಾಕಿ ಬಹಿಷ್ಕರಿಸಿದ ಆಪಾದನೆಯ ಮೇಲೆ ಶಾಲಾ ಶಿಕ್ಷಕರೊಬ್ಬರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆ.

ಇಲ್ಲಿಗೆ ಸಮೀಪದ ಬನಹಳ್ಳಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳನ್ನು ಚಾಮುಂಡೇಶ್ವರಿ ಬೆಟ್ಟಕ್ಕೆ ಪ್ರವಾಸ ಕರೆದೊಯ್ಯಲಾಗಿತ್ತು. ಈ ಸಂದರ್ಭದಲ್ಲಿ ಶಿಕ್ಷಕ ಗೋಪಾಲ್‌ರವರು ದನದ ಮಾಂಸ ತಿನ್ನುವ ವಿದ್ಯಾರ್ಥಿಗಳು ದೇವಾಲಯ ಪ್ರವೇಶ ಮಾಡಬಾರದೆಂದು ತಾಕೀತು ಮಾಡಿ ಬಹಿಷ್ಕಾರ ಹಾಕಿದರೆಂದು ಆಪಾದಿಸಲಾಗಿದೆ. (ಜನವಾಹಿನಿ)

ಭೂ ವಿವಾದದಲ್ಲಿ ದಲಿತ ಮಹಿಳೆಗೆ ಬೆಂಕಿ

ಬೆಂಗಳೂರು, ಜ. 13 : ಗ್ರಾಮ ಪಂಚಾಯ್ತಿ ಅಧ್ಯಕ್ಷರೊಬ್ಬರು ನಿವೇಶನವೊಂದರ ವಿಷಯದಲ್ಲಿ ದಲಿತ ಮಹಿಳೆಯ ಜೊತೆ ಜಗಳವಾಡಿ ನಂತರ ಆ ಮಹಿಳೆಯನ್ನು ಜೀವಂತ ಸುಡಲು ಯತ್ನಿಸಿದ ಘಟನೆ ನೆಲಮಂಗಲ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸೋಲದೇವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಬಾಣಸವಾಡಿ ಗ್ರಾಮದಲ್ಲಿ ಭಾನುವಾರ ಸಂಜೆ ಈ ಘಟನೆ ನಡೆದಿದ್ದು ಗ್ರಾಮ ಪಂಚಾಯಿತಿ ಅಧ್ಯಕ್ಷ ಗೋವಿಂದಪ್ಪ ಹಾಗೂ ಲೋಕೇಶ ಎಂಬುವವರು ನಿನ್ನೆ ಸಂಜೆ ಅಮ್ಮಯ್ಯ ಎಂಬ ದಲಿತ ಮಹಿಳೆ ಮನೆಗೆ ನುಗ್ಗಿ ಮೈಮೇಲೆ ಸೀಮೆಎಣ್ಣೆ ಹಾಕಿ ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ.

ಅಮ್ಮಯ್ಯ ಸುಟ್ಟಗಾಯಗಳಿಂದ ಸದ್ಯಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೆಲಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ಮುಂದುವರದಿದೆ.

(ಸಂಯುಕ್ತ ಕರ್ನಾಟಕ)

ವಿಜಯಪುರದಲ್ಲಿ ಜೀತ ಪದ್ಧತಿ ಇನ್ನೂ ಜೀವಂತ

ಕನ್ನಡಪ್ರಭ ವಾರ್ತೆ, ಬೆಂಗಳೂರು ಜ. 16 : ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪೊಲೀಸರ ಮೂಗಿನಡಿಯಲ್ಲೇ ಜೀತಪದ್ಧತಿ ಇನ್ನೂ ಜೀವಂತವಾಗಿರುವುದು ಬೆಳಕಿಗೆ ಬಂದಿದೆ.

ದೇವನಹಳ್ಳಿಯ ಚೀಮಾಚನಹಳ್ಳಿಯ ಹರಿಜನ ಕುಟುಂಬದ ವೆಂಕಟಪ್ಪ ಎಂಬುವರು ಜೀತಪದ್ಧತಿಗೆ ಒಳಗಾಗಿ, ಮಾಲೀಕನಿಂದ ಹಲ್ಲೆಗೊಳಗಾಗಿದ್ದಾರೆ. ಜೀತ ಪದ್ಧತಿಗೆ ಸಿಕ್ಕಿಕೊಂಡಿರುವ ಪತಿಯ ಬಗ್ಗೆ ಪತ್ನಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸದ ವಿಜಯಪುರ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಮತ್ತು ಮುಖ್ಯಪೇದೆ ಲಕ್ಕಪ್ಪ ಅವರನ್ನು ತಕ್ಷಣದಿಂದ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

(ಕನ್ನಡಪ್ರಭ)

ಇಬ್ಬರು ದಲಿತ ಮಹಿಳೆಯರ ನಗ್ನ ಮೆರವಣಿಗೆ

ಖಂಡ್ವಾ, ಜ. 12 : ಪ್ರತಿಷ್ಠಿತ ಕುಟುಂಬಗಳ ಕೆಲವು ಸದಸ್ಯರು ಪಚ್ಚಾ ಗ್ರಾಮದಲ್ಲಿ ಭೂ ವಿವಾದಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯ ಓರ್ವ ಮಹಿಳೆ ಹಾಗೂ ಅವರ ಪುತ್ರಿಯನ್ನು ವಿವಸ್ತ್ರಗೊಳಿಸಿ ಮೆರವಣಿಗೆ ನಡೆಸಿದ್ದಾರೆ.

ಗುರುವಾರ ಬೆಳಿಗ್ಗೆ ನಡೆದ ಘಟನೆಯಲ್ಲಿ ಮಹಿಳೆಯ ಪತಿ ನಾರಾಯಣ ನತ್ತು ಅವರನ್ನು ಥಳಿಸಲಾಗಿದೆ ಎಂದು ಹಲ್ಲೆಗೊಳಗಾದ ಕುಟುಂಬ ಇಂದಿಲ್ಲಿ ಸುದ್ದಿಗಾರರಿಗೆ ತಿಳಿಸಿತು. ಘಟನೆಗೆ ಸಂಬಂಧಿಸಿದಂತೆ ಮಹಿಳೆ ಹಾಗೂ ಆಕೆಯ ಪುತ್ರಿಯು ಖಂಡ್ವಾ ಜಿಲ್ಲೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಮ್ಮ ಮೇಲೆ ನಾಲ್ಕು ಜನ ಯುವಕರು ಅತ್ಯಾಚಾರ ನಡೆಸಿದರು ಎಂದು ಮಹಿಳೆಯ ಪುತ್ರಿ ಸುದ್ದಿಗಾರರಿಗೆ ತಿಳಿಸಿದರು.

(ಸಂಯುಕ್ತ ಕರ್ನಾಟಕ)

ದಲಿತರ ಮೇಲೆ ಹಲ್ಲೆ

ಬೇಲೂರು, ಜನ 18 : ತಾಲ್ಲೂಕಿನ ಹೊನ್ನೇನಹಳ್ಳಿ ಗ್ರಾಮದಲ್ಲಿ ದಲಿತ ಕಾಲೋನಿಯ ಜಯಮ್ಮ, ಕುಡಿಯುವ ನೀರಿಗಾಗಿ ಬಾವಿಯಲ್ಲಿ ನೀರು ತರಲು ಹೋದಾಗ ಮೇಲ್ಜಾತಿಯ ವ್ಯಕ್ತಿಯೊಬ್ಬ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ ಪ್ರಕರಣ ವರದಿಯಾಗಿದೆ.

ಕುಮಾರ ಎನ್ನುವ ಆತ ತನ್ನ ಜಮೀನಿನ ಕೆಲಸಕ್ಕಾಗಿ ನೀರು ತರಲು ಬಂದವನು ಈ ಬಾವಿ ಸವರ್ಣೀಯರಿಗೆ ಸೇರಿದ್ದು, ನೀವು ನೀರನ್ನು ತೆಗೆದುಕೊಂಡು ಹೋಗಬಾರದೆಂದು ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದನೆಂದು ತಿಳಿದು ಬಂದಿದೆ.

(ಜನವಾಹಿನಿ)

ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ ಮಕ್ಕಳಿಗೆ ಬೆದರಿಕೆ

ಬೆಂಗಳೂರು, 15 : ದೊಡ್ಡಬಳ್ಳಾಪುರ ಸಮೀಪದ ರಾಜಾನುಕುಂಟೆ ಸರ್ಕಾರಿ ಶಾಲೆಯ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಎನ್ನಲಾದ ಶಿಕ್ಷಕ ಹಾಗೂ ಮುಖ್ಯ ಶಿಕ್ಷಕರ ವಿರುದ್ಧ ದೂರು ನೀಡಿದ ಶಾಲಾ ಮಕ್ಕಳು ಹಾಗೂ ಪೋಷಕರಿಗೆ ಅಪರಿಚಿತರು ಕೊಲೆ ಬೆದರಿಕೆ ಹಾಕುತ್ತಿದ್ದು, ಈ ಸಂಬಂಧ ಮಕ್ಕಳು ಹಾಗೂ ಪೋಷಕರು ಭೀತಿಗೊಂಡಿದ್ದಾರೆ.

ಈ ಸಂಬಂಧ ಶಾಲಾ ಮಕ್ಕಳು ಹಾಗೂ ಪೋಷಕರು ಮಾಧ್ಯಮಗಳಿಗೆ ಶಾಲೆಯಲ್ಲಿ ನಡೆಯುತ್ತಿದ್ದ ಅಸಭ್ಯ ವರ್ತನೆಯನ್ನು ಹೇಳಿದರೆನ್ನುವ ಕಾರಣಕ್ಕಾಗಿ ಕೊಲೆ ಬೆದರಿಕೆ ಹಾಕುತ್ತಿರುವ ದುಷ್ಕರ್ಮಿಗಳು ಯಾವ ಗುಂಪಿನವರು ಎಂದು ಇನ್ನೂ ತಿಳಿದುಬಂದಿಲ್ಲ.

(ಜನವಾಹಿನಿ)

ತಮಿಳರಿಗೆ ಸೇರಿದ 65 ಮನೆಗಳ ಧ್ವಂಸ

ಚಾಮರಾಜನಗರ, ಡಿ. 10 : ಕಾಡುಗಳ್ಳ ವೀರಪ್ಪನ್‌ನ ಗುಂಡಿಗೆ ಬಲಿಯಾದ ಮಾಜಿ ಸಚಿವ ನಾಗಪ್ಪನವರ ಅಭಿಮಾನಿಗಳೆನ್ನಲಾದ ಉದ್ರಿಕ್ತ ಗುಂಪೊಂದು ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಶ್ಯಾಗ್ಯಂ ಗ್ರಾಮದಲ್ಲಿ ತಮಿಳು ದಲಿತರಿಗೆ ಸೇರಿದ ಸುಮಾರು 65 ಮನೆಗಳನ್ನು ಧ್ವಂಸಗೊಳಿಸಿದ ಘಟನೆ ನಡೆದಿದೆ.

(ಸಂಯುಕ್ತ ಕರ್ನಾಟಕ)

ಮಲ ಎತ್ತಿಸಿದ ಮಹಿಳೆಗೆ ಜೈಲು ಶಿಕ್ಷೆ

ತುಮಕೂರು, ಜ. 9 : ಪರಿಶಿಷ್ಟ ಜಾತಿಯ ಬಾಲಕಿಯೊಬ್ಬಳಿಗೆ ಜಾತಿ ನಿಂದನೆ ಮಾಡಿದ್ದಲ್ಲದೆ, ಆಕೆಯ ಕೈಯಿಂದಲೇ ಮಲ ಎತ್ತಿಸಿ, ಲಂಗದೊಳಕ್ಕೆ ಹಾಕಿಸಿ ಕಳಿಸಿದ ಸವರ್ಣೀಯ ಮಹಿಳೆಯೊಬ್ಬಳಿಗೆ ಇಲ್ಲಿನ ವಿಶೇಷ ನ್ಯಾಯಾಲಯ 6 ತಿಂಗಳ ಸಾದಾ ಸಜೆ ಹಾಗೂ 1000 ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಶಿರಾ ತಾಲೂಕು ಹುಣಸೇಹಳ್ಳಿಯ ನಾರಾಯಣಪ್ಪ ಎಂಬುವರ ಪತ್ನಿ ಮಹದೇವಮ್ಮ ಎಂಬ ಆರೋಪಿಗೆ ಈ ಶಿಕ್ಷೆ ವಿಧಿಸಿರುವ 3ನೇ ಅಪರ ಜಿಲ್ಲಾ ಮತ್ತು ವಿಶೇಷ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀನಿವಾಸ ಹರೀಶ್‌ಕುಮಾರ್ ಅವರು, ಆರೋಪಿಯು ದಂಡ ಕೊಡಲು ತಪ್ಪಿದಲ್ಲಿ ಒಂದು ತಿಂಗಳ ಸಾದಾ ಸಜೆ ವಿಧಿಸಿ ತೀರ್ಪು ನೀಡಿದ್ದಾರೆ.

ಹಿನ್ನೆಲೆ : 1998ರ ಅಕ್ಟೋಬರ್ 30ರಂದು ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ಹುಣಸೇಹಳ್ಳಿ ಗ್ರಾಮದಲ್ಲಿ ಭುವನೇಶ್ವರಿ ಎಂಬ ಬಾಲಕಿಯು ರಸ್ತೆ ಪಕ್ಕದಲ್ಲಿ ಮಲ ಮೂತ್ರ ವಿಸರ್ಜನೆಗೆಂದು ಕುಳಿತಿದ್ದಾಗ, ಅಲ್ಲಿಗೆ ಬಂದ ಮಹದೇವಮ್ಮ, ಬಾಲಕಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಹೊಡೆದು ಜಾತಿನಿಂದನೆಯನ್ನೂ ಮಾಡಿದ ಜೊತೆಗೆ ಆಕೆಯಿಂದಲೇ ಮಲ ಎತ್ತಿಗೆ ಲಂಗಕ್ಕೆ ಹಾಕಿಸಿ ಕಳಿಸಿದ್ದರು.

(ಜನವಾಹಿನಿ)

ಸಮಾಜದ ನೈತಿಕತೆಗೆ ಗರಬಡಿದಿದೆ!

ಪದೇ ಪದೇ ಇಂಥವೇ ವಿಚಾರಗಳನ್ನು ಬರೆಯುವುದಕ್ಕೆ ನನಗೆ ನಿಜಕ್ಕೂ ಇಷ್ಟವಿಲ್ಲ. ಆದರೆ, ಇಂಥ ವಿಚಾರಗಳನ್ನು ಬರೆಯದೇ ಇರಲಾರದಂಥ ಅಮಾನವೀಯ ಘಟನೆಗಳು ಸದಾ ಕಣ್ಣೆದುರು ನಡೆಯುತ್ತಲೇ ಇದ್ದರೆ ಏನು ಮಾಡುವುದು?

ಮೊನ್ನೆ ದೆಹಲಿಯಲ್ಲಿ ನಡೆದದ್ದು ನನ್ನ ಮನಸ್ಸನ್ನಿನ್ನೂ ಕಲಕುತ್ತಿದೆ. ಪರಿಶಿಷ್ಟ ಜಾತಿ/ವರ್ಗದ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಡಾ|| ಬಿಜೊಯ್ ಶಂಕರ್ ಶಾಸ್ತ್ರಿ ಅವರೊಂದಿಗೆ ಚರ್ಚಿಸುತ್ತಿದ್ದಾಗ, ಉತ್ತರ ಪ್ರದೇಶದ ಸುಮಾರು ಏಳೆಂಟು ಮಂದಿ ಅಧ್ಯಕ್ಷರ ಕಚೇರಿಗೆ ಬಂದರು. ಬಂದವರೇ ಮುಂದಿದ್ದ ಕುರ್ಚಿಗಳಲ್ಲಿ ಕುಳಿತು, ನಾವು ಮಾತಾಡುತ್ತಿದ್ದುದನ್ನೂ ಲೆಕ್ಕಿಸದೆ, ಅಧ್ಯಕ್ಷರನ್ನು ಮಾತಿಗೆಳೆದರು. 'ನಮಗೆ ಹಳ್ಳಿಗಳಲ್ಲಿ ಬದುಕುವುದೇ ಕಷ್ಟವಾಗಿದೆ. ಅವರು ನಮಗೆ ಸದಾ ಕಿರುಕುಳ ಕೊಡುತ್ತಿದ್ದಾರೆ. ಅವರ ಮಾತುಗಳನ್ನು ಕೇಳಿ ಪೊಲೀಸರು ಜಿಲ್ಲಾ ಕಲೆಕ್ಟರ್‌ಗಳು ನಮಗೆ ತೊಂದರೆ ಕೊಡುತ್ತಿದ್ದಾರೆ. ನಾವು ಹಳ್ಳಿಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ದಯವಿಟ್ಟು ನಮಗೆ ರಕ್ಷಣೆ ಕೊಡಿ. ನಮ್ಮ ಶಾಸಕರು ನಿಮ್ಮನ್ನು ಕಾಣಲು ಹೇಳಿದ್ದಾರೆ' ಎಂದು ಒಬ್ಬರ ಮೇಲೊಬ್ಬರಂತೆ ಬಡಬಡಿಸತೊಡಗಿದರು.

ಶಂಕರ್ ಶಾಸ್ತ್ರಿ ಅವರು ಸೌಜನ್ಯದಿಂದಲೇ ಅವರ ಮಾತುಗಳನ್ನು ಆಲಿಸಿ, ನಿಮಗೆ ತೊಂದರೆ ಕೊಡುತ್ತಿರುವವರು ಯಾರು? ಎಂದು ಪ್ರಶ್ನಿಸಿದರು. 'ಹರಿಜನರು!' ಅಷ್ಟೇ ತೀಕ್ಷ್ಣವಾಗಿ ಅವರು ಉತ್ತರಿಸಿದರು. ಇವರುಗಳು ಮಾತನಾಡುತ್ತಿರುವುದನ್ನು ನೋಡಿ, ಇವರೆಲ್ಲ ದಲಿತ ಮುಖಂಡರು ಇರಬಹುದೇನೋ ಎಂದು ಕೊಂಡಿದ್ದ ನನಗೆ ಅವರುಗಳ ಉತ್ತರ ಕೇಳಿ ಆಘಾತವೇ ಆಯಿತು. ಶಂಕರ ಶಾಸ್ತ್ರಿ ಏನು ಹೇಳಬೇಕೆಂದು ತೋಚದೆ ಕ್ಷಣ ಕಾಲ ಚಡಪಡಿಸಿ, 'ನಿಮ್ಮ ಸಮಸ್ಯೆ ಬಗೆಹರಿಸುವುದು ನನ್ನ ಕೆಲಸವಲ್ಲ' ಎಂದು ಹೇಳಿ ಅವರನ್ನು ಸಾಗಹಾಕಿದರು.

ನಂತರ ತಿಳಿದು ಬಂದದ್ದು : ಅಲ್ಲಿ ಬಂದವರೆಲ್ಲ ಜಾಟ್ ಸಮುದಾಯದವರು. ಅವರ ಗ್ರಾಮಗಳಲ್ಲಿನ ಹರಿಜನರು ಅವರ ಭೂಮಿಗಳಲ್ಲಿ ಹಿಂದಿನಂತೆ ಹೇಳಿದ ಕೆಲಸ ಮಾಡುತ್ತಿಲ್ಲ. ಹೆದರಿಸಿದರೆ ಪೊಲೀಸ್ ಕಂಪ್ಲೇಂಟ್ ಕೊಡುತ್ತಾರೆ. ಸಂಘ ಮಾಡಿಕೊಂಡು ಪ್ರತಿಭಟನೆ ಮಾಡುತ್ತಾರೆ. ನೈತಿಕವಾಗಿ ಹೆದರಿರುವ ಭೂಮಾಲೀಕ ವರ್ಗ ದಲಿತರ ಮೇಲೆ ಸಾಂಘಿಕವಾಗಿ ತಿರುಗಿ ಬಿದ್ದಿದ್ದಾರೆ. ದಲಿತರ ವಿರುದ್ಧ ಸಂಘಗಳನ್ನು ಕಟ್ಟಿಕೊಂಡು ಅಧಿಕಾರಿಗಳು ಮತ್ತು ಪೊಲೀಸರಿಗೆ ಬೆದರಿಕೆ ಒಡ್ಡುತ್ತಿದ್ದಾರೆ.

ಈ ವಿವರಣೆಯನ್ನು ಕೇಳಿ ನನಗೇನೂ ಆಶ್ಚರ್ಯವಾಗಲಿಲ್ಲ. ಆದರೆ, ದಲಿತರ ಹಿತರಕ್ಷಣೆಗಾಗಿ ಇರುವ ಆಯೋಗದೆದುರು ದಲಿತರಿಂದ ರಕ್ಷಣೆ ಕೊಡಿಸಿ ಎಂದು ಕೇಳುವ ಭಂಡತನ ನನ್ನನ್ನು ಕಾಡಿಸಿತು. ಇದು ಕರ್ನಾಟಕಕ್ಕೇನು ಹೊಸದಲ್ಲ. ಕಳೆದ ಹತ್ತಾರು ವರ್ಷಗಳಿಂದ ನಿರಂತರವಾಗಿ ಇಂಥ ಭಂಡತನ ಬೆಳೆಯುತ್ತಲೇ ಇದೆ. ದಲಿತರ ಹಿತರಕ್ಷಣೆಗಾಗಿ ಇರುವ ಎಲ್ಲಾ ಕಾನೂನುಗಳನ್ನು ತಿರುಚಿ ಆ ಕಾನೂನುಗಳೇ ಅವರಿಗೆ ಮುಳುವಾಗುವಂತೆ ಇಲ್ಲಿನ ಆಡಳಿತಶಾಹಿ ಕೆಲಸ ಮಾಡುತ್ತಿದೆ. ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ಕೂಡ ಒಂದು ಅಘೋಷಿತ ಒಪ್ಪಂದವಾಗಿರುವಂತೆ ಎಂಥ ಅಪರಾಧಿಗೂ ಜಾಮೀನಿನ ಬಿಡುಗಡೆ ಸಿಗುತ್ತಿದೆ. ಇಡೀ ಪೊಲೀಸ್ ಇಲಾಖೆ ಮೇಲ್ಜಾತಿಯವರ ಏಜೆಂಟನಂತೆ ಕೆಲಸ ಮಾಡುತ್ತಿದೆ. (ಅಲ್ಲೊಂದು ಇಲ್ಲೊಂದು ಅಪವಾದ ಇರಬಹುದು). ದಲಿತರ ದೌರ್ಜನ್ಯದ ವಿರುದ್ಧ ಮೇಲ್ಜಾತಿ ಜನರ ಪ್ರತಿಭಟನೆಗಳು ಅಲ್ಲಲ್ಲಿ ನಡೆಯುತ್ತಿವೆ. ಅದಕ್ಕಾಗಿ 'ಯುವವೇದಿಕೆ'ಗಳು 'ರಕ್ಷಣ ದಳ'ಗಳು, 'ಸೇನೆ'ಗಳು ಹುಟ್ಟಿಕೊಳ್ಳುತ್ತಿವೆ.



ಭಾರತೀಯ ಮನಸ್ಸು ಎಷ್ಟು ಅನೈತಿಕ ಹಾದಿ ಹಿಡಿದಿದೆ ಎಂದರೆ, ಇಲ್ಲಿ ಮೇಲ್ಜಾತಿಯವನೊಬ್ಬ ದಲಿತ ಹೆಣ್ಣು ಮಗಳ ಮಾನಭಂಗ ಮಾಡಿದರೆ, ಅದು ವೈಯಕ್ತಿಕ ಮಾತ್ರವಾಗಿ, ಮಾನಭಂಗ ಮಾಡಿದವನ ಜಾತಿ ವಿರುದ್ಧದ ದಂಗೆಗೆ ಕಾರಣವಾಗುವುದಿಲ್ಲ. ಆದರೆ ದಲಿತ ಹುಡುಗನೊಬ್ಬ ಮೇಲ್ಜಾತಿ ಹುಡುಗಿಯನ್ನು ಪ್ರೀತಿಸಿದರೆ, ಒಂದು ಪ್ರೇಮ ಪತ್ರ ಬರೆದರೂ ಇಡೀ ದಲಿತ ಕೇರಿಗಳು ನಾಶವಾಗುತ್ತವೆ! ಮುಸ್ಲಿಂ ಯುವಕನೊಬ್ಬ ಕಳ್ಳತನ ಮಾಡಿದರೆ ಇಡೀ ಮುಸ್ಲಿಮರೇ ಕಳ್ಳರಾಗುತ್ತಾರೆ! ಬ್ರಾಹ್ಮಣ ಅಧಿಕಾರಿಯೊಬ್ಬ ದೇಶದ ರಹಸ್ಯವನ್ನೇ ಮಾರಿದರೂ ಅದು ಅವನೊಬ್ಬನಿಗೆ ಮಾತ್ರ ಸೀಮಿತವಾಗುತ್ತದೆ!

ಇಡೀ ದೇಶದಲ್ಲೀಗ ಇಂಥ ಘಟನೆಗಳು ಹೆಚ್ಚುತ್ತಿವೆ. ಸಾಮಾಜಿಕ ಅಸಮಾನತೆಗಳನ್ನು ಮೂರ್ತಗೊಳಿಸುವ ವ್ಯವಸ್ಥಿತ ಪಿತೂರಿ ಸಾಂಗವಾಗಿ ನಡೆಯುತ್ತಿದೆ. ಜಾಗತೀಕರಣದ ಆಗಮನದೊಂದಿಗೆ ಮೂಢನಂಬಿಕೆ, ಜಾತಿ, ಧರ್ಮ, ದೇವರುಗಳ ಅವ್ಯಾಹತ ಆಕ್ರಮಣ ಮರುಕಳಿಸುತ್ತಿದೆ. ತೆರೆಮರೆಯಲ್ಲಿ ನಡೆಯುತ್ತಿದ್ದ 'ಜಾತೀಯತೆ' ಇಂದು ಬಹಿರಂಗವಾಗಿಯೇ ಸ್ಫೋಟಗೊಳ್ಳತೊಡಗಿದೆ. ಆಯಾ ಜಾತಿಯ ರಾಜಕಾರಣಿಗಳು ಆಯಾ ಜಾತಿಯ ಸಂಘಟನೆಗಳೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು, ಸಾಹಿತಿ-ಕಲಾವಿದರೂ ಇಂಥ ಕೆಲಸಕ್ಕೆ ಮುಂದಾಗುತ್ತಿದ್ದಾರೆ. ಕೋಮುವಾದ-ಜಾತಿವಾದಗಳೇ ಸಾಮಾಜಿಕ ಮೌಲ್ಯಗಳಾಗುತ್ತಿವೆ. ಇಡೀ ಸಮಾಜ ಅನೈತಿಕತೆಗೆ ಒಡ್ಡಿಕೊಳ್ಳುತ್ತಿದೆ.

ಸಮಾಜದ ನೈತಿಕತೆಗೆ ಗರಬಡಿದ ಈ ಕ್ಷಣದಲ್ಲಿ ಎಲ್ಲರೂ ಅಸಹಾಯಕರಾಗುತ್ತಿದ್ದಾರೆ. ಎಲ್ಲ ಸಂಘಟನೆಗಳು ಶಕ್ತಿಹೀನವಾಗುತ್ತಿವೆ. ಬುದ್ಧಿಜೀವಿಗಳು-ಹೋರಾಟಗಾರರು ಅತಂತ್ರರಾಗಿದ್ದಾರೆ. ಕೆಲವರು ಅನುಕೂಲ ಮೌನಿಗಳಾದರೆ, ಮತ್ತೆ ಕೆಲವರು ವಸ್ತುಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳಲು ಸಮಯ ಹುಡುಕುತ್ತಿದ್ದಾರೆ. ಅಧಿಕಾರಸ್ಥರ ಅಂತಸಾಕ್ಷಿಯನ್ನು ಕೆಣಕುತ್ತಿದ್ದ ಜಾಗೃತ ಮನಸ್ಸು ಜಡ್ಡುಗಟ್ಟಿ ಹೋಗಿದೆ. ಇಡೀ ಜನಶಕ್ತಿಯೇ ಜನದ್ರೋಹಿಗಳೆದುರು ಮಂಡಿ ಊರಿ ಕುಳಿತಿದೆ.

ಭಂಡತನ-ಅನೈತಿಕತೆ ಯಾವುದೇ ಸಮಾಜದಲ್ಲಿ ಮೌಲ್ಯಗಳಾದರೆ ಅಂಥ ಸಮಾಜವನ್ನು ನಾಗರಿಕ ಸಮಾಜವೆಂದು ಕರೆಯಲಾಗುವುದಿಲ್ಲ. ಮಾನವ ಪರವಾದ ಯಾವ ಧರ್ಮ-ದೇವರುಗಳೂ ಇದನ್ನು ಪ್ರೋತ್ಸಾಹಿಸುವುದಿಲ್ಲ. ಸಮಾಜ ವಂಚಕರ, ಜನದ್ರೋಹಿಗಳ ಆಟ ಸದಾ ಸಮಾಜದಲ್ಲಿ ನಡೆಯುವುದಿಲ್ಲ ಎಂಬುದನ್ನು ಬುದ್ಧ-ಬಸವಾದಿಗಳು ಸಾರಿ ಹೇಳಿದ್ದಾರೆ. ನಮ್ಮೊಳಗಿನ ಸಜ್ಜನರು ತಮ್ಮ ಮೌನವನ್ನೀಗ ಮುರಿಯಬೇಕಾಗಿದೆ. ಜನಮನದ ಸಾಕ್ಷಿ ಪ್ರಜ್ಞೆಯನ್ನು ಸಾಕಾರಗೊಳಿಸುವ ಕೆಲಸವನ್ನು ಅವರುಗಳು ಆರಂಭಿಸಬೇಕಾಗಿದೆ. ಬಹಿರಂಗ ಹೋರಾಟಕ್ಕೆ ಬೀದಿಗೆ ಇಳಿಯಬೇಕಾಗಿದೆ.

ಆಗ ಮಾತ್ರ ಉಡುಗಿಹೋಗಿರುವ ಜನ ಶಕ್ತಿಗೆ ಮರು ಜೀವ ತುಂಬ ಬಹುದು!

○ ಇಂದೂಧರ ಹೊನ್ನಾಪುರ

ಸಂಪಾದಕ

ಬ್ರಾಹ್ಮಣ್ಯದ ಗುಲಾಮರಾಗುತ್ತಿರುವ ಹಿಂದುಳಿದ ವರ್ಗ



> ಓಬಿಸಿಗಳು ಬೌದ್ಧಧರ್ಮ ಅಥವಾ ಯಾವುದೇ ಇತರ ಧರ್ಮಕ್ಕೆ ಚಲಿಸಬೇಕಲ್ಲದೆ ಹಿಂದೂ ಧರ್ಮದಲ್ಲಿ ಉಳಿಯಬಾರದು. ಅವರು ಎಲ್ಲಿಯತನಕ ಹಿಂದೂ ಧರ್ಮದ ನೆಲೆಯಲ್ಲಿ ಕಾರ್ಯ ಪ್ರವೃತ್ತರಾಗುತ್ತಾರೋ ಅಲ್ಲಿಯವರೆಗೆ ಬ್ರಾಹ್ಮಣ್ಯದ ಗುಲಾಮರಾಗಿಯೇ ಉಳಿಯುತ್ತಾರೆ. ಅಲ್ಲದೆ ಅವರು ದಲಿತರ ಚಾರಿತ್ರಿಕ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಆದ್ದರಿಂದ, ದಲಿತರ ಮತ್ತು ಓಬಿಸಿಗಳ ಐಕ್ಯತೆಯು, ಇದರಿಂದ ಮಾತ್ರ ಸಾಧ್ಯವಾಗಬಹುದು.
>
> ಮೂಲ : ಕಾಂಚಾ ಐಲಯ್ಯ
>
> ಅನು : ವಿದ್ಯಾ ಕೆ.

ಗ್ರಾಮೀಣ ಪ್ರದೇಶಗಳಲ್ಲಿ ಓಬಿಸಿಗಳು (ಹಿಂದುಳಿದ ಜಾತಿಗಳು) ಭೂಮಾಲೀಕರಾಗಿ ಹೊರಹೊಮ್ಮುತ್ತಿರುವಾಗ, ದಲಿತರು ಬಹುಸಂಖ್ಯೆಯಲ್ಲಿ ಬ್ರಾಹ್ಮಣ ಮತ್ತು ಹೊಸ ಕ್ಷತ್ರಿಯ ಜಾತಿ ಹಿಂದೂಗಳ ಬಳಿಯಲ್ಲಿ ಕೃಷಿಕಾರ್ಮಿಕರಾಗಿ ಉಳಿದುಕೊಂಡು, ನಗರದಲ್ಲಿ ಉದ್ಯೋಗವನ್ನು ಹುಡುಕಲು ಆರಂಭಿಸಿದರು ಮತ್ತು ವ್ಯವಹಾರ ಮತ್ತು ಕೈಗಾರಿಕಾ ಉದ್ಯಮಗಳಲ್ಲಿ ಈಗಲೂ ಹುಡುಕುತ್ತಿದ್ದಾರೆ. ಆದರೆ, ಹಳ್ಳಿಗಳಲ್ಲಿ ಒಂದು ಹೊಸ ಸಾಮಾಜಿಕ ಸಂಘರ್ಷ ಉದಯಿಸುತ್ತಿದೆ. ರಾಜ್ಯಾಂಗ ವಿಭಾಗದಲ್ಲಿ, ದಲಿತ ಅಧಿಕಾರಿಗಳ ಸಂಖ್ಯೆ ದೊಡ್ಡದಿದೆ; ಆದರೆ ಹಿಂದುಳಿದ ಜಾತಿಗಳು ಉನ್ನತ ಆಡಳಿತದಲ್ಲಿ ನೌಕರಶಾಹಿಯ ಆಧಾರ ಇಲ್ಲದವರಾಗಿದ್ದಾರೆ. ಇದನ್ನು ಸರಿದೂಗಿಸಲು, ಗ್ರಾಮಮಟ್ಟದಲ್ಲಿ ಹಿಂದುಳಿದ ಜಾತಿ ಶ್ರೀಮಂತರು ದಲಿತ ವಿರೋಧಿ ಭಾಷೆಯನ್ನು ಪದೇ ಪದೇ ಬಳಸುತ್ತಿದ್ದಾರೆ. ಮತ್ತು ಜಾಗೃತಗೊಂಡ ದಲಿತ ಯುವ ಜನರು ಅಷ್ಟೇ ಪ್ರಬಲವಾಗಿ ಹಿಂದುಳಿದ ಜಾತಿ ವಿರೋಧಿ ಭಾಷೆಯನ್ನು ಶಕ್ತಿಯುತವಾಗಿ ಬಳಸುತ್ತಾರೆ.

ಈ ಆರ್ಥಿಕ ಪ್ರಕ್ರಿಯೆಯ ಜೊತೆಗೆ, ಹಿಂದುಳಿದ ಜಾತಿಗಳ ಅಸ್ಪೃಶ್ಯತಾ ಆಚರಣೆಯು ದಲಿತರಲ್ಲಿ ದ್ವೇಷವನ್ನು ಹುಟ್ಟಿಸುತ್ತದೆ. ಏಕೆಂದರೆ ಅವರೇ ತಕ್ಷಣದ ಹಿಂಸಕರು, ಅಸ್ಪೃಶ್ಯತೆಯ ಬ್ರಾಹ್ಮಣ್ಯದ ಸೈದ್ಧಾಂತಿಕವಾದ ಗಂಟು ಮೂಟೆ. ಇದು ಸಾಮಾಜಿಕ ಬಿಕ್ಕಟ್ಟನ್ನು ಪೋಷಿಸುತ್ತದೆ. ದಲಿತರು ಅಸ್ಪೃಶ್ಯತಾ ಆಚರಣೆಯನ್ನು ದ್ವೇಷಿಸುತ್ತಾರಲ್ಲದೆ, ಈಗ ಸಂಕಲ್ಪಬದ್ಧರಾಗಿ ಅದನ್ನು ವಿರೋಧಿಸುತ್ತಿದ್ದಾರೆ.

ಬ್ರಾಹ್ಮಣ್ಯವು ಮತ್ತೊಂದು ಉಪಾಯವನ್ನು ಬಳಸುತ್ತಿದೆ. ಇದು ಓಬಿಸಿಗಳಿಗೆ ಹಿಂದೂ ದೇವಾಲಯಗಳಿಗೆ ಪ್ರವೇಶಿಸಲು ಮತ್ತು ಹಿಂದೂ ದೇವ, ದೇವತೆಗಳನ್ನು ಪೂಜಿಸಲು ಅವಕಾಶ ಮಾಡಿಕೊಡುತ್ತಿದೆ. ಆದರೆ ದಲಿತರು ಇವತ್ತಿನವರೆಗೂ ಯಾವುದೇ ಗ್ರಾಮೀಣ ದೇವಾಲಯದಲ್ಲಿ ಹಿಂದೂ ದೇವತೆಗಳನ್ನು ಪೂಜಿಸಲಾರರು. ಈ ಕಾರಣದಿಂದಾಗಿ, ಹೆಚ್ಚಿನ ದಕ್ಷಿಣ ಭಾರತದ ಹಳ್ಳಿಗಳಲ್ಲಿ, ಎಸ್‌ಸಿಗಳು ಕ್ರೈಸ್ತಧರ್ಮದ ಕಡೆಗೆ ಚಲಿಸುತ್ತಿದ್ದಾರೆ. ಓಬಿಸಿಗಳಿಗೆ ಪೂರ್ಣ ಪ್ರಮಾಣದ ಧಾರ್ಮಿಕ ಹಕ್ಕುಗಳನ್ನು ನಿರಾಕರಿಸಲಾಗಿದ್ದರೂ ಸಹ, ಬ್ರಾಹ್ಮಣರ ಆಧ್ಯಾತ್ಮಿಕ ಗುಲಾಮರಂತೆ ಹಿಂದೂಧರ್ಮಕ್ಕೆ ಜೋತು ಬೀಳುತ್ತಿದ್ದಾರೆ.

ಈ ಎಲ್ಲ ಅಂಶಗಳಲ್ಲಿ ದಲಿತರು ಪ್ರಗತಿಪರ ಮಾರ್ಗದಲ್ಲಿದ್ದಾರೆ. ಓಬಿಸಿಗಳು ಜೀವನ ವಿರೋಧಿಯಾದ ಬ್ರಾಹ್ಮನಿಕಲ್ ಮಾದರಿಯಲ್ಲಿ ಚಲಿಸಿ, ಹಿಮ್ಮುಖ ಚಲನೆಯಲ್ಲಿದ್ದಾರೆ. ಓಬಿಸಿಗಳಲ್ಲಿ ನಾಗರಿಕ ಸಮಾಜ ಮಟ್ಟದಲ್ಲಿ ಕಾಣುವ ಒಂದು ಬದಲಾವಣೆಯೆಂದರೆ ಅವರು ತಮ್ಮ ಪಾರಂಪರಿಕ ಜಾತಿ ಬದ್ಧ ಕಸುಬುಗಳನ್ನು ಬಿಟ್ಟು ನಿಧಾನವಾಗಿ ಕೃಷಿಗೆ ಪಲ್ಲಟಗೊಳ್ಳುತ್ತಿರುವುದು. ಕೆಲವು ರಾಜ್ಯಗಳಲ್ಲಿ, ಒಂದು ಸಣ್ಣ ವರ್ಗವು 'ಮೇಲಿನ' ಜಾತಿಗಳೊಂದಿಗೆ ಅಧಿಕಾರ ಹಂಚಿಕೊಳ್ಳುತ್ತಿದೆ.

ಬ್ರಾಹ್ಮಣ್ಯವು ತನ್ನ ಚಾರಿತ್ರಿಕ ಸಂದರ್ಭದಲ್ಲಿ ಶೂದ್ರ ಅಸ್ತಿತ್ವದ ಮೂಲಕ ಕಟ್ಟಿಕೊಂಡಿರುವ ಎಲ್ಲ ಸಂಕೋಲೆಗಳಿಂದ ಬಿಡಿಸಿಕೊಳ್ಳಲು ಇವತ್ತಿಗೂ ಓಬಿಸಿಗಳು ಒಂದು ಸಾವಯವತೆಯ ಬೌದ್ಧಿಕ ಶಕ್ತಿಯನ್ನು ಉತ್ಪಾದಿಸಿಲ್ಲ. ಕನಿಷ್ಠವೆಂದರೂ ಕೆಲವು ಕ್ಷೇತ್ರಗಳಲ್ಲಿ, ದಲಿತರು ಮತ್ತು ಓಬಿಸಿಗಳ ನಡುವಣ ಘರ್ಷಣೆಯು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಅನಿವಾರ್ಯ. ಓಬಿಸಿಗಳು ದ್ವಿಜರ ವಿರುದ್ಧ ಎದ್ದುನಿಲ್ಲುತ್ತಾರಾದರೂ, ಆದ್ಯಾತ್ಮಿಕವಾಗಿ ಸಂಕೋಲೆಯಲ್ಲಿ ಮುಂದುವರಿಯುತ್ತಿದ್ದಾರೆ. ಮತ್ತೊಂದೆಡೆಯಲ್ಲಿ, ದಲಿತರು ಅಸ್ಪೃಶ್ಯತೆಯ ಕಾರಣದಿಂದ ಅಗತ್ಯವಾಗಿ ಹಿಂದೂ ಅಲ್ಲದ ಸಾಮಾಜಿಕ ನೆಲೆಯಿಂದ ಕ್ರಿಯಾಶೀಲರಾಗಿದ್ದಾರಲ್ಲದೆ ಹಿಂದೂ ವಿರೋಧಿ ನೆಲೆಯಿಂದಲೂ ಚಲನಶೀಲರಾಗಿದ್ದಾರೆ.

ಓಬಿಸಿಗಳು ಸಹ 'ನಾನೇಕೆ ಹಿಂದೂವಲ್ಲ' ಎಂಬ ಕೃತಿಯಲ್ಲಿ ನಾನು ಪ್ರತಿಪಾದಿಸಿದಂತೆ, ಹಿಂದೂಗಳಲ್ಲ. ಆದರೆ ಅವರು, ಅಖಿಲ ಭಾರತೀಯ ಮಟ್ಟದಲ್ಲಿ ಹಿಂದೂ-ವಿರೋಧಿ ಪ್ರಜ್ಞೆಯನ್ನು ಪಡೆದುಕೊಂಡಿಲ್ಲ. ಆದ್ದರಿಂದ ಓಬಿಸಿಗಳು ಮತ್ತು ದಲಿತರ ನಡುವಣ ಪರಸ್ಪರ ಸಂಬಂಧದಲ್ಲಿ ಘರ್ಷಣೆಯು ತುಂಬಿದೆ. ಈ ಪರಿಸ್ಥಿತಿಯಿಂದ ಬ್ರಾಹ್ಮಣರು-ಬನಿಯಾಗಳಿಗೆ ಸಂತೋಷವಾಗಿದೆ. ವಾಸ್ತವವಾಗಿ, ಅವರಿಗೆ ಈ ದೃಶ್ಯಾವಳಿಯು ಮತ್ತಷ್ಟು ಜಗಳ, ಕೊಲೆಗಳು ಮತ್ತು ಲೂಟಿಯನ್ನು ಮುಂದುವರಿಸಬೇಕಿದೆ. ಎಲ್ಲಿಯವರೆಗೆ ಈ ಘರ್ಷಣೆಯು ಕ್ರಿಯಾಶೀಲವಾಗಿರುತ್ತದೋ ಅಲ್ಲಿಯವರೆಗೆ ಜಾತಿ ಪದ್ಧತಿಯು ಹಾಗೆ ಮುಂದುವರಿಯುತ್ತದೆ ಎಂದು ಅವರು ಯೋಚಿಸುತ್ತಾರೆ. ಇದನ್ನು ಖಚಿತಪಡಿಸಿಕೊಳ್ಳಲು ಜಾತಿ ಪದ್ಧತಿಯನ್ನು ಸೃಷ್ಟಿಸಲಾಗಿದೆ.

ತಿಳಿಗೇಡಿ ಶೂದ್ರರು

ಚಾರಿತ್ರಿಕವಾಗಿ ಓಬಿಸಿಗಳು ಶೂದ್ರರಾಗಿದ್ದಾರೆ. ಋಗ್ವೇದ ಮತ್ತು ಭಗವದ್ಗೀತೆ ಮುಂತಾದ ಹಿಂದೂ ಗ್ರಂಥಗಳ ಪ್ರಕಾರ, ಅವರು 'ಪಾದಗಳಿಂದ ಜನಿಸಿದವರು' (ಬ್ರಾಹ್ಮಣ ಬ್ರಹ್ಮನ ಪಾದಗಳಿಂದ ಜನಿಸಿದ್ದು) ಮತ್ತು ದಲಿತರು 'ಜನಿಸದವರು' ಬ್ರಹ್ಮನು ದೇವರಲ್ಲ. ಈತ ಆರ್ಯ ಕೊಲೆಗಾರ, ಇವನು ಪ್ರಾಚೀನ ಸಂದರ್ಭದಲ್ಲಿ ದ್ರಾವಿಡ ಸಮುದಾಯಗಳನ್ನು ಅಕ್ರಮಣಮಾಡಿದವನು. ಮಹಾತ್ಮ ಪುಲೆ ಮತ್ತು ಪೆರಿಯಾರ್ ಹೇಳುವಂತೆ, ಶೂದ್ರರು ತಿಳಿಗೇಡಿಗಳು ಯಾಕೆಂದರೆ ಅವರು ಪಾದಗಳಿಂದ ಜನಿಸಿದವರು ಎಂದು ಹೇಳಿದ್ದರೂ ಅವರು ಅದೇ ಬ್ರಹ್ಮನನ್ನು ಮತ್ತು ಇತರ ಹಿಂದೂ ದೇವತೆಗಳನ್ನು ಪೂಜಿಸುತ್ತಾರೆ.

ಮತ್ತೂ ಹೇಳುವುದಾದರೆ, ದಲಿತರು, ಹಿಂದೂ ದೇವತೆಗಳ ಬಗ್ಗೆ ಗೌರವವನ್ನು ಹೊಂದಿಲ್ಲ. ಯಾಕೆಂದರೆ ಅವರು ಆ ಕೊಳಕು ಪಾದಗಳಿಂದ ಜನಿಸಿಲ್ಲ ಎಂದು ಹೇಳಲಾಗುತ್ತಿದೆ. ಈಗ ಅಂಬೇಡ್ಕರ್‌ರವರು ದಲಿತರ

ದೈವ, ಏಕೆಂದರೆ ಅಂಬೇಡ್ಕರರು ಅವರಿಗೆ ಬೌದ್ಧ ಪಥವನ್ನು ತೋರಿಸಿದ್ದಾರೆ. ಆದ್ದರಿಂದ ಅಂಬೇಡ್ಕರ್‌ರವರು ಸಾಮಾಜಿಕ ವಿಮೋಚಕರಾಗಿ ಕ್ರಿಯಾಶೀಲರಾಗಿದ್ದರಿಂದ, ದಲಿತರು ಬಹುಸಂಖ್ಯೆಯಲ್ಲಿ ಕ್ರೈಸ್ತ ಮತ್ತು ಬೌದ್ಧ ಧರ್ಮದ ಕಡೆಗೆ ಸಾಗುತ್ತಿದ್ದಾರೆ.

ಪೆರಿಯಾರರು ನಾಸ್ತಿಕತೆಯ ಬಗ್ಗೆ ಪ್ರತಿಪಾದಿಸಿದ್ದರು. ಆದರೆ ತಮಿಳು ದೇಶದ ಓಬಿಸಿಗಳು ಇದುವರೆಗೂ ಒಳ್ಳೆಯ ನಾಸ್ತಿಕರೂ ಆಗಿಲ್ಲ, ಅಥವಾ ಜಗತ್ತಿನಾದ್ಯಂತ ಸಾರ್ವತ್ರಿಕವಾಗಿ ಗೌರವಿಸಲ್ಪಡುವ ಮತ್ತು ಆಧ್ಯಾತ್ಮಿಕವಾಗಿ ಪ್ರಜಾಸತ್ತಾತ್ಮಕವಾದ ಕ್ರೈಸ್ತ ಅಥವಾ ಬೌದ್ಧ ಧರ್ಮಗಳನ್ನು ಒಪ್ಪಿಕೊಂಡಿಲ್ಲ. ತಮಿಳುನಾಡಿನಲ್ಲಿ ರಾಜಕೀಯ ಅಧಿಕಾರವು ಅಧಿಕವಾಗಿ ಶೂದ್ರರ ಕೈಯ್ಯಲ್ಲಿದ್ದರೂ, ಇದುವರೆಗೆ ಆಚರಣಾ ಜಗತ್ತು ಬ್ರಾಹ್ಮಣರ ಕೈಯಲ್ಲೇ ಇರುವುದರಿಂದ ಓಬಿಸಿಗಳು, ಹಿಂದೂ ದೇವತೆಗಳು ಮತ್ತು ಬ್ರಾಹ್ಮಣರ ಏಜೆಂಟರಂತೆ ಕೆಲಸಮಾಡುತ್ತಿದ್ದಾರೆ. ಹಿಂದೂ ಧರ್ಮದ ವಿರುದ್ಧ ಬಹು ದೊಡ್ಡ ಆಂದೋಲನ ನಡೆಸಿದ ಶೂದ್ರರು, ಅದರಲ್ಲೂ ಓಬಿಸಿಗಳು ತಮಿಳುನಾಡಿನಲ್ಲಿ ದಲಿತರು ಮತ್ತು ಓಬಿಸಿಗಳ ನಡುವಣ ಘರ್ಷಣೆಯನ್ನು ಕಡಿಮೆಮಾಡಲು ಮತ್ತಷ್ಟು ಸಾಗಬೇಕಿದೆ.

ಓಬಿಸಿಗಳು ಬೌದ್ಧಧರ್ಮ ಅಥವಾ ಯಾವುದೇ ಇತರ ಧರ್ಮಕ್ಕೆ ಚಲಿಸಬೆಕಲ್ಲದೆ ಹಿಂದೂ ಧರ್ಮದಲ್ಲಿ ಉಳಿಯಬಾರದು. ಅವರು ಎಲ್ಲಿಯತನಕ ಹಿಂದೂ ಧರ್ಮದ ನೆಲೆಯಲ್ಲಿ ಕಾರ್ಯ ಪ್ರವೃತ್ತರಾಗುತ್ತಾರೋ ಅಲ್ಲಿಯವರೆಗೆ ಬ್ರಾಹ್ಮಣ್ಯದ ಗುಲಾಮರಾಗಿಯೇ ಉಳಿಯುತ್ತಾರೆ. ಅಲ್ಲದೆ ಅವರು ದಲಿತರ ಚಾರಿತ್ರಿಕ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಆದ್ದರಿಂದ, ದಲಿತರ ಮತ್ತು ಓಬಿಸಿಗಳ ಐಕ್ಯತೆಯು, ಒಂದರಿಂದ ಮಾತ್ರ ಸಾಧ್ಯವಾಗಬಹುದು. ಅಂದರೆ ಅವರು ಒಂದೇ ಧರ್ಮದ ನೆಲೆಯಲ್ಲಿ ಬದುಕಿನ ಎಲ್ಲ ಸಂಗತಿಗಳನ್ನು ಹಂಚಿಕೊಳ್ಳುವುದರಿಂದ ಅದು ಸಾಧ್ಯವಾಗುತ್ತದೆ.

ದಲಿತ ಬುದ್ಧಿಜೀವಿಗಳ ಒಂದು ದೊಡ್ಡ ವರ್ಗವು ಮೀಸಲಾತಿ ಪ್ರಶ್ನೆ ಮತ್ತು ರಾಜಕೀಯ ಅಧಿಕಾರಕ್ಕಾಗಿ ಕೆಲಸ ಮಾಡುತ್ತಿದೆ. ಅಂಬೇಡ್ಕರ್‌ರವರು ಸಾಮಾಜಿಕ ಕ್ರಾಂತಿಯ ಬಹುದೊಡ್ಡ ಕಾರ್ಯಸೂಚಿಯನ್ನು ಅವರಿಗೆ ನೀಡಿದ್ದಾರೆ. ಉದಾಹರಣೆಗೆ, ಯಹೂದ್ಯರಿಗೆ ಒಂದು ರಾಷ್ಟ್ರವಾಗಿ ಗುಲಾಮಗಿರಿಯ ಸಂಕೋಲೆಯಿಂದ ವಿಮುಕ್ತಿಗೊಳಿಸುವ ಒಂದು ದೊಡ್ಡ ಜವಾಬ್ದಾರಿಯನ್ನು ಏಸುಕ್ರಿಸ್ತನು ಅವರಿಗೆ ನೀಡಿದ್ದ. ಯಹೂದ್ಯರು ಆ ಪಾತ್ರವನ್ನು ವಹಿಸಿದ್ದರು. ಅವರು ಶ್ರಮಿಕರಾಗಿ, ಚಮ್ಮಾರರಾಗಿ, ಬಡಗಿಗಳಾಗಿ, ಕುರಿಗಾಹಿಗಳಾಗಿ, ಕ್ಷೌರಿಕರಾಗಿ, ಗುಣಪಡಿಸುವವರಾಗಿ ಕೆಲಸ ಮಾಡಿದ್ದಾರಲ್ಲದೆ, ಜಗತ್ತಿನ ಅತಿಶ್ರೇಷ್ಠ ಬುದ್ಧಿಜೀವಿಗಳನ್ನು ಉತ್ಪಾದಿಸಿದ್ದರು. ಐನ್‌ಸ್ಟೀನ್, ನ್ಯೂಟನ್, ಡಾರ್ವಿನ್, ಮಾರ್ಕ್ಸ್ ಈ ಸಮುದಾಯದಿಂದಲೇ ಬಂದವರು. ಇದು ಜಗತ್ತನ್ನು ಗುಲಾಮಗಿರಿಯಿಂದ ವಿಮೋಚಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿತ್ತು.

ಭಾರತದ ದಲಿತರಿಗೆ ಅಂಬೇಡ್ಕರ್‌ರವರು ಇಂತಹದೇ ಪಾತ್ರವನ್ನು ವಹಿಸಿರುವರು. ದುರಂತವೆಂದರೆ, ಪ್ರತಿಯೊಬ್ಬ ಯುವ ದಲಿತ ಬುದ್ಧಿಜೀವಿಯ ಮಹತ್ವಾಕಾಂಕ್ಷೆಯೆಂದರೆ

> **ಅಂಬೇಡ್ಕರರ ನಂತರ ದಲಿತ ಸಮುದಾಯವು ಕಾನ್ಶೀರಾಂ ಮತ್ತು ಮಾಯಾವತಿಯವರಂಥ ಜವಾಬ್ದಾರಿಯುತ ರಾಜಕಾರಣಿಗಳನ್ನು ತಯಾರಿಸಿದೆ. ಆದರೆ ಇದುವರೆಗೆ ಶಕ್ತಿಯುವಾದ ಸಮಾಜೋ ಆಧ್ಯಾತ್ಮಿಕ ತತ್ತ್ವಶಾಸ್ತ್ರಜ್ಞನನ್ನು ನೀಡಿಲ್ಲ.**

ಸರ್ಕಾರಿ ನೌಕರನಾಗುವುದಾಗಿದೆ. ಭಾರತದ ನೌಕರನು ಚರಿತ್ರೆಯನ್ನು ರಚಿಸುವವನಾಗಿರದೆ, ಹಿಂದೂ-ಬ್ರಾಹ್ಮಣ್ಯದ ಆಡಳಿತಕ್ಕೆ ಗುಲಾಮನಾಗಿರುವುದು. ಅಂಬೇಡ್ಕರರ ನಂತರ ದಲಿತ ಸಮುದಾಯವು ಕಾನ್ಶೀರಾಂ ಮತ್ತು ಮಾಯಾವತಿಯವರಂಥ ಜವಾಬ್ದಾರಿಯುತ ರಾಜಕಾರಣಿಗಳನ್ನು ತಯಾರಿಸಿದೆ. ಆದರೆ ಇದುವರೆಗೆ ಶಕ್ತಿಯುವಾದ ಸಮಾಜೋ ಆಧ್ಯಾತ್ಮಿಕ ತತ್ತ್ವಶಾಸ್ತ್ರಜ್ಞನನ್ನು ನೀಡಿಲ್ಲ. ಆದ್ದರಿಂದ ಅವರು ಯಹೂದಿ ವಿಮೋಚಕರಂಥ ಪಾತ್ರವಹಿಸಲು ಸಾಧ್ಯವಾಗಿಲ್ಲ. ಆದರೆ ದಲಿತರು ಈ ಕೆಲಸಕ್ಕೆ ಅಗತ್ಯವಾಗಿ ಬೇಕಾದ ಚಾರಿತ್ರಿಕ ಶಕ್ತಿಯನ್ನು ಹೊಂದಿರುವರು. ಓಬಿಸಿಗಳು ಕೂಡ ಇದನ್ನು ಹೊಂದಿರುವರು. ಆದರೆ ಅವರು ಇದುವರೆಗೆ ಅಂಬೇಡ್ಕರ್‌ರಂಥ ಔನ್ನತ್ಯದ ಚಿಂತಕನನ್ನು ನೀಡಿಯೂ ಇಲ್ಲ, ಅಂಬೇಡ್ಕರರನ್ನು ಅನುಸರಿಸಲೂ ಇಚ್ಛಿಸುತ್ತಿಲ್ಲ.

ಮಹಾತ್ಮಫುಲೆ ಮತ್ತು ಪೆರಿಯಾರರು ಶೂದ್ರ ಸಮಾಜದಿಂದ ಬಂದವರಾದರೂ, ದಲಿತರು, ಆದಿವಾಸಿಗಳು ಮತ್ತು ಓಬಿಸಿಗಳ ನಡುವಣ ವೈರುಧ್ಯಗಳನ್ನು ಬಗೆಹರಿಸಲು ಸಿದ್ಧಾಂತವನ್ನು ನೀಡಿಲ್ಲ. ಎರಡನೆಯದಾಗಿ, ಇವರು ಅಖಿಲ ಭಾರತೀಯ ಸಂದರ್ಭದಲ್ಲಿ ಅಂಬೇಡ್ಕರರಂತೆ ಮಹತ್ತ್ವದ ಸ್ಥಾನವನ್ನು ಪಡೆದುಕೊಳ್ಳಲಾಗಿಲ್ಲ. ಇದೊಂದು ದುರಂತ ಸ್ಥಿತಿ. ಅಲ್ಲದೆ, ದಲಿತ ಪ್ರಚಾರಕರು, ಅಂಬೇಡ್ಕರರು ಶೂದ್ರರ ವಿಮೋಚಕರು ಕೂಡಾ ಎಂಬುದನ್ನು ಶೂದ್ರರಿಗೆ ಮನಗಾಣಿಸುವಲ್ಲಿ ಸೋತಿದ್ದಾರೆ. ಏಕೆಂದರೆ, ಇವರ ಪ್ರಜ್ಞೆಯು ಮೀಸಲಾತಿ ಮತ್ತು ರಾಜಕೀಯ ಅಧಿಕಾರದಂಥ ಸಂಗತಿಗಳಿಗೆ ನಿರ್ಬಂಧಗೊಂಡಿರುವುದರಿಂದ ಅವರು ತಮಗೆ ಅಗತ್ಯವಾದ ಮಹತ್ತ್ವದ ಚಾರಿತ್ರಿಕ ಪಾತ್ರಗಳನ್ನು ವಹಿಸಲು ಅಸಮರ್ಥರಾಗಿದ್ದಾರೆ.

ಬಹುರೂಪಿ ವೈರುಧ್ಯಗಳು

ಭಾರತೀಯ ಸಮಾಜದಲ್ಲಿರುವ ಬಹುರೂಪಿ ನೆಲೆಗಳದ್ದು, ಬ್ರಾಹ್ಮನಿಕಲ್ (ದ್ವಿಜರು) ಮತ್ತು ಉಳಿದ ಶೂದ್ರ, ಚಂಡಾಲ, ಆದಿವಾಸಿ ಸಮಾಜದ ನಡುವಣ ಈ ವೈರುಧ್ಯವು ಒಂದು ಪ್ರಧಾನ ವೈರುಧ್ಯವಾಗಿರುವಂಥದ್ದು. ಮತ್ತೊಂದು ವೈರುಧ್ಯದ ನೆಲೆಯೆಂದರೆ ಶೂದ್ರರಲ್ಲೂ ಕೆನೆಪದರಿನ ಜಾತಿಗಳು ಹಾಗೂ ಓಬಿಸಿಗಳ ದಲಿತರ (ಆದಿವಾಸಿಗಳ ನಡುವೆ) ನಡುವೆ ಇರುವಂಥದ್ದು. ಮೂರನೇ ವೈರುಧ್ಯದ ನೆಲೆಯೆಂದರೆ ಓಬಿಸಿಗಳು ಮತ್ತು ದಲಿತರು-ಆದಿವಾಸಿಗಳ ನಡುವೆ ಕಾರ್ಯಪ್ರವೃತ್ತ ರಾಗಿರುವಂಥದ್ದು. ಜಾತಿ ವಿರೋಧಿ ಸಂಘರ್ಷವು ಎರಡು ವಿವಿಧ ಕ್ಷೇತ್ರಗಳಲ್ಲಿ ಕಾರ್ಯಾಚರಿಸುತ್ತಿದೆ. ಸೈದ್ಧಾಂತಿಕವಾಗಿ, ಬ್ರಾಹ್ಮಣ್ಯವು ಅದರ ಪ್ರಮುಖ ಗುರಿಯಾಗಬೇಕು. ಆದರೆ ಭೌತಿಕವಾಗಿ, ಸಂಘರ್ಷವು ಎಲ್ಲ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಬೇಕು. ಮೀಸಲಾತಿ ಕ್ಷೇತ್ರದಲ್ಲಿ, ಭೌತಿಕ ಮತ್ತು ಸೈದ್ಧಾಂತಿಕ ಹೋರಾಟಗಳು, ಬ್ರಾಹ್ಮಣರ ಮತ್ತು ಇತರ ದ್ವಿಜರ ವಿರುದ್ಧ ನಡೆಯಲೇಬೇಕು. ಆಧ್ಯಾತ್ಮಿಕ ಕ್ಷೇತ್ರದಲ್ಲಿ, ಇದು ಪೂರ್ತಿಯಾಗಿ ಬ್ರಾಹ್ಮಣರ ನಿಯಂತ್ರಣದಲ್ಲಿರುವುದರಿಂದ, ಯುದ್ಧವನ್ನು ಪ್ರಮುಖವಾಗಿ ಬ್ರಾಹ್ಮಣರ ವಿರುದ್ಧ ಕೇಂದ್ರೀಕರಿಸಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ, ಭೂಮಿಯು ಇನ್ನು ಪ್ರಮುಖ ವಿಷಯವಾಗಿರುವುದರಿಂದ ಇದರ ಬಗ್ಗೆ ಹೋರಾಟಗಳು ನಡೆದು, ದಲಿತರ ಮತ್ತು ಅಗಸರು, ಕ್ಷೌರಿಕರು ಮತ್ತು ಭೂಮಿಯಿಲ್ಲದ ಇತರ ಸಾಂಸ್ಕೃತಿಕ ಜಾತಿಗಳಾದಂತಹ ಕೆಳ ಓಬಿಸಿಗಳನ್ನು ಆ ಹೋರಾಟದಲ್ಲಿ ತೊಡಗಿಸಬೇಕು. ಅಂದರೆ ಸಹಜವಾಗಿ ಭೂಮಿಯ ಸ್ವಾಮ್ಯತ್ವವನ್ನು ಹೊಂದಿರುವವರ ವಿರುದ್ಧ ಇರಬೇಕು. ಆಂಧ್ರಪ್ರದೇಶದಲ್ಲಿ ರೆಡ್ಡಿಗಳು, ಕಮ್ಮರು, ವೆಲೆಮಗಳು, ತಮಿಳುನಾಡಿನಲ್ಲಿ ನಾಡರುಗಳು ಮತ್ತು ಮೊದಲಿಯಾರುಗಳು, ಕೇರಳದಲ್ಲಿ ನಾಯರುಗಳು, ಕರ್ನಾಟಕದಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರು ಮತ್ತು ಉತ್ತರ ಭಾರತದಲ್ಲಿ ಜಾರು, ಪಟೇಲರು ಮತ್ತು ಭೂಮಿದಾರರು ಮುಂತಾದ ಮೇಲ್ಜಾತಿಗಳ ಶೂದ್ರರು ಮುಖ್ಯ ಶಕ್ತಿಗಳಾಗಿ ಉಳಿದಿರುವರು. ಇವರ ವಿರುದ್ಧ ಸಂಘರ್ಷವನ್ನು ಕೇಂದ್ರೀಕರಿಸತಕ್ಕದ್ದು.

ಆದರೆ, ಹೆಚ್ಚಿನ ಪ್ರದೇಶಗಳಲ್ಲಿ ಓಬಿಸಿಗಳು ಸಹ ಸ್ವಂತ ಭೂಮಿಯನ್ನು ಹೊಂದಿರುವರು; ಆದ್ದರಿಂದ ದಲಿತರು ಮತ್ತು ಓಬಿಸಿಗಳ ನಡುವಣ ಘರ್ಷಣೆಯು ಪುನಃ ಪುನಃ ಕಾಣಿಸಿಕೊಳ್ಳುತ್ತಿದೆ. ಪ್ರಧಾನ ಆಂದೋಲನವು ದಲಿತರಿಂದಲೇ ನಡೆದಿರುವುದರಿಂದ, ಸೈದ್ಧಾಂತಿಕವಾಗಿ ದಲಿತ ಶಕ್ತಿಯೊಡನೆ ನಿಲ್ಲುವುದು ಸೂಕ್ತ ಹಾಗೂ ಅಂತಹ ಹೋರಾಟ ಸಾಧ್ಯವಾಗುವಂತೆ ಮಾಡತಕ್ಕದ್ದು. ಪ್ರಸ್ತುತ ಸಂದರ್ಭದಲ್ಲಿ ಓಬಿಸಿಗಳು ಭೂಮಿಯಲ್ಲಿ ಹೆಚ್ಚಿನ ಪಾಲು ಹೊಂದಿದ್ದರೆ ದಲಿತರು ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಹೊಂದಿರುವರು. ಮಂಡಲ್ ಚಳುವಳಿಯ ನಂತರ, ಓಬಿಸಿಗಳು ಮೀಸಲಾತಿ ಪ್ರಶ್ನೆಯ ಬಗ್ಗೆ ಗಮನವನ್ನು ಕೇಂದ್ರೀಕರಿಸುವರು. ಈಗ ವಿದ್ಯಾವಂತ ದಲಿತರ ನಡುವೆ ನಿರುದ್ಯೋಗ ಸಮಸ್ಯೆ ಹೆಚ್ಚಾಗಿರುವುದರಿಂದ ಅವರು ಈಗ ಭೂಮಿಯ ಬಗ್ಗೆ ಗಮನ ಹರಿಸುತ್ತಿದ್ದಾರೆ.

ದಲಿತರು, ಆದಿವಾಸಿಗಳು ಹಾಗೂ ಓಬಿಸಿಗಳ ನಡುವಣ ಸಂಬಂಧಗಳು ಒಂದು ಸಾಮಾಜಿಕ ನೆಲೆಯತ್ತ ಚಲಿಸತಕ್ಕದ್ದು. ಏಕೆಂದರೆ ಇವರ ಮಧ್ಯೆ ಆಹಾರ ಮತ್ತು ಕೆಲಸದ ಆಚರಣೆಗಳನ್ನು ಹೊರತುಪಡಿಸಿ, ಹೆಣ್ಣು ಗಂಡಿನ ಮಧ್ಯೆ ಸಮಾನತೆಯ ಸಂಬಂಧಗಳು ಇವೆ. ಹಿಂದೂ ಧರ್ಮದೊಂದಿಗೆ ಅವರ ಸಂಬಂಧವು ಯಾವಾಗಲೂ ದಮನಕ್ಕೊಳಪಡಿಸುವಂಥದ್ದು. ಎಲ್ಲ ಹಿಂದೂ ದೇವ ಮತ್ತು ದೇವತೆಗಳ ಸಂಸ್ಕೃತಿಯು ಅವರನ್ನು ದಮನಿಸುವಂಥದು. ಹಿಂದೂ ಧರ್ಮ ಹಾಗೂ ಬ್ರಾಹ್ಮಣ ಬದುಕು ಅವರ ಸಾಮಾನ್ಯ ಶತ್ರು. ಅಂದರೆ ಉಳಿದ ವೈರುಧ್ಯಗಳು ಬೇರೆ ಬೇರೆ ಜಾಗಗಳಲ್ಲಿ ಬೇರೆ ಸಮಯಗಳಲ್ಲಿ ಉದ್ಭವಿಸಲಾರವು ಎಂದು ಅರ್ಥೈಸಬೇಕಿಲ್ಲ.

ಆದರೂ, ಎಲ್ಲ ಮುಂಚೂಣಿಗಳಲ್ಲೂ ಹೋರಾಟವು ಮುಂದುವರಿಯಲೇಬೇಕು. ●

ನಾಲ್ವಡಿ ಕೃಷ್ಣರಾಜ ಒಡೆಯರ್

ಮೈಸೂರು ಪ್ರಾಂತ್ಯದ ಸಾಮಾಜಿಕ ರೂವಾರಿ

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1884ರ ಜೂನ್ 4ರಂದು ಜನಿಸಿದರು. ಇವರು ಮಹಾರಾಜ ಶ್ರೀ ಚಾಮರಾಜ ಒಡೆಯರು ಮತ್ತು ಮಹಾರಾಣಿ ಕೆಂಪು ನಂಜಮ್ಮಣ್ಣಿ ಅವರ ಪ್ರಥಮ ಪುತ್ರರಾಗಿದ್ದರು. ಇವರಿಗೆ ಜಯಲಕ್ಷಮ್ಮಣ್ಣಿ ಮತ್ತು ಕೃಷ್ಣಾಜಮ್ಮಣ್ಣಿ ಎಂಬ ಇಬ್ಬರು ಅಕ್ಕಂದಿರು. ಚೆಲುವಾಜಮ್ಮಣ್ಣಿ ಎಂಬ ತಂಗಿ ಹಾಗೂ ಕಂಠೀರವ ನರಸಿಂಹರಾಜ ಒಡೆಯರೆಂಬ ತಮ್ಮ ಇದ್ದರು.

ನಾಲ್ವಡಿಯವರು 1892ರಲ್ಲಿ ರಾಯಲ್ ಸ್ಕೂಲ್‌ನಲ್ಲಿ ತಮ್ಮ ಶಿಕ್ಷಣವನ್ನು ಆರಂಭಿಸಿದರು. ಕನ್ನಡ, ಇಂಗ್ಲೀಷ್, ಉರ್ದು ಭಾಷೆಗಳನ್ನು ಕಲಿತಿದ್ದ ಅವರು ಗಣಿತ ವಿಜ್ಞಾನ ಇತಿಹಾಸ, ಭೂಗೋಳ ವಿಷಯಗಳ ಬಗ್ಗೆ ಆಳವಾದ ಪರಿಜ್ಞಾನ ಹೊಂದಿದ್ದರು. ಜೆ.ಜೆ. ವೈಟ್ಲೆ ಎಂಬ ಆಂಗ್ಲ ವಿದ್ವಾಂಸರಿಂದ ಇಂಗ್ಲಿಷ್ ಭಾಷೆ ಕಲಿತರು. ಇವರ ಸಹಪಾಠಿಗಳು ಮಿರ್ಜಾ ಇಸ್ಮಾಯಿಲ್, ಕಾಂತರಾಜೇ ಅರಸ್, ಟಿ. ಗುಂಡಪ್ಪ, ಎಸ್. ಶಾಮಣ್ಣ ಮುಂತಾದವರು.

ಚಾಮರಾಜ ಒಡೆಯರು ನಿಧನರಾದ ಮೇಲೆ 1895ನೇ ಫೆಬ್ರವರಿ 1ನೇ ತಾರೀಖು ನಾಲ್ವಡಿಯವರಿಗೆ ಪಟ್ಟಾಭಿಷೇಕವಾಯಿತು. ಇವರು ಅಪ್ರಾಪ್ತ ವಯಸ್ಕರಾದ್ದರಿಂದ ತಾಯಿ ರಾಜಮಾತೆ ಕೆಂಪು ನಂಜಮ್ಮಣ್ಣಿ ಶ್ರೀ ವಾಣಿವಿಲಾಸ ಸನ್ನಿಧಾನ ಅವರು ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದರು. ಜೂನ್ 6, 1900ರಂದು ಕೃಷ್ಣರಾಜ ಒಡೆಯರು 16ನೆಯ ವಯಸ್ಸಿನಲ್ಲಿ ಕಾಥೇವಾಡದ ರಾಣಾಶ್ರೀ ವಿಜಯನರಸಿಂಹರವರ ಪುತ್ರಿ ಪ್ರತಾಪಕುಮಾರಿ ದೇವಿಯವರೊಡನೆ ಅತ್ಯಂತ ವೈಭವದಿಂದ ಜಗನ್ಮೋಹನ ಅರಮನೆಯಲ್ಲಿ ವಿವಾಹವಾದರು. 1902ಆಗಸ್ಟ್ 8ರಂದು ನಾಲ್ವಡಿಯವರು 18ವರ್ಷ ತುಂಬಿದಾಗ ಮೈಸೂರು ಮಹಾರಾಜರಾಗಿ ಅಧಿಕಾರ ಸ್ವೀಕರಿಸಿದರು. ಅಧಿಕಾರ ವಹಿಸಿಕೊಂಡ ಕೂಡಲೇ ಮಾಡಬೇಕಾದ ಕೆಲಸಗಳನ್ನು ಮಾಡಲು ಪೂರ್ಣಕಾಲದ ಒಂದು ಮಂತ್ರಿಮಂಡಲವನ್ನು ರಚಿಸಿದರು. ಅದಕ್ಕೆ ದಿವಾನರನ್ನು ಅಧ್ಯಕ್ಷರನ್ನಾಗಿ ಮಾಡಿದರು.

ಕರ್ನಾಟಕದಲ್ಲಿ ಮೊದಲ ಬಾರಿಗೆ ಸಾಮಾಜಿಕ ನ್ಯಾಯದ ಅಗತ್ಯವನ್ನು ಮನಗಂಡವರು ನಾಲ್ವಡಿ ಕೃಷ್ಣರಾಜ ಒಡೆಯರ್. ಪೂನಾ ಮತ್ತು ಮದ್ರಾಸಿನಲ್ಲಿ ನಡೆದಿದ್ದ ಬ್ರಾಹ್ಮಣೇತರ ಚಳುವಳಿಗಳ ಪ್ರಭಾವಕ್ಕೆಒಳಗಾಗಿದ್ದ ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣರ ಏಕಸೌಮ್ಯಕ್ಕೆ ಅವರು ಸವಾಲಾಗಿ ನಿಂತರು.

ಪೂನಾ ಮತ್ತು ಮದ್ರಾಸಿನಲ್ಲಿ ನಡೆದಿದ್ದ ಬ್ರಾಹ್ಮಣೇತರ ಚಳುವಳಿಗಳ ಪ್ರಚಾರಕ್ಕೆ ಒಳಗಾಗಿದ್ದ ಮೈಸೂರು ಪ್ರಾಂತ್ಯದಲ್ಲಿ 1904ರಲ್ಲಿ ವೀರಶೈವ ಮಹಾಸಭಾ 1906ರಲ್ಲಿ ಒಕ್ಕಲಿಗರ ಸಂಘ 1909ರಲ್ಲಿ ಕೇಂದ್ರ ಮಹಮದೀಯ ಸಂಘಗಳು ಸ್ಥಾಪನೆಯಾಗಿ ಮೈಸೂರು ಪ್ರಾಂತ್ಯದಲ್ಲಿ ಬ್ರಾಹ್ಮಣರ ಏಕಸ್ವಾಮ್ಯಕ್ಕೆ ಸವಾಲಾಗಿ ನಿಂತವು. ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಮಾಡಿದ ನಾಲ್ವಡಿಯವರು ಜನತೆಯ ರಾಜಕೀಯ ಆಶೋತ್ತರಗಳಿಗೆ ಪೂರಕವಾಗಲು ಪ್ರಜಾಪ್ರತಿನಿಧಿಸಭೆ ಹಾಗೂ ನ್ಯಾಯವಿಧಾಯಕ ಸಭೆಗಳಲ್ಲಿ ಸಂಸ್ಥಾನದಲ್ಲಿ ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದು ಇವರ ಪ್ರಮುಖ ಸಾಧನೆ. ಅಧಿಕಾರ ವಹಿಸಿಕೊಂಡ ಒಂದು ವಾರದೊಳಗೆ ಮಹಾರಾಜರು ಒಂದು ಸಭೆ ಕರೆದು, "ಮೈಸೂರು ರಾಜ್ಯದ ಆಡಳಿತದಲ್ಲಿ ನಾವು ಒಂದು ಹೊಸ ಪ್ರಯೋಗ ಆರಂಭಿಸಿದ್ದೇವೆ. ನಮ್ಮ ಪ್ರಜೆಗಳಿಗೆ ಅಖಂಡವಾದ ಸುಖ ಸಂಪತ್ತನ್ನು ಒದಗಿಸಿಕೊಡಬೇಕೆಂಬುದು ನನ್ನ ಜೀವನದ ಪರಮೋದ್ದೇಶ" ಎಂದು ಹೇಳಿದರು. ಕಾಲಕ್ಕೆ ತಕ್ಕ ಹಾಗೆ ಚುನಾವಣಾ ಕ್ಷೇತ್ರಗಳನ್ನು ಮರು ವಿಂಗಡನೆ ಮಾಡಿ ಹೆಚ್ಚು ಬ್ರಾಹ್ಮಣೇತರ ಜಾತಿಗಳು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾಗಲು ಅವಕಾಶ ಕಲ್ಪಿಸಿದರು. 1902ರ ವೇಳೆಗೆ ಸಂಸ್ಥಾನದ ಸೇವಾ ಇಲಾಖೆಗಳ ಉದ್ಯೋಗಗಳಲ್ಲಿ ಬ್ರಾಹ್ಮಣ ಜಾತಿಯವರು ನೂರಕ್ಕೆ ನೂರರಷ್ಟು ಇರುತ್ತಾರೆ ಇದನ್ನು ಮನಗಂಡ ನಾಲ್ವಡಿಯವರು ಬ್ರಾಹ್ಮಣೇತರ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು 1914ರಲ್ಲಿ ಅಮಲ್ದಾರರ ಹುದ್ದೆಗೆ ನೇಮಕ ಮಾಡುವಾಗ ಬ್ರಾಹ್ಮಣೇತರರಿಗೆ ಕಡಿಮೆ ಅರ್ಹತೆಗಳನ್ನು ನಿಗದಿಗೊಳಿಸಿ ಶೂದ್ರರು ಮೊದಲ ಬಾರಿಗೆ ಸೇವಾ ಇಲಾಖೆಗಳಲ್ಲಿ ಆಯ್ಕೆಯಾಗುವಂತೆ ಮಾಡಿದರು. 1915ರಲ್ಲಿ ಶಿರಸ್ತೆದಾರ ಪದವಿಗಳಿಗೆ ನೇಮಕ ಮಾಡುವಾಗ ಇದೇ ನಿಯಮ ಅನುಸರಿಸಬೇಕೆಂದು ರಾಜಾಜ್ಞೆ ಹೊರಡಿಸಿದರು. 1918ರಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ವೇಸ್ಲಿ ಮಿಲ್ಲರ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಿಸಿ, ಎಲ್ಲಾ ಹಿಂದುಳಿದ ವರ್ಗದ ಜನರಿಗೆ ಪ್ರಾತಿನಿಧ್ಯ ದೊರಕುವಂತೆ ಸೂಚಿಸಲು ಆಯೋಗಕ್ಕೆ ಆದೇಶ ಮಾಡಿದರು. ಆಯೋಗದ ಶಿಫಾರಸ್ಸುಗಳಂತೆ 1921ರಲ್ಲಿ ಪ್ರಪ್ರಥಮ ಬಾರಿಗೆ ಬ್ರಾಹ್ಮಣರು ಆಂಗ್ಲೋ ಇಂಡಿಯನ್ನರನ್ನು ಹೊರತುಪಡಿಸಿ ಎಲ್ಲಾ ಹಿಂದುಳಿದ ಸಮುದಾಯಗಳಿಗೆ ಶೇ. 75%ರಷ್ಟು ಸರ್ಕಾರಿ ನೌಕರಿಯಲ್ಲಿ ಮೀಸಲಾತಿಯನ್ನು ನೀಡಿ ಆದೇಶ ಜಾರಿ ಮಾಡಿದರು. ಆಗ ದಿವಾನರಾಗಿದ್ದ ವಿಶ್ವೇಶ್ವರಯ್ಯ ಜಾತಿ ಆಧಾರದ ಮೇಲೆ ಮೀಸಲಾತಿ ನೀಡಿದರೆ ಆಡಳಿತದಲ್ಲಿ ದಕ್ಷತೆ ಹಾಳಾಗುತ್ತದೆ ಎಂದು ಹೇಳಿದಾಗ ಮಹಾರಾಜರು ಅದಕ್ಕೆ ನಾನು ಅಸ್ಪೃಶ್ಯರಲ್ಲಿ ದಕ್ಷತೆಯನ್ನು ಬೆಳೆಸುತ್ತೇನೆ. ಅವರನ್ನು ಸಮರ್ಥ ಆಡಳಿತಗಾರರನ್ನಾಗಿ ರೂಪಿಸುತ್ತೇನೆ ಎಂದು ಹೇಳಿದರು. ವಿಶ್ವೇಶ್ವರಯ್ಯ ಮೀಸಲಾತಿ ನೀಡಿರುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದರಿಂದ ರಾಜೀನಾಮೆ ನೀಡಲು ಹೇಳಿದರು. ಇದರಿಂದ ಮೈಸೂರು ಸಂಸ್ಥಾನಕ್ಕೆ ಮೊಟ್ಟಮೊದಲ ಬಾರಿ ಹಿಂದುಳಿದ ವರ್ಗದ ಕಾಂತರಾಜೇ ಅರಸ್ ದಿವಾನರಾಗಲು ಸಾಧ್ಯವಾಯಿತು. ಬ್ರಾಹ್ಮಣೇತರ ಚಳುವಳಿಗಳಿಂದಾಗಿ ಹಿಂದುಳಿದವರು ಮೊಟ್ಟಮೊದಲ ಬಾರಿಗೆ ರಾಜಕೀಯ ಅಧಿಕಾರ ಪಡೆಯಲು ಸಾಧ್ಯವಾಯಿತು. ಈ ಕಾಲದಲ್ಲಿ ಜಾತಿ ಆಧಾರಿತ ಶಾಲಾ ಕಾಲೇಜುಗಳು ಪ್ರಾರಂಭವಾಗಿ ಮೈಸೂರು ಸಂಸ್ಥಾನ ಸರ್ವಾಂಗೀಣ ಪ್ರಗತಿಯತ್ತ ಸಾಗಿತು.

ನಾಲ್ವಡಿಯವರ ಧರ್ಮನಿಷ್ಠೆ ಪ್ರಜಾಹಿತ ಚಿಂತನೆ ಪಕ್ಷಪಾತ ರಹಿತ ಆಡಳಿತ ನೋಟ ಮೈಸೂರು, ಭಾರತಕ್ಕೆ ಮಾತ್ರವಲ್ಲದೆ ಇಡಿ ಜಗತ್ತಿಗೆ ಮಾದರಿಯಾಗಿ ಇರುವ ಸಂಸ್ಥಾನವಾಗಿದೆ ಎಂದು ಬ್ರೌನಿಂಗ್ ಹೇಳಿದ್ದಾರೆ.

ಮಹಾರಾಜರು ಜಾರಿ ಮಾಡಿದ ಸಾಮಾಜಿಕ ಕಾನೂನುಗಳು : 1) 1909ರಲ್ಲಿ ದೇವದಾಸಿ ಪದ್ಧತಿ ನಿಷೇಧ 2) 1910ರಲ್ಲಿ ಬಸವಿ ಪದ್ಧತಿ ರದ್ದು ಮಾಡಿದರು. 3) 1910ರಲ್ಲಿ ಗೆಜ್ಜೆಪೂಜೆ ಸಂಪೂರ್ಣ ನಿರ್ಮೂಲನೆ. 4) 1936ರಲ್ಲಿ ಜುಲೈ 14ರಂದು ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ ಜಾರಿ ಮಾಡಿದರು. 5) 1936 ಜುಲೈ 7ರಂದು ವಿಧವೆಯರಿಗೆ ಮರುವಿವಾಹ ಮಾಡಿಕೊಳ್ಳುವ ಕಾಯ್ದೆ ಜಾರಿ ಮಾಡಿದರು. 6) 1937ರಲ್ಲಿ The Mysore Maternity Benefit Act ಕಾನೂನು ಜಾರಿಯಾಯಿತು.

ಇದಲ್ಲದೆ ಶೈಕ್ಷಣಿಕ ಸುಧಾರಣೆಗಳನ್ನು ಜಾರಿಗೆ ತಂದ ಮಹಾರಾಜರು ಬುಡಕಟ್ಟು ಅರಣ್ಯವಾಸಿಗಳಿಗೆ ಮೊಟ್ಟಮೊದಲು ಶಾಲೆಗಳನ್ನು ಪ್ರಾರಂಭಿಸಲಾಯಿತು. ಅಸ್ಪೃಶ್ಯರಿಗಾಗಿ ಮೊಟ್ಟಮೊದಲು ಹುಸ್ಕೂರು ಹಾಗೂ ನರಸೀಪುರದಲ್ಲಿ ಎರಡು ಶಾಲೆಗಳನ್ನು ಪ್ರಾರಂಭಿಸಿ ನಂತರ

ಎಲ್ಲಾ ಹಿಂದುಳಿದ ವರ್ಗಗಳಿಗೆ ಸುಮಾರು 800 ಶಾಲೆಗಳನ್ನು ಆರಂಭಿಸಿ ಒಂದು ಗೆಜೆಟ್ ಪ್ರಕಟಣೆಯನ್ನು ಹೊರಡಿಸಿದರು.

ಆ) ಗೆಜೆಟ್ ಪ್ರಕಟಣೆ ಹೀಗಿತ್ತು

"ಜಾತೀಯ ಆಧಾರದ ಮೇಲೆ ಯಾರನ್ನೂ ಸಾರ್ವಜನಿಕ ಶಾಲೆಗಳಿಂದ ದೂರವಿಡುವ ಪರಿಪಾಠಗಳನ್ನು ಸರ್ಕಾರ ಎತ್ತಿಹಿಡಿಯದು. ಸಾರ್ವಜನಿಕರ ಶಾಲೆಗಳನ್ನು ಲೋಕಾದಾಯಗಳಿಂದ ನಡೆಸುತ್ತಿರುವುದರಿಂದ ಶಿಕ್ಷಣವೂ ಸಹ ಆಸ್ಪತ್ರೆ, ನ್ಯಾಯಾಲಯ, ರೈಲು ಪ್ರಯಾಣ ಇತ್ಯಾದಿ ಸಾರ್ವಜನಿಕ ಕ್ಷೇತ್ರಗಳಲ್ಲಿರುವಂತೆಯೇ ರಾಜ್ಯದ ಎಲ್ಲ ವರ್ಗದ ಜನರಿಗೂ ಲಭ್ಯವಾಗಬೇಕು"

ಮಹಾರಾಜರು ಸ್ತ್ರೀಯರ ಬಗ್ಗೆ ಹೆಚ್ಚು ಗಮನವನ್ನು ಹರಿಸಿ ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡಲಾಯಿತು.

1902-ಬೆಂಗಳೂರಿನಲ್ಲಿ ಪ್ರಥಮ ವಾಣಿಜ್ಯಶಾಲೆ ಪ್ರಾರಂಭಿಸಲಾಯಿತು.

1903-ಮೈಸೂರಿನಲ್ಲಿ ತಾಂತ್ರಿಕ ಶಾಲೆಯನ್ನು ಸ್ಥಾಪನೆ ಮಾಡಿದರು.

1911-ಎಸ್.ಎಸ್.ಎಲ್.ಸಿ. ಪರೀಕ್ಷೆಗಳ ಪ್ರಾರಂಭ ಮಾಡಿದರು.

1916-ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ.

1918-ಶಾಲಾಪ್ರವೇಶಕ್ಕೆ ಜಾತಿ ಪದ್ಧತಿ ನಿರ್ಮೂಲನೆ.

1919-ಮಾಧ್ಯಮಿಕ ಮಟ್ಟದಲ್ಲಿ ಶಿಕ್ಷಣ ಶುಲ್ಕರದ್ದು ಮಾಡಿದರು.

1927-ಸ್ತ್ರೀಯರಿಗೆ ಮತದಾನದ ಹಕ್ಕನ್ನು ಮೊಟ್ಟಮೊದಲ ಬಾರಿಗೆ ಕೊಟ್ಟದ್ದು ನಾಲ್ವಡಿ ಮಹಾರಾಜರು.

ಸ್ತ್ರೀ ಶಿಕ್ಷಣಕ್ಕೆ ಅವರು ಕೊಟ್ಟಿದ್ದ ಮಹತ್ವ ಎಷ್ಟೆಂದರೆ ಓದುತ್ತಿರುವ ಬಾಲಕಿಯರಿಗೆ ಪ್ರತ್ಯೇಕ ಕೊಠಡಿ, ಶೌಚ ಗೃಹಗಳನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಲಾಗಿತ್ತು. ಪುಸ್ತಕ ಭಂಡಾರಗಳನ್ನು ತೆರೆಸಿದ್ದರು. ಮಹಾನ್ ಶಿಕ್ಷಣತಜ್ಞರಾಗಿದ್ದ ನಾಲ್ವಡಿಯವರು ಅಸ್ಪೃಶ್ಯ ವರ್ಗದ ಮಕ್ಕಳ ಪ್ರವೇಶದ ಬಗ್ಗೆ ಇದ್ದ ತೀವ್ರ ವಿರೋಧವನ್ನು ಅವರ ಕಾಲದಲ್ಲೆ ಸಂಪೂರ್ಣವಾಗಿ ಮಟ್ಟಹಾಕಿದರು. ದೇಶದಲ್ಲೆ ಮೊಟ್ಟಮೊದಲ ವಿಶ್ವವಿದ್ಯಾಲಯವನ್ನು ತೆರೆದು ದಾಖಲೆ ನಿರ್ಮಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಜೊತೆಗೆ ಯೂನಿವರ್ಸಿಟಿ ಲೈಬ್ರರಿ, ಕಾಲೇಜುಗಳಲ್ಲಿ ತಮ್ಮದೆ ಪುಸ್ತಕ ಭಂಡಾರಗಳನ್ನು ಇಟ್ಟಿದ್ದರು.

ಮೊಟ್ಟ ಮೊದಲ ಬಾರಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಿದರು. ಮುಸ್ಲಿಂಜನಾಂಗದ ಮಕ್ಕಳಿಗೆ ಉರ್ದುಶಾಲೆಗಳನ್ನು ಪ್ರಾರಂಭಿಸಿದರು. ವಯಸ್ಕರ ಶಿಕ್ಷಣ ಆಂದೋಲನ ಪ್ರಾರಂಭಿಸಿದ ನಾಲ್ವಡಿಯವರು ಸುಮಾರು 7000 ಸಾಕ್ಷರತಾ ಕೇಂದ್ರಗಳನ್ನು ತೆರೆದಿದ್ದರೆಂದರೆ ಅವರಿಗೆ ಶಿಕ್ಷಣದ ಮಹತ್ವ ಎಷ್ಟಿತ್ತು ಎಂಬುದು ತಿಳಿಯುತ್ತದೆ.

ನಾಲ್ವಡಿಯವರು ಕುರುಡು, ಮೂಗ ಮಕ್ಕಳಿಗೆ ಶಾಲೆಗಳನ್ನು ಪ್ರಾರಂಭಿಸಿ ಖುದ್ದು ಭೇಟಿಯಿತ್ತು ಮಕ್ಕಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಒಮ್ಮೆ ಮೈಸೂರು ಘಟಿಕೋತ್ಸವದಲ್ಲಿ ಭಾಗವಹಿಸಿ ಆಡಿದ ಮಾತುಗಳು ರಾಜರ್ಷಿ ಎಂಬುದಕ್ಕೆ ಸಾಕ್ಷಿಯಾಗಿದೆ. "ಶಿಕ್ಷಣವು ಕೆಲವೇ ಅದೃಷ್ಟಶಾಲಿಗಳಿಗೆ ಮಾತ್ರವಲ್ಲ ಈ ವಿಶ್ವವಿದ್ಯಾಲಯ ಇರುವುದು ದೇಶದ ಅಸ್ಪೃಶ್ಯ, ಹಿಂದುಳಿದ, ಅಲ್ಪಸಂಖ್ಯಾತರಿಗೆ, ಅಂದರೆ ಶೇ. 85 ಭಾಗ ಅದೃಷ್ಟಹೀನರಿಗಾಗಿಯೇ ಹೊರತು ಮೇಲ್ವರ್ಗದವರಿಗಲ್ಲ. ಪ್ರಾಧ್ಯಾಪಕರು ಸಾಮಾನ್ಯ ಜನತೆಯ ಮಟ್ಟಕ್ಕೆ ಇಳಿದು ತಮ್ಮ ತಿಳುವಳಿಕೆಯನ್ನು ಅವರೊಡನೆ ಹಂಚಿಕೊಳ್ಳಬೇಕು" ಎಂದರು.

ಸ್ತ್ರೀ ಶಿಕ್ಷಣಕ್ಕೆ ಅವರು ಕೊಟ್ಟಿದ್ದ ಮಹತ್ವ ಎಷ್ಟೆಂದರೆ ಓದುತ್ತಿರುವ ಬಾಲಕಿಯರಿಗೆ ಪ್ರತ್ಯೇಕ ಕೊಠಡಿ, ಶೌಚ ಗೃಹಗಳನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಲಾಗಿತ್ತು. ಪುಸ್ತಕ ಭಂಡಾರಗಳನ್ನು ತೆರೆಸಿದ್ದರು. ಮಹಾನ್ ಶಿಕ್ಷಣತಜ್ಞರಾಗಿದ್ದ ನಾಲ್ವಡಿಯವರು ಅಸ್ಪೃಶ್ಯ ವರ್ಗದ ಮಕ್ಕಳ ಪ್ರವೇಶದ ಬಗ್ಗೆ ಇದ್ದ ತೀವ್ರ ವಿರೋಧವನ್ನು ಅವರ ಕಾಲದಲ್ಲೆ ಸಂಪೂರ್ಣವಾಗಿ ಮಟ್ಟಹಾಕಿದರು.

ಮಹಾರಾಜರು ಆರ್ಥಿಕ ಕ್ಷೇತ್ರದಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದರು. ಭಾರತದ ಆರ್ಥಿಕ ಬೆನ್ನೆಲುಬು ಕೃಷಿ ಎಂದು ಅರಿತಿದ್ದ ನಾಲ್ವಡಿಯವರು ರೈತರಿಗೆ ಸುಲಭವಾಗಿ ಸಾಲ ದೊರೆಯುವಂತೆ 1905ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದರು. ಅನೇಕ ಸಹಕಾರಿ ಬ್ಯಾಂಕುಗಳು ಪ್ರಾರಂಭಗೊಂಡವು. ಸಹಕಾರಿ ಅಪೆಕ್ಸ್ ಬ್ಯಾಂಕ್, ಭೂ ಅಭಿವೃದ್ಧಿ ಬ್ಯಾಂಕ್, ದೇವಾಂಗ ಬ್ಯಾಂಕ್, ಕಣಿಯವರ ಬ್ಯಾಂಕ್ ಮುಂತಾದವು. ರೈತರು ಸಾಲದ ಅಡಿಯಲ್ಲಿ ಸಿಕ್ಕಿ ಭೂಮಿ ಕಳೆದುಕೊಳ್ಳುವ ಸ್ಥಿತಿಯನ್ನು ಕಂಡ ನಾಲ್ವಡಿಯವರು 1928ರಲ್ಲಿ ಕೃಷಿ ಕಾರ್ಮಿಕ ಪರಿಹಾರ ಕಾಯಿದೆಯನ್ನು ಜಾರಿಗೆ ತಂದರು.

ಗ್ರಾಮೀಣ ಜನರಿಗೆ ಶೀಘ್ರ ನ್ಯಾಯ ಒದಗಿಸಲು 1913ರಲ್ಲಿ ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆಯನ್ನು ಜಾರಿ ಮಾಡಿದರು.

1918ರಲ್ಲಿ ಗ್ರಾಮ ಪಂಚಾಯ್ತಿಗಳ ಕಾಯ್ದೆಯನ್ನು ಜಾರಿಗೆ ತರಲಾಯಿತು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದ ನಾಲ್ವಡಿಯವರನ್ನು ವಿದ್ವಾಂಸರುಗಳು ಶಿಕ್ಷಣ ತಜ್ಞರು ಇತಿಹಾಸಕಾರರು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಕರೆದದ್ದು ಸರಿಯಾಗಿಯೇ ಇದೆ.

ಏಷ್ಯಾ ಖಂಡದಲ್ಲೆ ಮೊದಲ ಜಲವಿದ್ಯುತ್ ಯೋಜನೆಯನ್ನು ಶಿವನಸಮುದ್ರದ ಬಳಿ ಪ್ರಾರಂಭಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ.

1902ರಲ್ಲಿ ಕಾವೇರಿ ನದಿಗೆ ಶಿವನಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ ಕಾರ್ಯಾಗಾರ ಸ್ಥಾಪನೆಯಾಯಿತು. ವಿದ್ಯುತ್ತನ್ನು ಪ್ರಥಮವಾಗಿ ಕೋಲಾರ ಗಣಿಪ್ರದೇಶಕ್ಕೆ ವರ್ಗಾಯಿಸಲಾಯಿತು. 1905ರಲ್ಲಿ ಆಗಸ್ಟ್ 3ರಂದು ಪ್ರಥಮವಾಗಿ ಬೆಂಗಳೂರಿನಲ್ಲಿ ವಿದ್ಯುತ್ ದೀಪಗಳು ಬೆಳಗಿದವು. 1906ರಲ್ಲಿ ಮೈಸೂರು ನಗರಕ್ಕೆ ವಿದ್ಯುತ್ ಪೂರೈಕೆ. 1939ರಲ್ಲಿ ಫೆಬ್ರುವರಿ 5ರಂದು ಜೋಗ್ ಜಲಪಾತದ ಬಳಿ ಶರಾವತಿ ನೀರಿನಿಂದ ವಿದ್ಯುತ್ ಉತ್ಪಾದನೆ. ಜೊತೆಗೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಕೈಗಾರಿಕೆ ಅಭಿವೃದ್ಧಿ ಕಡೆ ಗಮನ ಹರಿಸಿ ಮಹಾರಾಜರು 1914ರಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಸ್ಕೂಲ್ ಆರಂಭಿಸಿದರು. ಭದ್ರಾವತಿಯ ಮೈಸೂರು ಕಬ್ಬಿಣ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ ಗಂಧದ ಎಣ್ಣೆ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ ಪ್ರಾರಂಭವಾದವು. 1934ರಲ್ಲಿ ಮಂಡ್ಯದಲ್ಲಿ ಮೈಸೂರು ಸಕ್ಕರೆ ಕಂಪನಿ 1936ರಲ್ಲಿ ಮೊಟ್ಟಮೊದಲು ಮೈಸೂರು ಪೇಪರ್ ಮಿಲ್ಸ್, ಮಂಗಳೂರು ಹೆಂಚಿನ ಕಾರ್ಖಾನೆ, ಷಹಬಾದಿನ ಸಿಮೆಂಟ್ ಕಾರ್ಖಾನೆ, ಕೊಡಗಿನ ಕಾಫಿ ಸಂಶೋಧನಾ ಕೇಂದ್ರ-ಇವು ಮಹಾರಾಜರು ಸ್ಥಾಪನೆ ಮಾಡಿದ ಕೈಗಾರಿಕೆಗಳು.

ನಾಲ್ವಡಿಯವರು ಸಾರಿಗೆ ಮತ್ತು ರಸ್ತೆಗಳನ್ನು ಅಭಿವೃದ್ಧಿ ಮಾಡಿಸಿದರು. 1924ರಲ್ಲಿ ಮೈಸೂರು ನಗರದಿಂದ ಉದ್ದ ರಸ್ತೆಗಳ ನಿರ್ಮಾಣ ಅವುಗಳಲ್ಲಿ ಬೆಂಗಳೂರು-215 ಮೈಲಿ, ಕೋಲಾರ-211ಮೈಲಿ, ತುಮಕೂರು-189ಮೈಲಿ, ಚಿತ್ರದುರ್ಗ-220ಮೈಲಿ, ಮೈಸೂರು-326 ಮೈಲಿ, ಹಾಸನ-191ಮೈಲಿ, ಶಿವಮೊಗ್ಗ-283ಮೈಲಿ, ಕಡೂರು-325ಮೈಲಿಗಳ ಉದ್ದರಸ್ತೆಗಳು ನಿರ್ಮಾಣವಾದವು. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣಕ್ಕೆ ಮಹಾರಾಜರು ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಮಹಾರಾಜರ ಕಾಲದಲ್ಲಿ ರೈಲ್ವೆ ಸಂಪರ್ಕ ಗಣನೀಯ ಪ್ರಮಾಣದಲ್ಲಿ ಪ್ರಗತಿ ಸಾಧಿಸಿತು. 1913ರಲ್ಲಿ ಹೊಸ ರೈಲು ಸಾರಿಗೆ ನಿರ್ಮಾಣ ಇಲಾಖೆ ಆರಂಭ 1918ರಲ್ಲಿ ಚಿಕ್ಕಬಳ್ಳಾಪುರ-ಯಲಹಂಕ, ಮೈಸೂರು-ಅರಸೀಕೆರೆ ಮೀಟರ್‌ಗೇಜ್ ನಿರ್ಮಾಣ 1921ರಲ್ಲಿ ಚಿಕ್ಕಜಾಜೂರು-ಚಿತ್ರದುರ್ಗ ಮೀಟರ್ ಗೇಜ್ ನಿರ್ಮಾಣ.

ನಾಲ್ವಡಿಯವರು ಸಾಹಿತ್ಯ ಸಂಗೀತ ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು 1915ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭಿಸಿ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆಗೆ ಪ್ರೋತ್ಸಾಹಿಸಿದರು. ಪರಿಸರ ಪ್ರೇಮಿಯಾಗಿದ್ದ ನಾಲ್ವಡಿಯವರು ಪರಿಸರ ಸೌಂದರ್ಯ ಮತ್ತು ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ ಬೆಂಗಳೂರಿನ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಉದ್ಯಾನವನಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಿದರು. 1914ರಲ್ಲಿ ನಂದಿಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಿ ವಿಶ್ವವಿಖ್ಯಾತ ಕೃಷ್ಣರಾಜಸಾಗರದ ಬೃಂದಾವನ ಹೂದೋಟ ನಿರ್ಮಾಣವಾದದ್ದು ಮಹಾರಾಜರ ಕಾಲದಲ್ಲೆ.

ಇಷ್ಟೆಲ್ಲಾ ಸಾಧನೆ ಮಾಡಿದ ಮಹಾರಾಜರ ಕಾಲದಲ್ಲಿ ಮೈಸುರು, "ಮಾದರಿ ಸಂಸ್ಥಾನ" ಎಂಬ ಬಿರುದನ್ನು ಪಡೆಯಿತು. 1902 ರಿಂದ 1940ರ ಅವಧಿಯ ವರ್ಷಗಳು ಮೈಸೂರು "ಸುವರ್ಣಯುಗ" ಎಂಬ ಖ್ಯಾತಿಯನ್ನು ಪಡೆಯಲು ಕಾರಣವಾಯಿತು.

ತನ್ನ ಸಂಸ್ಥಾನದ ಏಳಿಗೆಗಾಗಿ ತನ್ನ ಪ್ರಜೆಗಳ ನೆಮ್ಮದಿಗಾಗಿ ನಾಲ್ವಡಿಯವರು ಮಾಡಿದ ಸಾಧನೆ ಅನೇಕ ಅಮೋಘ 38 ವರ್ಷಗಳ ಕಾಲ ದಕ್ಷ ಆಡಳಿತ ನಡೆಸಿ ರಾಜರ್ಷಿ ಎಂಬ ಬಿರುದನ್ನು ಪಡೆದ ಮಹಾರಾಜರು 1940 ಆಗಸ್ಟ್ 3 ರಂದು ಹೃದಯಾಘಾತದಿಂದ ನಿಧನ ಹೊಂದಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಬದುಕು ಮತ್ತು ಆದರ್ಶದ ಆಡಳಿತವು 21ನೇ ಶತಮಾನದ "ಪ್ರಬುದ್ಧ ಭಾರತ" ನಿರ್ಮಾಣ ಮಾಡಲು ಹೊರಟಿರುವ ಬಹುಜನ ಸಮಾಜಕ್ಕೆ ದಾರಿ ದೀಪವಾಗಲಿ. ●

ಕೃಪೆ : ಬಹುಜನರ ಕೈಪಿಡಿ

ಕೋಮುವಾದಿ ಹಿಂಸೆ ಮತ್ತು ಮಹಿಳಾ ಚಳುವಳಿ

ಕಲೆ : ಎಂ.ಬಿ. ಲೋಹರ್

> ಕೋಮುವಾದವು ಮಹಿಳೆಯರನ್ನು (ಹೌದು ಹಿಂದು ಮಹಿಳೆಯರನ್ನು ಮಾತ್ರ) ದೇವತೆಯರನ್ನಾಗಿ ಮತ್ತು ಮಹಾನ್ ಮಾತೆಯರನ್ನಾಗಿ ಚಿತ್ರಿಸುತ್ತದೆ. ಮಾನವ ಸಮಾಜದಲ್ಲಿ ಅವರಿಗೆ ಸಮಾನ ಸ್ಥಾನವನ್ನು ನಿರಾಕರಿಸುವ ಸಲುವಾಗಿಯೇ ಹೀಗೆ ಮಾಡಲಾಗುತ್ತದೆ. ಮಹಿಳೆಯ ಶರಣಾಗತಿಯ ಸಂಕೇತಗಳಾಗಿರುವ ಸಿಂಧೂರ, ಕೆಂಪು ಬಳೆಗಳು, ಮಂಗಲಸೂತ್ರ, ರೇಷ್ಮೆ ಸೀರೆ ಮುಂತಾದವುಗಳನ್ನು ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ಸಂಕೇತಗಳೆಂದು ಮತ್ತೆ ವೈಭವೀಕರಿಸಲಾಗುತ್ತಿದೆ. ಮಹಿಳಾ ಚಳುವಳಿ ಮತ್ತು ಇತರ ಪ್ರಗತಿಪರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳುವಳಿಗಳ ಪ್ರಭಾವದಿಂದಾಗಿ ಒಂದು ಮಟ್ಟಕ್ಕೆ ಕಡಿಮೆಯಾಗಿದ್ದ ಈ ಸಂಕೇತಗಳು ಹಿಂದೂ ಕೋಮುವಾದಿ ಸಂಹಿತೆಗಳಿಂದಾಗಿ ಮತ್ತೆ ಸ್ಥಾನವನ್ನು ಪಡೆಯುತ್ತಿವೆ.
>
> ○ ಲಲಿತ

ಪ್ರತಿ ಕಣ್ಣಲ್ಲಿನ ಕಣ್ಣೀರು ನಮ್ಮ ರೆಪ್ಪೆಯಲಿ
ರತಿ ಗುಂಡಿಗೆಯ ನೋವು ನಮ್ಮ ಹೃದಯದಲಿ

ಫಿರಾಕ್ ಗೋರಖ್‌ಪುರಿ

ಮಹಿಳೆಯರ ಬದುಕಿನಲ್ಲಿ ಕೋಮುಗಲಭೆಗಳು ಸೃಷ್ಟಿಸಿದ ಅಲ್ಲೋಲ, ಕಲ್ಲೋಲದ ಒಂದಷ್ಟು ನೆನಪು ಸಾಕು ಯಾವುದೇ ಸಂವೇದನಶೀಲ ಮಾನವ ಜೀವಿ ಆಕ್ರೋಶದ ಕಣ್ಣೀರು ಸುರಿಸಲು ಮತ್ತು ಅದರ ವಿರುದ್ಧ ಹೋರಾಡುವ ನಿರ್ಣಯ ಕೈಗೊಳ್ಳಲು ಹಲವಾರು ವಿಷಯಗಳಲ್ಲಿ ರುವಂತೆಯೇ, ಈ ವಿಷಯದಲ್ಲೂ ವಾಸ್ತವ ನಮ್ಮ ಕಲ್ಪನೆಗಿಂತಲೂ ಕೆಟ್ಟದಾಗಿದೆ. ಕೋಮುವಾದವು ಮಹಿಳೆಯರನ್ನು ಹಲವು ಬಗೆಗಳಲ್ಲಿ ಕಾಡುತ್ತಿದೆ ಮಹಿಳೆಯರು ಕೋಮುವಾದದ ಪ್ರತ್ಯಕ್ಷ ಹಾಗೂ ಪರೋಕ್ಷ ಬಲಿಪಶುಗಳಾಗಿದ್ದಾರೆ. ಕೋಮು ಹಿಂಸೆಯನ್ನು ನಡೆಸಲು ಮಹಿಳೆಯನ್ನು ಒಂದು ಮಾಧ್ಯಮವಾಗಿ ಬಳಸಿ ಕೊಳ್ಳಲಾಗುತ್ತಿದೆ; ಕೋಮುವಾದಿ ಸಿದ್ಧಾಂತ ಹಾಗೂ ಪ್ರಚಾರದಿಂದಾಗಿ ಮತ್ತಷ್ಟು ಪುರುಷಾಧಿಪತ್ಯದ ದರ್ಪಕ್ಕೆ ಮಹಿಳೆಯರು ತುತ್ತಾಗಿದ್ದಾರೆ. ವಾತಾವರಣವನ್ನು ಕೋಮುವಾದೀಕರಣಗೊಳಿಸಿರುವುದರಿಂದ ಹೆಚ್ಚುತ್ತಿರುವ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮೂಲಭೂತವಾದದ ಹಿಡಿತಕ್ಕೆ ಆ ಸಮುದಾಯಗಳ ಮಹಿಳೆಯರು ಗುರಿಯಾಗುತ್ತಿದ್ದಾರೆ; ಇತ್ಯಾದಿ. ಮೇಲೆ ಹೇಳಿದ ಪ್ರತಿಯೊಂದು ಅಂಶವು ಹೇಗಾಗುತ್ತದೆ ಎಂಬುದನ್ನು ಸ್ವಲ್ಪ ವಿವರವಾಗಿ ನೋಡೋಣ.

'ಮಾನ' ಕಾಪಾಡುವ ಹೆಸರಲ್ಲಿ

ಪ್ರತಿ ಕೋಮುಗಲಭೆಯ ಸಂದರ್ಭದಲ್ಲಿ ಮಹಿಳೆಯರನ್ನು ಅವಮಾನಪಡಿಸಲಾಗುತ್ತದೆ. ಬೆದರಿಸಲಾಗುತ್ತದೆ, ಹೊಡೆಯಲಾಗುತ್ತದೆ, ಅತ್ಯಾಚಾರ ಮಾಡಲಾಗುತ್ತದೆ ಹಾಗೂ ಕೊಂದು ಹಾಕಲಾಗುತ್ತದೆ. ಡಿಸೆಂಬರ್ 92 ಮತ್ತು ಜನವರಿ 93ರಲ್ಲಿ ಸೂರತ್‌ನಲ್ಲಿ ಹಾಗೂ ಜನವರಿ 93ರಲ್ಲಿ ಬಾಂಬೆಯಲ್ಲಿ ನಡೆದ ಆಘಾತಕಾರಿ ಘಟನೆಗಳು ಸಾಕು ಈ ಮಾತನ್ನು ಹೇಳಲು, ಅತ್ಯಾಚಾರ, ವ್ಯಕ್ತಿಗತ ಸಂದರ್ಭದಲ್ಲೂ ಕೇವಲ ಕಾಮುಕ ದುರ್ವರ್ತನೆ ಮಾತ್ರವಲ್ಲ, ಮಹಿಳೆಯನ್ನು ಭೋಗದ ವಸ್ತುವನ್ನಾಗಿ ಪರಿಗಣಿಸುವ ಮತ್ತು ಗಂಡಸಿನಿಂದ ಅಧಿಕಾರದ ತಾಕತ್ತಿನ ಪ್ರದರ್ಶನ. ಸಾಮೂಹಿಕ ಸಂದರ್ಭದಲ್ಲಿ ಅತ್ಯಾಚಾರ ನಿರ್ಧಿಷ್ಟವಾಗಿ ರಾಜಕೀಯ ಕೃತ್ಯವಾಗಿರುತ್ತದೆ ಮತ್ತು ಸಂಘಟಿತ ಕೋಮುವಾದಿ ದುರಾಕ್ರಮಣದ ಘಟನೆಗಳಲ್ಲಿ ಅದು ವಿಜಯೋತ್ಸವದ ಆಚರಣೆಯಾಗುತ್ತದೆ. -'ಶತ್ರು' ಸಮುದಾಯದ 'ಮಾನ'ದ ಸಂಕೇತಕ್ಕೆ ಕಳಂಕ ಹಚ್ಚುವುದಾಗಿದೆ. ಕೋಮುವಾದಿ ಹಾಗೂ ಪುರುಷಾಧಿಪತ್ಯ ಮೌಲ್ಯಾಧಾರಿತ ಸಮಾಜದಲ್ಲಿ ಮಹಿಳೆಯನ್ನು ಗಂಡಸಿನ, ಅದರಿಂದಾಗಿ ಸಮುದಾಯದ ಆಸ್ತಿ ಎಂದೇ ಪರಿಗಣಿಸಲಾಗುವುದರಿಂದ ಶತ್ರು ಸಮುದಾಯದ ಹೆಣ್ಣಿನ ಅತ್ಯಾಚಾರವನ್ನು ಶತ್ರುವಿನ ಮೇಲಿನ ದೈಹಿಕ ಹಾಗೂ ಮಾನಸಿಕ ವಿಜಯವೆಂದು ಪರಿಗಣಿಸಲಾಗುತ್ತದೆ.

ಸೂರತ್ತಿನ ಮುಸ್ಲಿಂ ಮಹಿಳೆಯರನ್ನು ಅತ್ಯಾಚಾರಕ್ಕೆ ಗುರಿ ಮಾಡಿದ್ದಷ್ಟೇ ಅಲ್ಲ ಅತ್ಯಂತ ಕೀಳುರೀತಿಯ ಲೈಂಗಿಕ ಕಿರುಕುಳಕ್ಕೆ ಈಡುಮಾಡಲಾಯಿತು. ಫ್ಲಡ್‌ಲೈಟ್‌ಗಳ ಬೆಳಕಿನಡಿ ದೊಡ್ಡ ಪ್ರಮಾಣದಲ್ಲಿ ಮಹಿಳೆಯರನ್ನು ಸೇರಿಸಿ ವಿವಸ್ತ್ರಗೊಳಿಸಲಾಯಿತು-ವಿಡಿಯೋ ಸಹ ಮಾಡಿ ಪ್ರದರ್ಶಿಸಲಾಯಿತು ಎಂದು ಹೇಳಲಾಗುತ್ತದೆ. ಕೊಲ್ಲುವ ಅಥವ ಅವರ ಖಾಸಗಿ ಭಾಗಗಳಲ್ಲಿ ಕಬ್ಬಿಣದ ಸಲಾಕೆಯನ್ನು ತುರುಕುವ ವಿಧಿಯೊಂದಿಗೆ ಈ ವಿಜಯೋತ್ಸವ ಕೊನೆಗೊಂಡಿತು. ಸಾಯುವ ಸಂದರ್ಭದಲ್ಲಿ ನತದೃಷ್ಟ ಮಹಿಳೆಯರು ಹಿಂದುತ್ವವಾದಿಗಳ ಯುದ್ಧ

ಘೋಷಣೆಯಾದ ಜೈ ಶ್ರೀ ರಾಂ (ಇದನ್ನು ಫ್ಯಾಸಿಸ್ಟರ 'ಹೇಲ್ ಹಟ್ಲರ್'ನೊಂದಿಗೆ ಸಮೀಕರಿಸಿ ನೋಡಿ) ಅನ್ನು ಪುನರುಚ್ಚರಿಸಬೇಕಿತ್ತು. ಅಂತಿಮವಾಗಿ ಕೆಲವರನ್ನು ಕೊಲ್ಲಲಾಯಿತು. ಕೆಲವರನ್ನು ಜೀವಂತ ಸುಡಲಾಯಿತು. ಹಲವಾರು ಜನರ ಕೈಗಳ ಮೇಲೆ ಹಾಗೂ ಗುಪ್ತ ಅಂಗಾಂಗಳ ಮೇಲೆ ಓಂ ಅಲ್ಲದೆ (ಇದೂ ಸಹ ನಾಜಿಗಳ ಸ್ವಸ್ತಿಕ್‌ನಂತೆ) ಅಪರಾಧಿಗಳ ಹೆಸರನ್ನು ಹಾಗೂ ದಿನಾಂಕವನ್ನು ಕೆತ್ತಲಾಯಿತು. ಪಟಿಯಾಲದ ಹುಡುಗಿಯೊಬ್ಬಳು ತನ್ನ ಕೈ ಮೇಲೆ ರಾಕ್ಷಸರು ಕೆತ್ತಿದ ಶಾಶ್ವತ ಗುರುತನ್ನು ಅಳಿಸಿ ಹಾಕಲು ಆಸಿಡ್ಡಿನಿಂದ ಕೈಯನ್ನು ಸುಟ್ಟುಕೊಂಡಳು...

ವಿಷಯ ಇಷ್ಟಕ್ಕೆ ನಿಲ್ಲುವುದಿಲ್ಲ. ಮುಗ್ಧ ಹಿಂದು ಮಹಿಳೆಯರ ರಕ್ಷಣೆಗಾಗಿ ಪ್ರತೀಕಾರವಾಗಿ ತೆಗೆದುಕೊಳ್ಳಲಾದ ಕ್ರಮಗಳೆಂದು ಈ ಹೇಯ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಮುಸ್ಲೀಮರು 'ಕಾಮುಕರು, ಬಹುಪತ್ನಿತ್ವರು' ಎಂಬ ಹಿಂದುಗಳು 'ಸಹಿಷ್ಣುಗಳು' ಎಂಬ ಮಿಥ್ಯೆಗಳನ್ನು, ಪೂರ್ವಾಗ್ರಹಗಳನ್ನು ವ್ಯವಸ್ಥಿತವಾಗಿ ಸೃಷ್ಟಿಸಲಾಗುತ್ತದೆ, ಬೆಳೆಸಲಾಗುತ್ತದೆ ಹಾಗೂ ಹರಡಲಾಗುತ್ತದೆ. ದುರಾಸೆ ಪೂರಿತ ಮುಸ್ಲಿಂ ಆಳ್ವಿಕೆಯನ್ನು ಚಿತ್ರಿಸಲಾಗುತ್ತಿದೆ. ಅದಕ್ಕೆ ಪ್ರತಿಯಾಗಿ ಮುಸ್ಲೀಮರ ಆಕ್ರಮಣದ ಮೊದಲು ಭಾರತೀಯ ಸ್ತ್ರೀ ಎಂತಹ ಗೌರವಯುತ, ಸ್ವತಂತ್ರ ಬದುಕನ್ನು ಹೊಂದಿದ್ದಳು ಎಂಬುದಕ್ಕೆ ಹಲವಾರು ಇಲ್ಲದ ಪುರಾವೆಗಳನ್ನು ಒದಗಿಸಲಾಗುತ್ತಿದೆ. ಆರೆಸ್ಸಸ್‌ನ ಸಿದ್ಧಾಂತಿಯಾದ ಸಾವರ್ಕರ್ ಹೇಳುವ ಮಾತುಗಳನ್ನು ನೋಡಿ, "ಅತ್ಯಾಚಾರ ಎಂದ ಮಾತ್ರಕ್ಕೆ ಅದು ಅಪರಾಧವಲ್ಲ, ನಿಜ ಹೇಳಬೇಕೆಂದರೆ ಮುಸ್ಲಿಮರ ವಿರುದ್ಧದ ಯುದ್ಧದಲ್ಲಿ ಅದೊಂದು ಆಯುಧ. ಸಮಯ, ಸ್ಥಳ, ವ್ಯಕ್ತಿ, ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳದೆ ಇದನ್ನು ನೈತಿಕವಾಗಿ ಕೆಟ್ಟದ್ದು ಎಂದು ಪರಿಗಣಿಸುವುದು ಉದಾತ್ತಗುಣದ ವಕ್ರೀಕರಣವಾಗುತ್ತದೆ. ಇದೇ ಹಿಂದೂ ರಾಷ್ಟ್ರದ ಅಪಮಾನಕ್ಕೆ ಹಾಗೂ ಸೋಲಿಗೆ ಚಾರಿತ್ರಿಕವಾಗಿ ಕಾರಣವಾಗಿದೆ". ಆದ್ದರಿಂದ ಇಂದು ಮುಸ್ಲಿಂ ಮಹಿಳೆಯರನ್ನು ಗುರಿ ಮಾಡಿ ನಡೆಸುವ ಕೋಮುವಾದಿ ಹಿಂಸೆಯನ್ನು, ಭಾರತ-ಪಾಕ್ ವಿಭಜನೆ ಸಂದರ್ಭವನ್ನು ಒಳಗೊಂಡಂತೆ ಚರಿತ್ರೆಯಲ್ಲಿ ಮುಸ್ಲೀಮರು ಮಾಡಿದ ಅಪರಾಧಗಳಿಗೆ ಪ್ರತೀಕವಾಗಿ ನಡೆಸಲಾಗುತ್ತಿರುವ ಕ್ರಮಗಳೆಂದು ವಿವರಿಸಲಾಗುತ್ತದೆ. ದೈವತ್ವ ಆಕ್ರೋಶದ ಜಾರಿ ಎಂದು ಹೇಳಿ ಈ ದುಷ್ಕೃತ್ಯಗಳನ್ನು "ಪಾವನಗೊಳಿಸಲಾಗುತ್ತದೆ". ಇವರ ಸಿದ್ಧಾಂತದ ಪ್ರಕಾರ ಮುಸ್ಲಿಮರು ಚರಿತ್ರಹೀನ ವ್ಯಕ್ತಿಗಳಾದ್ದರಿಂದ ಅವರ ಮಹಿಳೆಯರು ಸಹ ಅಷ್ಟೇ ನೀತಿಗೆಟ್ಟವರು ಹಾಗೂ ಕಾಮುಕರು ಆಗಿರುತ್ತಾರೆ. ಆದ್ದರಿಂದ ಯಾವ ರೀತಿಯ ಗೌರವಕ್ಕೂ ಅರ್ಹರಲ್ಲವೆಂದೂ ವಾದಿಸಲಾಗುತ್ತದೆ.

ಪುರುಷಾಧಿಪತ್ಯ ಸಮಾಜದಲ್ಲೂ ಸಹ ಅತ್ಯಾಚಾರವನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಿಲ್ಲ. ಅತ್ಯಾಚಾರ ನಡೆಯುವುದು ಪ್ರತಿದಿನದ ವಿಷಯವಾಗಿದ್ದರೂ ಅದರ 'ಅಗತ್ಯ'ದ ಬಗ್ಗೆ ಸಿದ್ಧಾಂತವನ್ನು ಸೃಷ್ಟಿಸಿರಲಿಲ್ಲ. ಕೋಮುವಾದಿ ಗೂಂಡಾಗಳು ಪ್ರಜ್ಞಾಪೂರ್ವಕವಾಗಿ ಬೆಳೆಸುತ್ತಿರುವ 'ಕೋಮುವಾದಿ ಚಿಂತನ ರೀತಿ'ಯಿಂದಾಗಿ ಸಾಧ್ಯವಾಗಿದೆ ಎಂಬುದನ್ನು ನಾವಿಲ್ಲಿ ಗುರುತಿಸಬೇಕು.

ಶಾಶ್ವತ ಛಾಪಿ

ಕೋಮುವಾದಿ ಹಿಂಸೆಯ ಸಮಾಜದ ಕಡೆಗಣಿತ ಸಮುದಾಯಗಳನ್ನು ಭಾದಿಸುವುದೇ ಹೆಚ್ಚು. ಇದರಿಂದ ಬಡ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ದಲಿತರು ತಮ್ಮ ಜೀವನಾಧಾರಗಳನ್ನು ಕಳೆದುಕೊಳ್ಳುತ್ತಲೇ ಇರುತ್ತಾರೆ. ಸೂರತ್‌ನಲ್ಲಿರಬಹುದು, ಬಾಂಬೆಯಲ್ಲಿರಬಹುದು, ಉರ್ದು ವಾರ್ತೆ ಸಂದರ್ಭದಲ್ಲಾದಂತೆ ಬೆಂಗಳೂರಿನಲ್ಲೇ ಇರಬಹುದು ಜೀವನಾಧಾರಗಳಾದ ತಳ್ಳುವ ಗಾಡಿಗಳನ್ನು, ಟೈಲರಿಂಗ್ ಯಂತ್ರಗಳನ್ನು, ಬೀದಿ ಬೀದಿಯ ಡಬ್ಬದಂಗಡಿಗಳನ್ನು ಮುಂತಾದವನ್ನು ಬೇಕೆಂದೇ

> **ಕೋಮುವಾದಿ ಹಿಂಸೆಯು ಸಮಾಜದ ಕಡೆಗಣಿತ ಸಮುದಾಯುಗಳನ್ನು ಭಾದಿಸುವುದೇ ಹೆಚ್ಚು. ಇದರಿಂದ ಬಡ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ದಲಿತರು ತಮ್ಮ ಜೀವನಾಧಾರಗಳನ್ನು ಕಳೆದುಕೊಳ್ಳುತ್ತಲೇ ಇರುತ್ತಾರೆ.**

ಗುರಿಮಾಡಿ ನಾಶಮಾಡಲಾಯಿತು. ಗುಡಿಸಲನ್ನು ಸುಡಲಾಯಿತು. ಗಂಡಸರನ್ನು ವಿಕಲಾಂಗರನ್ನಾಗಿಸಲಾಯಿತು. ಮಕ್ಕಳನ್ನು ತಬ್ಬಲಿಗಳನ್ನಾಗಿ ಮಾಡಲಾಯಿತು. ಜನರನ್ನೆಲ್ಲಾ ಬೆನ್ನಟ್ಟಿ ಓಡಿಸಿ ರಾತ್ರೋರಾತ್ರಿ ಇಡೀ ಪ್ರದೇಶದ ಚಿತ್ರಣವನ್ನೇ ಬದಲಾಯಿಸಿ ರಕ್ತಸಿಕ್ತ ಮರಣಹೋಮಗಳನ್ನು ನಡೆಸಲಾಯಿತು. ಉದ್ದೇಶ-ಭಯವನ್ನು ಸೃಷ್ಟಿಸುವುದು, ಸರ್ವಾಧಿಕಾರವನ್ನು ಸ್ಥಾಪಿಸುವುದೇ ಆಗಿತ್ತು. ಅಷ್ಟೇ ಅಲ್ಲ ಬಡವರಿಗೆ ಗೂಡೂ ಇಲ್ಲದಂತೆ ಮಾಡುವುದು, ಅಲ್ಪಸಂಖ್ಯಾತರಿಗೆ ಯಾವ ಆಸ್ತಿಯೂ ಇಲ್ಲದಂತೆ ಮಾಡುವುದೂ ಸೇರಿತ್ತು. ಕೋಮುಗಲಭೆಗಳ ಸಂದರ್ಭದಲ್ಲಿ ಮುಸ್ಲೀಮರಿಗೆ ಸೇರಿದ ಸಣ್ಣ-ದೊಡ್ಡ ಅಂಗಡಿಗಳನ್ನು, ಕಾರ್ಖಾನೆಗಳನ್ನು ಸಹ ದೋಚಲಾಯಿತು ಹಾಗೂ ಧ್ವಂಸಮಾಡಲಾಯಿತು. ಈ ಗಲಭೆಗಳಿಗೆ ಹಣ ಬೆಂಬಲ ನೀಡುವ ಮಾರ್ವಾಡಿ ವ್ಯಾಪಾರಿಗಳು ಹಾಗೂ ರಿಯಲ್ ಎಸ್ಟೇಟ್ ಖದೀಮರೇ ಕೋಮು ವಿನಾಶದ ನಂತರ ಅತ್ಯಧಿಕ ಲಾಭ ಪಡೆಯುವವರು.

ಇವೆಲ್ಲದರಲ್ಲಿ ಮಹಿಳೆಯರನ್ನು ಬೆದರಿಸಲಾಗುತ್ತದೆ ಹಾಗೂ ನಿಸ್ಸಹಾಯಕರಾದ ಅವರನ್ನು ಬೀದಿ ಗೆಸೆಯಲಾಗುತ್ತದೆ. ಒಬ್ಬಂಟಿ ಮಹಿಳೆಯರನ್ನು ಗುರುತಿಸಿ ದಾಳಿಗೆ ಗುರಿಮಾಡಲಾಗುತ್ತದೆ. ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ತಲೆಹಿಡುಕರು ಹಾಗೂ ದಂಧೆ ನಡೆಸುವವರು ದಿಕ್ಕುಗಳಾದವರನ್ನು ವೇಶ್ಯಾವಾಟಿಕೆಗೆ ಎಳೆಯಲು ಪ್ರಯತ್ನಿಸುತ್ತಾರೆ. ದಿನದ ಕೂಲಿಯ ಮೇಲೆ ಆಧರಿಸಿರುವ ಹೆಣ್ಣು-ಗಂಡುಗಳು ಅತ್ಯಂತ ಕಷ್ಟಗಳಿಗೆ ಈಡಾಗಿ ಸಾಲದ ಶೂಲಕ್ಕೆ ಸಿಲುಕುತ್ತಾರೆ.

ಹಿಂಸೆಯ ಪ್ರಚೋದಿಸಲು ಬಳಕೆ

ಸಮಾಜದ ಕೋಮುವಾದೀಕರಣವನ್ನು ತೀವ್ರಗೊಳಿಸುವವರಲ್ಲಿ ಪೈಶಾಚಿಕ ಪಾತ್ರವಹಿಸಿದ ಸಾಧ್ವಿರೀತಾಂಬಲ, ಉಮಾಭಾರತಿರಂಥ'ವರನ್ನು ಬಿಟ್ಟುಬಿಡೋಣ. ಅವರ ಗುರುತು ಅವರು ಯಾವ ಲಿಂಗಕ್ಕೆ ಸೇರಿದ್ದರೆಂಬುದಕ್ಕಿಂತ ಶೋಷಕ ವರ್ಗ ಹಾಗೂ ಕೋಮುವಾದಿ ಸಿದ್ಧಾಂತದೊಂದಿಗೆ ಇರುವಂಥದ್ದು. ಆದರೆ ಆರೆಸ್ಸೆಸ್-ಬಿಜೆಪಿ ಕೂಟಗಳತ್ತ ಸೆಳೆಯಲ್ಪಡುತ್ತಿರುವ ಮಧ್ಯಮವರ್ಗದ ಒಂದು ವಿಭಾಗದ ಮಹಿಳೆಯರ ಸಾಮೂಹಿಕ ಕೋಮುವಾದೀಕರಣವನ್ನು ನಾವು ನಿರ್ಲಕ್ಷಿಸುವಂತಿಲ್ಲ. ಬಾಬ್ರಿ ಮಸೀದಿ ಕೆಡುವುದರಲ್ಲಿ ನೂರಾರು ಸ್ವಯಂ ಸೇವಕಿಯರು ಪಾಲ್ಗೊಂಡಾಗ ಪತ್ರಿಕೆಗಳು ಹಾಗೂ ಕೆಲವು ಮಹಿಳಾ ಸಂಘಟನೆಗಳು ಇದು ಇಂದು ಸಮಾಜ ಇಷ್ಟೊಂದು ಅಪರಾಧೀಕರಣಗೊಂಡಿದೆ ಎಂಬುದಕ್ಕೆ ನಿದರ್ಶನ ಎಂದೆಲ್ಲ ಪ್ರತಿಕ್ರಿಯಿಸಿದವು. ಆದರೆ ಯಾವುದೇ ರೀತಿಯ ಕೋಮುವಾದಿ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಬೇರೊಂದು ನೆಲೆಯಿಂದಲೇ ಅರ್ಥಮಾಡಿಕೊಳ್ಳಬೇಕಿದೆ.

ಊಳಿಗಮಾನ್ಯ ಪುರುಷಾಧಿಪತ್ಯವು ಮಹಿಳೆಯರ ಮೇಲಿನ ಹಿಡಿತಕ್ಕೆ ಸದಾ ಧರ್ಮವನ್ನು ಬಳಸಿಕೊಂಡಿದೆ. ಮಹಿಳೆಯರಿಗೆ ಸದಾ ಪೂಜೆ, ಹಬ್ಬ, ಉಪವಾಸದಂತಹ ಚಟುವಟಿಕೆಗಳಲ್ಲಿ ತೊಡಗಿಸಲಾಗಿದೆ. ಹಿಂದುಳಿದ ಪ್ರಜ್ಞೆಯಿಂದಾಗಿ ಹಾಗೂ ತಮ್ಮ ಸ್ಥಿತಿಯ ಬಗ್ಗೆ, ಪುರುಷಾಧಿಪತ್ಯ ಹಾಗೂ ಪ್ರಭುತ್ವದ ಬಗ್ಗೆ ವಿಸ್ತೃತ ರಾಜಕೀಯ ಅರಿವನ್ನು ಪಡೆಯಲು ಅವಕಾಶವಿಲ್ಲದಿರುವುದರಿಂದ ಮಹಿಳೆಯರು ತಮ್ಮ ದೈನಿಕ ನರಕದಿಂದ ಹೊರತರಬಲ್ಲ ರಕ್ಷಕರೆಂದು ಹಲವಾರು ದೇವರುಗಳನ್ನು, ಕಳ್ಳ ಸ್ವಾಮಿಗಳನ್ನು ನಂಬುತ್ತಾ ಬಂದಿದ್ದಾರೆ. ಸಮಸ್ಯೆ ಹೆಚ್ಚಿದಷ್ಟು ಅವರು ದೇವರ ಸುತ್ತ, ಹಲವಾರು ರೀತಿಯ ಮೂಢನಂಬಿಕೆಗಳ ಸುತ್ತ ಸುತ್ತುವುದು ಹೆಚ್ಚಾಗುತ್ತದೆ. ಬಿಜೆಪಿ-ವಿಶ್ವ ಹಿಂದು ಪರಿಷತ್ತಿನ ಕೂಟಗಳು ಹೊಸ ಹೊಸ ದೇವಸ್ಥಾನಗಳನ್ನು ಕಟ್ಟುವುದರಲ್ಲಿ ಹಾಗೂ ಹಳೆಯವನ್ನು 'ಪುನರುಜ್ಜೀರ್ಣ' ಮಾಡುವುದರಲ್ಲಿ ಯಜ್ಞ, ಆರತಿಗಳನ್ನು ನಡೆಸುವುದರಲ್ಲಿ ನಿರತವಾಗಿವೆ. ಇವೆಲ್ಲದರಲ್ಲೂ ಮಹಿಳೆಯರಿಗೆ (ನಿರ್ದಿಷ್ಟವಾಗಿ ಮೇಲ್ಜಾತಿ, ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ಮಹಿಳೆಯರಿಗೆ) ವಿಶೇಷ ಪಾತ್ರವನ್ನು ನೀಡಲಾಗುತ್ತದೆ. ಮೂಲೆ ಗುಂಪು ಮಾಡಿ ನಿರ್ಲಕ್ಷಿಸಲ್ಪಟ್ಟಿರುವ ಮಹಿಳೆಯರು ಇದರಲ್ಲಿ ಹೆಮ್ಮೆಯನ್ನು ಕಾಣುತ್ತಾರೆ. ಅಲ್ಲದೆ ಶಿವಸೇನೆ, ದುರ್ಗವಾಹಿನಿ ಮುಂತಾದ ಸಂಘಟನೆಗಳು ಶಿಶುವಿಹಾರಗಳನ್ನು, ಮಧ್ಯಾಹ್ನ ಭೋಜನದ ಯೋಜನೆಗಳು ಹಾಗೂ ಹಲವಾರು ಸಾಂಪ್ರದಾಯಿಕ ಸಮಾರಂಭಗಳನ್ನು ನಡೆಸುತ್ತಿವೆ. ಮಹಿಳೆಯರಿಗೆ ಇವುಗಳಲ್ಲಿ ಮುಂಚೂಣಿ ಪಾತ್ರವನ್ನು ನೀಡಲಾಗುತ್ತಿದೆ. ಅವರ 'ನಾಡಿನ ಮಕ್ಕಳ ಸಿದ್ಧಾಂತ' 'ನಾಡಿನ ಮಕ್ಕಳ ಮಾತೆಯರು' ಎಂದು ಮಹಿಳೆಯರಿಗೂ ವಿಸ್ತರಣೆಗೊಳ್ಳುತ್ತದೆ. ಸೇವೆ ಹಾಗೂ ತ್ಯಾಗ ಮಹಿಳೆಯರ

ಏಕಮಾತ್ರ ಜೀವನದ ಗುರಿ ಎಂಬ ಪುರುಷಾಧಿಪತ್ಯ ಸಿದ್ಧಾಂತಕ್ಕೆ ಹಿಂದುತ್ವವಾದಿಗಳು ಮಹಾನ್ 'ವೀರ ಕರ್ತವ್ಯ'ದ ತಿರುವನ್ನು ಕೊಟ್ಟು ಸೇವೆ ಎಂದರೆ ಒಬ್ಬ ವ್ಯಕ್ತಿಯಾಗಿ ಗಂಡಸಿನ ಸೇವೆಯಷ್ಟೇ ಅಲ್ಲ ಹಿಂದು ಗಂಡಸರ ಸೇವೆ, ದಮನಕ್ಕೆ ಅವಮಾನಕ್ಕೆ ಗುರಿಯಾಗಿರುವ ಹಿಂದು ರಾಷ್ಟ್ರಕ್ಕಾಗಿ ಹೋರಾಡುತ್ತಿರುವ ಹಿಂದು ಗಂಡಸರ ಸೇವೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ. ದೇಶವನ್ನು ಹೆಣ್ಣಾಗಿ, ಭಾರತಮಾತೆಯಾಗಿ, ದೇಶಕ್ಕಾಗುವ ಅವಮಾನ ಹೆಣ್ಣಿಗಾಗುವ ಅವಮಾನವಾಗಿ ಚಿತ್ರಿಸಲಾಗುತ್ತದೆ. ಅಸ್ತಿತ್ವದ ನಿರಾಕರಣೆಯಾದ ಮಹಿಳೆಗೆ ಸಮುದಾಯದ, ರಾಷ್ಟ್ರದ ವಿಶಾಲ ಗುರುತನ್ನು ನೀಡಲಾಗುತ್ತಿದೆ. ಮನೆಯ ಹೊರಗೆ ಕಾಲಿಡಲೂ ಅವಕಾಶವಿಲ್ಲದ ಸಂಕುಚಿತ ಜಾಗಕ್ಕೆ, ಅದೇ ಯಾಂತ್ರಿಕ ಬದುಕಿಗೆ ಸೀಮಿತಗೊಂಡಿದ್ದ ಮಹಿಳೆಯರಿಗೆ ಬಾಹ್ಯ ಜಗತ್ತಿನೊಳಗೆ ಒಂದಷ್ಟು ಸ್ಥಳಾವಕಾಶವನ್ನು ನೀಡಲಾಗುತ್ತಿದೆ. ಅಷ್ಟೇ ಅಲ್ಲದೆ ಕೋಮುವಾದಿ ಸಮಾರಂಭಗಳಲ್ಲಿ ಹಾಗೂ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಧರ್ಮದ / ಸಮುದಾಯದ ಮುಖಂಡರ ಅನುಮತಿಯೂ ಇರುತ್ತದೆ. ಮಹಿಳೆಯರ ಈ ಪಾತ್ರ ಕೌಟುಂಬಿಕ ವಿಚಾರಗಳಲ್ಲೂ ಸಹ ಅವರ ಶರಣಾಗತಿ ವರ್ತನೆಯನ್ನು ಹೆಚ್ಚಿಸುವುದರಿಂದ ಮನೆಯವರ ಒಪ್ಪಿಗೆಯೂ ಸಿಕ್ಕುತ್ತದೆ. ದಮನಕಾರಿ ಕುಟುಂಬ ರಚನೆಯ ವಿರುದ್ಧವಾಗಲೀ, ಅವರ ಬದುಕಿನಲ್ಲಿನ ಬದಲಾವಣೆಗಾಗಿಯಾಗಲೀ ಹೋರಾಟವಿಲ್ಲದ ಅವರು ಹೇಗಿದ್ದಾರೋ ಹಾಗೆಯೇ ತಮ್ಮ ಉದ್ದೇಶಿತ ಚಟುವಟಿಕೆಗಳಲ್ಲಿ ಮಹಿಳೆಯರನ್ನು ಕೋಮುವಾದಿಗಳು ತೊಡಗಿಸಿಕೊಳ್ಳುತ್ತಿದ್ದಾರೆ. (ತಮ್ಮ ಹಕ್ಕುಗಳಿಗಾಗಿ ಹಾಗೂ ಪುರುಷಾಧಿಪತ್ಯದ ವಿರುದ್ಧವಾಗಿ ಹೋರಾಡಬಯಸುವ ಮಹಿಳೆಯರು ಅದು ವ್ಯಕ್ತಿಗತ ನೆಲೆಯಲ್ಲೇ ಇರಲಿ, ಸಂಘಟನೆಯ ಮೂಲಕವೇ ಇರಲಿ, ಎದುರಿಸಬೇಕಾಗುವ ಪ್ರತಿರೋಧವನ್ನು ಇದಕ್ಕೆ ತುಲನೆಯಲ್ಲಿಟ್ಟು ನೋಡಿ.) ಕೋಮುವಾದಿ ಮಹಿಳೆಯರ ಪ್ರಸ್ತುತ ಅಚ್ಚಿಗೆ ಮತ್ತೊಂದು ಸುತ್ತು ಪ್ರತಿಗಾಮಿ, ಪುರುಷಾಧಿಪತ್ಯದ ಲೇಪನ ಹಚ್ಚಲ್ಪಡುತ್ತದೆ.

ಪುರುಷಾಧಿಪತ್ಯದ ನೆರವಿಗೆ

ಕೋಮುವಾದವು ಮಹಿಳೆಯರನ್ನು (ಹೌದು ಹಿಂದು ಮಹಿಳೆಯರನ್ನು ಮಾತ್ರ) ದೇವತೆಯರನ್ನಾಗಿ ಮತ್ತು ಮಹಾನ್ ಮಾತೆಯರನ್ನಾಗಿ ಚಿತ್ರಿಸುತ್ತದೆ. ಮಾನವ ಸಮಾಜದಲ್ಲಿ ಅವರಿಗೆ ಸಮಾನ ಸ್ಥಾನವನ್ನು ನಿರಾಕರಿಸುವ ಸಲುವಾಗಿಯೇ ಹೀಗೆ ಮಾಡಲಾಗುತ್ತದೆ. ಮಹಿಳೆಯ ಶರಣಾಗತಿಯ ಸಂಕೇತಗಳಾಗಿರುವ ಸಿಂಧೂರ, ಕೆಂಪು ಬಳೆಗಳು, ಮಂಗಲಸೂತ್ರ, ರೇಷ್ಮೆ ಸೀರೆ ಮುಂತಾದವುಗಳನ್ನು ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ಸಂಕೇತಗಳೆಂದು ಮತ್ತೆ ವೈಭವೀಕರಿಸಲಾಗುತ್ತಿದೆ. ಮಹಿಳಾ ಚಳುವಳಿ ಮತ್ತು ಇತರ ಪ್ರಗತಿಪರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳುವಳಿಗಳ ಪ್ರಭಾವದಿಂದಾಗಿ ಒಂದು ಮಟ್ಟಕ್ಕೆ ಕಡಿಮೆಯಾಗಿದ್ದ ಈ ಸಂಕೇತಗಳು ಹಿಂದೂ ಕೋಮುವಾದಿ ಸಂಹಿತೆಗಳಿಂದಾಗಿ ಮತ್ತೆ ಸ್ಥಾನವನ್ನು ಪಡೆಯುತ್ತಿವೆ. ದಕ್ಷಿಣ ದೆಹಲಿಯಲ್ಲಿನ ಹೋಟೆಲುಗಳು ಸಹ ಕರ್ವಾಚೌತ್ ಉತ್ಸವಗಳನ್ನು (ಗಂಡಸಿನ ದೀರ್ಘಾಯುಷ್ಯಕ್ಕಾಗಿ ಹೆಂಡತಿಯರು ಆಚರಿಸಬೇಕೆಂದು ಹೇಳಲಾಗುವ ಉತ್ಸವ) ಒಂದು ವಾರದ ಕಾಲ ಆಚರಿಸುತ್ತಿವೆ. ಸುಷ್ಮ ಸ್ವರಾಜ್‌ರಂಥ ಮಹಿಳಾ ಎಂ.ಪಿ.ಗಳು ದೊಡ್ಡ ಕುಂಕುಮ ಇಟ್ಟುಕೊಂಡು, ಭಾರತ ನಾರಿಯ ಮೇಕಪ್ಪಿನಲ್ಲಿ ಟಿವಿಯಲ್ಲಿ ಕಾಣಿಸಿಕೊಂಡು ಪತಿವ್ರತೆಯರ ಬಗ್ಗೆ ಬೋಧನೆಗಳನ್ನು ನೀಡುತ್ತಾರೆ. ಇವೆಲ್ಲವೂ ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರನ್ನು ಒಂದು ಹೆಜ್ಜೆ ಹಿಂದಕ್ಕೆ ತಳ್ಳುವ ಚಟುವಟಿಕೆಗಳಾದರೆ ಮಹಿಳೆಯನ್ನು ಕಗ್ಗತ್ತಲ ಓಬಿರಾಯನ ಕಾಲಕ್ಕೆ ತಳ್ಳುವ ಪ್ರಯತ್ನಗಳೂ ನಡೆದಿವೆ.

> **ಊಳಿಗಮಾನ್ಯ ಪುರುಷಾಧಿಪತ್ಯವು ಮಹಿಳೆಯರ ಮೇಲಿನ ಹಿಡಿತಕ್ಕೆ ಸದಾ ಧರ್ಮವನ್ನು ಬಳಸಿಕೊಂಡಿದೆ. ಮಹಿಳೆಯರಿಗೆ ಸದಾ ಪೂಜೆ, ಹಬ್ಬ, ಉಪವಾಸದಂತಹ ಚಟುವಟಿಕೆಗಳಲ್ಲಿ ತೊಡಗಿಸಲಾಗಿದೆ. ಹಿಂದುಳಿದ ಪ್ರಜ್ಞೆಯಿಂದಾಗಿ ಹಾಗೂ ತಮ್ಮ ಸ್ಥಿತಿಯ ಬಗ್ಗೆ, ಪುರುಷಾಧಿಪತ್ಯ ಹಾಗೂ ಪ್ರಭುತ್ವದ ಬಗ್ಗೆ ವಿಸ್ತೃತ ರಾಜಕೀಯ ಅರಿವನ್ನು ಪಡೆಯಲು ಅವಕಾಶ ವಿಲ್ಲದಿರುವುದರಿಂದ ಮಹಿಳೆಯರು ತಮ್ಮ ದೈನಿಕ ನರಕದಿಂದ ಹೊರತರಬಲ್ಲ ರಕ್ಷಕರೆಂದು ಹಲವಾರು ದೇವರುಗಳನ್ನು, ಕಳ್ಳ ಸ್ವಾಮಿಗಳನ್ನು ನಂಬುತ್ತಾ ಬಂದಿದ್ದಾರೆ.**

ರಾಜಸ್ಥಾನದ ರೂಪ ಕನ್ವರಳ 'ಸತಿ'ಯಿಂದ ಪ್ರಾರಂಭವಾಗಿ ಹಲವಾರು 'ಸತಿ'ಗಳನ್ನು ಹಿಂದು ಪ್ರತಿಗಾಮಿಗಳು ಗಟ್ಟಿಯಾಗಿ ಸಮರ್ಥಿಸಿದ್ದಾರೆ. 'ಸತಿ' ದೇಗುಲಗಳನ್ನು ಕಟ್ಟಿ 'ಸತಿ' ಉತ್ಸವಗಳನ್ನು ನಡೆಸಿದ್ದಾರೆ. ಸ್ತ್ರೀತನದ 'ಗತವೈಭವ'ವನ್ನು ಭಾವನಾತ್ಮಕವಾಗಿ ಕೊಂಡಾಡಲಾಗುತ್ತಿದೆ. ಪರಿಣಾಮವಾಗಿ ಸತಿ ಹೋಗುವ ಹಕ್ಕಿಗಾಗಿ ನಡೆದ ಮೆರವಣಿಗೆಗಳಲ್ಲಿ ಬಡತನದಲ್ಲಿ ಹಾಗೂ ಊಳಿಗಮಾನ್ಯ ಸಂಸ್ಕೃತಿಯಲ್ಲಿ ಮುಳುಗಿಹೋಗಿರುವ ಮಹಿಳೆಯರು ಪಾಲ್ಗೊಂಡಿದ್ದನ್ನು ನಾವು ನೋಡಬಹುದು. ಈ ಮೆರವಣಿಗೆಗಳನ್ನು ಬಿಜೆಪಿ ಮಹಿಳಾ ಮೋರ್ಚಾ ಸಂಘಟಿಸಿತ್ತು.

ಪುರಿ ಶಂಕರಾಚಾರ್ಯರಂಥವರು ದಮನಕಾರಿ ಪದ್ಧತಿಗಳಾದ ಸಾಂಪ್ರದಾಯಿಕ ಧಾರ್ಮಿಕ ವೇಶ್ಯಾವಾಟಿಕೆಯನ್ನು ಎತ್ತಿ ಹಿಡಿದು ಮತ್ತೆ ತರುತ್ತಿದ್ದಾರೆ. ಇದರಿಂದಾಗಿ ಜೋಗಿನಿಯರನ್ನು, ಬಸವಿಯರನ್ನು, ಪಾರ್ವತಿಯರನ್ನು, ದೇವದಾಸಿಯರನ್ನು, ದೇವಕಿಯರನ್ನು, ಜಂಥಿನಿಯರನ್ನು ಈ ರೀತಿಯ ಮಹಿಳೆಯರೆಲ್ಲರನ್ನು ಹಿಂದೂ ಪರಂಪರೆಯ ಪ್ರಕಾರ ದೇವರಿಗೆ ಮದುವೆ ಮಾಡಿಕೊಡಲಾಗುತ್ತದೆ. ಪವಿತ್ರೀಕರಿಸಲಾದ ಈ ಧಾರ್ಮಿಕ ವೇಶ್ಯಾವಾಟಿಕೆಯು ಬಡ ಶೋಷಿತ ಮಹಿಳೆಯರ (ಬಹುಪಾಲು ದಲಿತ ಸಮುದಾಯಗಳಿಗೆ ಸೇರಿದ ಮಹಿಳೆಯರ) ಬದುಕನ್ನು 'ಹಿಂದು' ಸಮಾಜದಲ್ಲಿ ಎಲ್ಲಾ ಗಂಡಸರ ಮೋಜಿಗೆ ಹಾಗೂ ಮರ್ಜಿಗೆ ತಳ್ಳುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ ಬಿಜೆಪಿ ಸರ್ಕಾರದ ಸುಧಾರಣಾ ಕ್ರಮದಲ್ಲಿ ಬಾಲಕಿಯರಿಗೆ ಗೃಹ ನಿರ್ವಹಣೆಯನ್ನು ಕಡ್ಡಾಯ ಪಠ್ಯವನ್ನಾಗಿ ಮಾಡುವ, ಅದರ ಮೂಲಕ ಲಿಂಗತಾರತ್ಮ್ಯವನ್ನು ಮತ್ತಷ್ಟು ಹೆಚ್ಚಿಸುವ, ಸಲಹೆಯೂ ಅಡಕವಾಗಿದೆ. ಜೀವನದ ಕನಸನ್ನು ರೂಪಿಸಿಕೊಳ್ಳುವ ವಯಸ್ಸಿನಲ್ಲಿ ಇವನ್ನು ಬೋಧಿಸಲಾಗುತ್ತದೆ. ಈ ಶಿಕ್ಷಣದ ಉಪ ವಿಷಯಗಳಾದ 'ವಕ್ತಿಗತ ಬೆಳವಣಿಗೆ', 'ಗಂಡಸನ್ನು ಸಂತೋಷಪಡಿಸುವ ಬಗೆ', 'ಅಡಿಗೆ ಹಾಗೂ ಶುದ್ಧೀಕರಣ' ಮುಂತಾದವು ಅವರ ಜೀವನದ ಮುಖ್ಯ ವಿಷಯಗಳೇ ಆಗಿ ಬಿಡುತ್ತವೆ. ಈ ಎಳೆಯ ಮನಸ್ಸುಗಳನ್ನು ಅವುಗಳ ಕ್ರಿಯಾಶೀಲ ಶಕ್ತಿಯಿಂದ ತಿರುಗಿಸಿ, ಆತ್ಮವಿಶ್ವಾಸ-ಆತ್ಮಾಭಿಮಾನದಿಂದ ವಂಚಿತರನ್ನಾಗಿ ಮಾಡಿ, ಸಾಂಪ್ರದಾಯಿಕ ಏಕರೂಪಿ ಹಿಂದು ಸ್ತ್ರೀಯಾಗುವತ್ತ ಸೆಳೆಯಲಾಗುತ್ತದೆ. ಜೀವನದಲ್ಲಿ ಉನ್ನತ ಗುರಿಗಳನ್ನಿಟ್ಟುಕೊಳ್ಳುವುದರಿಂದ ಹಾಗೂ ವಿಶಾಲ ಸಾಮಾಜಿಕ ಪ್ರಜ್ಞೆಯಿಂದ ಅವರು ವಂಚಿತರಾಗುತ್ತಾರೆ. ಹಿಂದು ನಿಯಮದ ಸಕ್ರಿಯ ಜಾರಿಯೆಂದರೆ ಸಣ್ಣ ವಯಸ್ಸಿನಲ್ಲೇ ಮದುವೆಮಾಡುವುದಾಗಿದೆ. ಅಲ್ಲಿಗೆ ಆಕೆ ಶಾಶ್ವತವಾಗಿ ಗೃಹ ನಿರ್ವಹಣೆಗೆ ಸೀಮಿತ ಗೊಳಿಸಲ್ಪಡುತ್ತಾಳೆ. ಪ್ರತಿಗಾಮಿ ಕೋಮುವಾದಿ ಸಂಘಟನೆಗಳು ಮಹಿಳೆಯರ ಶಿಕ್ಷಣದ ಏಕಮಾತ್ರ ಉದ್ದೇಶವೆಂದರೆ ಆಕೆ ತನ್ನ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕಾದುದಾಗಿದೆ ಎಂದು ಹೇಳುತ್ತವೆ. ಮಹಿಳೆಯರು ಉದ್ಯೋಗಕ್ಕೆ ಸೇರುತ್ತಿರುವುದು ಸಮಾಜದಲ್ಲಿನ ನಿರುದ್ಯೋಗಕ್ಕಿರುವ ಮುಖ್ಯ ಕಾರಣಗಳಲ್ಲೊಂದಾಗಿದೆ ಎಂದವು ಸಾರುತ್ತವೆ. ಇದರಿಂದ ಅವು ಒಂದೆಡೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಯನ್ನು ಮುರಿದರೆ ಮತ್ತೊಂದೆಡೆ ಮಹಿಳೆಯರನ್ನು ಉದ್ಯೋಗ ಕಸಿಯುತ್ತಿರುವವರನ್ನಾಗಿ ಮಾಡಿ ದಮನಿತ ಗಂಡು-ಹೆಣ್ಣಿನ ನಡುವೆ ವೈಷಮ್ಯವನ್ನು ಬೆಳೆಸುತ್ತವೆ.

ಬಿಜೆಪಿ ನೇತೃತ್ವದ ಸರ್ಕಾರವು ತೆಗೆದಿರುವ ಮತ್ತೊಂದು ಕೋಮುವಾದಿ ಮಹಿಳಾ ವಿರೋಧಿ ಕ್ರಮವೆಂದರೆ ಅತ್ಯಾಚಾರಿಗಳಿಗೆ ಮರಣದಂಡನೆ ವಿಧಿಸುವುದು ಎಂಬುದಾಗಿದೆ. ಒಂದೆಡೆ ಸಂಘಪರಿವಾರದ ವಿಶ್ವ ಹಿಂದು ಪರಿಷತ್, ಮಧ್ಯಪ್ರದೇಶದ ಜಾಬ್ವದಲ್ಲಿ ನಡೆದ ನನ್‌ಗಳ ಅತ್ಯಾಚಾರವನ್ನು ಸಮರ್ಥಿಸಿದರೆ, ಬನ್ವಾರಿ ದೇವಿಯ ಮೇಲೆ ಅತ್ಯಾಚಾರವೆಸಗಿದವರಿಗೆ ಸನ್ಮಾನ ನಡೆಸುತ್ತದೆ. ಇದೇ ಸರ್ಕಾರ ಅದನ್ನೊಂದು ದುರ್ಘಟನೆ ಎಂದು ಕರೆದು ವಿಮೆ ಮಾಡಿಸಲು ಮಹಿಳೆಯರಿಗೆ ಸೂಚಿಸುತ್ತದೆ.

ಇನ್ನೊಂದೆಡೆ ಅದ್ವಾನಿ 'ಅತ್ಯಾಚಾರಕ್ಕೆ ಅತ್ಯಂತ ಉಗ್ರ ಶಿಕ್ಷೆಯನ್ನು ವಿಧಿಸಬೇಕೆಂಬುದು ಸರ್ಕಾರದ ನಿಲುವಾಗಿದೆ' ಎಂದು ಹೇಳುತ್ತಾನೆ. (ಅವರ ಈ ಉದ್ದೇಶ ನಿಜವೇ ಆದಲ್ಲಿ ಸಾವಿರಾರು ಮಹಿಳೆಯರ ಅತ್ಯಾಚಾರಕ್ಕೆ ಕಾರಣರಾಗಿರುವ ಇವರೇ ಮೊದಲು ನೇಣುಗಂಬಕ್ಕೆ ಏರಬೇಕಾಗುತ್ತದೆ) ವಾಸ್ತವದಲ್ಲಿ ಇದು ಮಹಿಳೆಯರ ಬದುಕಿನ ಮೇಲೆ ಮತ್ತಷ್ಟು ಹಿಡಿತವನ್ನು ಸಾಧಿಸುವ ಸಂಚೇ ಆಗಿದೆ. ಇದು ಅತ್ಯಾಚಾರದ ಬಗ್ಗೆ ಆತಂಕವನ್ನು ಹೆಚ್ಚಿಸಿ ಏನೇ ಕಾರಣಕ್ಕೆ ಅದಾಗದಂತೆ ತಡೆಯಬೇಕೆಂಬ ಒತ್ತಡವನ್ನು ಮಹಿಳೆಯರ ಮೇಲೆ ಹೇರುತ್ತದೆ. ಗಂಡಸರನ್ನು ಆರೋಪಿಗಳನ್ನಾಗಿ ಮಾಡಿ ಶಿಕ್ಷಿಸುವುದನ್ನು ತಡೆಯಲು ಮಹಿಳೆಯರ ಮೇಲೆಯೇ ಅನೇಕ ರೀತಿಯ ತಡೆ ಹಾಗೂ ನಿಯಂತ್ರಣಗಳನ್ನು ಒಡ್ಡಿ, ಕಡ್ಡಾಯ ಉಡುಗೆ ಕಾಯ್ದೆ, ರಕ್ಷಣಾ ಉದ್ದೇಶಗಳಿಗಾಗಿ ಕಡ್ಡಾಯವಾಗಿ ಗಂಡಸಿನ ನೆರವು, ರಾತ್ರಿ ಕರ್ಫ್ಯೂ ಮುಂತಾದವನ್ನು ಇದರ ಮುಂದುವರಿಕೆಯಾಗಿ ಹೇರುವ ಎಲ್ಲಾ ಸಾಧ್ಯತೆಗಳೂ ಇವೆ. ಪ್ರಸ್ತುತ ಪರಿಸ್ಥಿತಿ ಎಂದರೆ ಅತ್ಯಾಚಾರದ ಪ್ರಕರಣಗಳಲ್ಲೆಲ್ಲಾ ಪುರುಷಾಧಿಪತ್ಯವೇ ಆಳ್ವಿಕೆ ನಡೆಸಿದೆ. ಅತ್ಯಾಚಾರ ಜಾಮೀನುರಹಿತ ಅಪರಾಧವಾದರೂ ಅತ್ಯಾಚಾರಿಗಳನ್ನು ಜಮಾನತ್ತಿನ ಮೇಲೆ ಬಿಡುಗಡೆ ಮಾಡಲಾಗುತ್ತಿದೆ. ಹಾಗೂ ಅಂತಿಮವಾಗಿ ಸಾಕ್ಷಿ, ಪುರಾವೆಗಳು ಇಲ್ಲವೆಂದು ಯಾವ ಶಿಕ್ಷೆಯೂ ಇಲ್ಲದೆ ಬಿಟ್ಟುಬಿಡಲಾಗುತ್ತಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ಯಾವ ಪ್ರಯತ್ನವೂ ಇಲ್ಲ. ಆದರೆ ಇದ್ದಕ್ಕಿದ್ದಂತೆ ಅತ್ಯಾಚಾರದ ಬಗ್ಗೆ ಈ ಕಾಳಜಿ ಹಾಗೂ ಅತ್ಯಾಚಾರಿಗಳ ವಿರೋಧ ಎಂಬುದು ಬಿಜೆಪಿ ಸರ್ಕಾರದ ಕುತಂತ್ರ ಹಾಗೂ ಆಷಾಢಭೂತಿತನವಲ್ಲದೆ ಮತ್ತೇನೂ ಅಲ್ಲ.

ಸಂಘ ಪರಿವಾರದ ಮಹಿಳಾ ವಿಭಾಗಗಳು ಅಗತ್ಯವಿರುವ ಮಹಿಳೆಯರಿಗೆಂದು ವರದಕ್ಷಿಣೆ ಸಂಗ್ರಹಣೆಯಲ್ಲಿ ತೊಡಗುತ್ತವೆ. ಮನೆಯೊಳಗೆ ಶಾಂತಿ ಕಾಪಾಡುವ ಸಲುವಾಗಿ (ಹಿಂದು ಪುರುಷ ಮೇಲ್ವಾಳಿಕೆಯನ್ನು ಕಾಪಾಡುವುದಕ್ಕಾಗಿ) ಮಹಿಳೆಯರು ಕೌಟುಂಬಿಕ ಹಿಂಸೆಯನ್ನು ಸಹಿಸಿಕೊಳ್ಳಬೇಕೆಂದು ಅವು ಹೇಳುತ್ತವೆ. ಅವರು ವಿವಾಹ ವಿಚ್ಛೇದನವನ್ನು ವಿರೋಧಿಸುತ್ತಾರೆ.

ಸಂಘ ಪರಿವಾರವು ಹಲವಾರು ಚಿತ್ರಗಳ ವಿರುದ್ಧ (ಅದು, ವಿಧವೆಯ ಬವಣೆಯನ್ನು ತೋರಿಸುವ 'ಫಣಿಯಮ್ಮ' ಇರಬಹುದು, ಅತ್ಯಾಚಾರಿಗಳು ಮೇಲ್ಜಾತಿಗೆ ಸೇರಿದವರೆಂದು ತೋರಿಸುವ 'ಬ್ಯಾಂಡಿಟ್ ಕ್ವೀನ್' ಇರಬಹುದು, ಅದರ ಮಿತಿಯಲ್ಲೇ ಮಹಿಳಾ ದನಿ ಎತ್ತುವ ಇತ್ತೀಚಿನ 'ಫೈರ್' ಇರಬಹುದು) ತನ್ನ ಅಪ್ರಜಾತಾಂತ್ರಿಕ ಸರ್ವಾಧಿಕಾರವನ್ನು ಹೇರುತ್ತಿದೆ. ಇದೆಲ್ಲವೂ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವ, ಅಶ್ಲೀಲತೆಯನ್ನು ವಿರೋಧಿಸುವ ಹೆಸರಿನಲ್ಲೇ ನಡೆಯುತ್ತದೆ.

'ಏಕರೂಪೀ ನಾಗರಿಕ ಸಂಹಿತೆ'ಯ ಹೆಸರಿನಲ್ಲಿ ವೈಯಕ್ತಿಕ ಕಾನೂನುಗಳ ಬದಲಾಗಿ ತಮ್ಮ ಪ್ರತಿಗಾಮಿ ಹಿಂದು ನಾಗರೀಕ ಸಂಹಿತೆಯನ್ನು ಜಾರಿ ಮಾಡುವ ಕುತಂತ್ರಿ ಬೇಡಿಕೆಯ ಮೂಲಕ ಮಹಿಳಾ ಚಳುವಳಿಗಳು ಮುಂದಿಟ್ಟಿದ್ದ ಪ್ರಜಾತಾಂತ್ರಿಕ ಏಕರೂಪಿ ನಾಗರಿಕ ಸಂಹಿತೆಯ ನ್ಯಾಯಬದ್ಧ ಬೇಡಿಕೆಯನ್ನು ಬಿಜೆಪಿ ಕೂಟವು ವ್ಯವಸ್ಥಿತವಾಗಿ ದಮನ ಮಾಡಿದೆ.

ಇದು ಕೋಮುವಾದ, ಪುರುಷಾಧಿಪತ್ಯ ಮೌಲ್ಯ ಸಾರವನ್ನು ಹೊಂದಿರುವ ಇದು, ಅತ್ಯಂತ ಕಠಿಣ ಶ್ರಮದ ಮೂಲಕ ಸಾಧಿಸಲಾದ ಎಲ್ಲಾ ಮಹಿಳಾ ಹಕ್ಕುಗಳನ್ನು ಸುಟ್ಟು ನಾಶ ಮಾಡಲು ಕೆನ್ನಾಲಗೆಗಳನ್ನು ಚಾಚುತ್ತಿದೆ.

ಹೆಚ್ಚಿದ ಹಿಡಿತ

ಬಹುಸಂಖ್ಯಾತ ಹಿಂದು ಸಂಹಿತೆ ಹಾಗೂ ಇನ್ನಿತರ ಎಲ್ಲಾ ವೈಯಕ್ತಿಕ ಕಾನೂನುಗಳು ಮುಸ್ಲೀಮ್, ಕ್ರಿಶ್ಚಿಯನ್, ಸಿಖ್, ಇತ್ಯಾದಿ-ತಮ್ಮ ಧಾರ್ಮಿಕ ಕೃತ್ಯಗಳ ಮೇಲೆ ಆಧಾರಿತವಾಗಿದ್ದು, ಇಂದಿನ ಸನ್ನಿವೇಶದಲ್ಲಿ ಯಾವ ಪ್ರಗತಿಪರ ಅಂಶವನ್ನು ಹೊಂದಿರದೆ ಮಹಿಳಾ ವಿರೋಧಿಯಾಗಿಯೇ ಇದೆ. ಆಳವಾದ ಪುರುಷಾಧಿಪತ್ಯ ಮೌಲ್ಯಗಳನ್ನು ಹೊಂದಿರುವ ಇವು, ಅಸಮಾನ ಕುಟುಂಬ ಹಾಗೂ ಪ್ರಭುತ್ವ ರಚನೆಯನ್ನು ಮುಂದುವರೆಸಿಕೊಂಡು ಹೋಗುವ ಸಲುವಾಗಿಯೇ ರಚಿತವಾಗಿವೆ. ವೈಯಕ್ತಿಕ ಕಾನೂನುಗಳು ಮಹಿಳೆಯನ್ನು ಅಡಿಯಾಳಾಗಿಟ್ಟು ಕೊಳ್ಳುವುದನ್ನೇ ಬಯಸುತ್ತವೆ. ಹಾಗಾಗಿ ಅವು ಆಯಾ ಧರ್ಮಗಳ ಹೆಸರಿನಲ್ಲಿ ಮದುವೆ, ವಿಚ್ಛೇದನ, ಜೀವನಾಧಾರ ಮುಂತಾದ ವಿಷಯಗಳಲ್ಲಿ ಮಹಿಳೆಯರ ಹಕ್ಕುಗಳನ್ನು ತೀವ್ರವಾಗಿ ನಿರ್ಬಂಧಿಸುತ್ತವೆ.

70ರ ದಶಕದಲ್ಲಿ ಮಹಿಳಾ ಚಳುವಳಿಯ ಬೆಳವಣಿಗೆಯೊಂದಿಗೆ ಈ ವೈಯಕ್ತಿಕ ಕಾನೂನುಗಳನ್ನು ತೀವ್ರವಾಗಿ ವಿರೋಧಿಸಲಾಯಿತು. ಏಕರೂಪಿಯಾದ ಲಿಂಗ ತಾರತಮ್ಯವಿಲ್ಲದ ನ್ಯಾಯಯುತ ನಾಗರೀಕ ಸಂಹಿತೆಯ ಬೇಡಿಕೆ ಮುಂದೆ ಬಂದಿತು.

ಧರ್ಮದ ಹಾಗೂ ಮಹಿಳೆಯರ ಬದುಕಿನ ಮೇಲೆ ಹಿಡಿತ ಸಾಧಿಸುವ ಅದರ ಕುತಂತ್ರಗಳ ವಿರುದ್ಧ ಬೇಡಿಕೆಗಳನ್ನು ಮಂಡಿಸಲಾಯಿತು. ಪ್ರಗತಿಪರ ಸಂಘಟನೆಗಳ ಬೆಂಬಲದೊಂದಿಗೆ ಅಲ್ಪ ಸಂಖ್ಯಾತ ಸಮುದಾಯದ ಒಳಗಿನಿಂದಲೇ ವೈಯಕ್ತಿಕ ಕಾನೂನಿನ ಬದಲಾವಣೆಗಾಗಿ ಒತ್ತಡ ಕಂಡುಬರತೊಡಗಿತು.

ಇದು ಮುಂದುವರೆಯುವ ಮೊದಲೇ, ಧರ್ಮದ ಸುತ್ತ ಸಮುದಾಯದ ಗುರುತನ್ನು ಹೆಣೆಯುವ ಹಿಂದೂ ಕೋಮುವಾದಿ ರಾಜಕೀಯ ಮೇಲ್ಮೈ ಸಾಧಿಸತೊಡಗಿತು. ಅದು ಮಹಿಳೆಯರ/ಜನರ ನಡುವಿನ ಎಲ್ಲಾ ಪ್ರಜಾತಾಂತ್ರಿಕ ಅಂಶಗಳನ್ನು ನಾಶ ಮಾಡುತ್ತಾ ಇಡೀ ಸಮೂಹದ ಮೇಲೆ ಧರ್ಮದ ಹಿಡಿತವನ್ನು ಪುನರ್‌ಸ್ಥಾಪಿಸಲು ಬಯಸಿತು. ಹಿಂಸೆಯನ್ನು ಒಳಗೊಂಡಂತೆ ಎಲ್ಲಾ ಸ್ತರದಲ್ಲೂ ಕೋಮುವಾದೀಕರಣ, ಪ್ರಾರಂಭವಾದ ಪರಿಣಾಮವಾಗಿ 3 ಅಂಶಗಳು ಅಲ್ಪ ಸಂಖ್ಯಾತ ಸಮುದಾಯಗಳಲ್ಲಿನ ಮಹಿಳೆಯರ ಬದುಕನ್ನು ಅತ್ಯಂತ ಸಂಕೀರ್ಣ ಹಾಗೂ ಅಂಧಮಯಗೊಳಿಸಿದವು.

ಸೇವೆ ಹಾಗೂ ತ್ಯಾಗ ಮಹಿಳೆಯರ ಏಕಮಾತ್ರ ಜೀವನದ ಗುರಿ ಎಂಬ ಪುರುಷಾಧಿಪತ್ಯ ಸಿದ್ಧಾಂತಕ್ಕೆ ಹಿಂದುತ್ವವಾದಿಗಳು ಮಹಾನ್ 'ವೀರ ಕರ್ತವ್ಯ'ದ ತಿರುವನ್ನು ಕೊಟ್ಟು ಸೇವೆ ಎಂದರೆ ಒಬ್ಬ ವ್ಯಕ್ತಿಯಾಗಿ ಗಂಡಸಿನ ಸೇವೆಯಷ್ಟೇ ಅಲ್ಲ ಹಿಂದು ಗಂಡಸರ ಸೇವೆ, ದಮನಕ್ಕೆ ಅವಮಾನಕ್ಕೆ ಗುರಿಯಾಗಿರುವ ಹಿಂದು ರಾಷ್ಟ್ರಕ್ಕಾಗಿ ಹೋರಾಡುತ್ತಿರುವ ಹಿಂದು ಗಂಡಸರ ಸೇವೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ.

ಎ) ಈ ಸಮುದಾಯದೊಳಗಿನ ಬಹುಪಾಲು ಪ್ರಗತಿಪರರು ತಮ್ಮ ಮೇಲೆ ಹಿಂದೂ ಸಂಹಿತೆಯು ಹೇರಿಕೆಯಾಗಬಹುದಾದ ಜೀವಂತ ಅಪಾಯ ಎದುರಾದುದರಿಂದ ಮೌನ ತಾಳಿದರು ಅಥವಾ ತಮ್ಮ ಧಾರ್ಮಿಕ ಆಚರಣೆಗಳನ್ನು, ಅವೆಷ್ಟೇ ಅನ್ಯಾಯದಿಂದ ಮಿತಿಗಳಿಂದ ಕೂಡಿದ್ದರೂ ಸಮರ್ಥಿಸಿಕೊಳ್ಳುವ ಸ್ಥಿತಿಗೆ ನೂಕಲ್ಪಟ್ಟರು.

ಬಿ) ಕೋಮುವಾದಿ ಬೆದರಿಕೆ ಹಾಗೂ ಹಿಂಸೆಯಿಂದಾಗಿ ಸಾಮಾಜಿಕ ಭದ್ರತೆ ಹಾಗೂ ಆರ್ಥಿಕ ನೆರವಿಗಾಗಿ ಮಹಿಳೆಯರು ಧಾರ್ಮಿಕ ಸಂಸ್ಥೆಗಳ ಮೇಲೆ ಅನಿವಾರ್ಯವಾಗಿ ಅವಲಂಬಿತರಾಗಬೇಕಾಗಿ ಬಂತು.

ಸಿ) ಸಮುದಾಯದೊಳಗೆ ಮೂಲಭೂತವಾದಿಗಳ ಹಾಗೂ ಧಾರ್ಮಿಕ ಮುಖಂಡರ ಹಿಡಿತ ಹೆಚ್ಚಾಗತೊಡಗಿತು. ಈ ಪರಿಸ್ಥಿತಿಯನ್ನು ತಮ್ಮ ಅಧಿಕಾರದ ಪುನಸ್ಥಾಪನೆ ಮಾಡಿಕೊಳ್ಳಲು ಅವರು ಬಳಸಿಕೊಳ್ಳತೊಡಗಿದರು. ಶಹಭಾನು ಪ್ರಕರಣಕ್ಕೆ ಮುಸ್ಲಿಂ ಮೂಲಭೂತವಾದಿಗಳಿಂದ ವ್ಯಕ್ತವಾದ ಪ್ರತಿಕ್ರಿಯೆ ಇದಕ್ಕೊಂದು ಉದಾಹರಣೆ.

ಆದ್ದರಿಂದ ಅಲ್ಪಸಂಖ್ಯಾತ ಸಮುದಾಯದೊಳಗಿನ ಧಾರ್ಮಿಕ ಮತ್ತು ಮೂಲಭೂತವಾದಕ್ಕೆ ತಡೆಒಡ್ಡಬೇಕಾದರೆ, ಅದಕ್ಕೆ ಕಾರಣವಾಗುತ್ತಿರುವ ಹಿಂದೂ ಕೋಮುವಾದದ ವಿರುದ್ಧದ ಸಕ್ರೀಯ ಹೋರಾಟದಿಂದ ಅದನ್ನು ಪ್ರಾರಂಭಿಸಬೇಕಾಗಿದೆ.

ಜವಾಬ್ದಾರಿ

ಕೋಮುವಾದ ಎಂಬುದು ಮಹಿಳಾ ಚಳುವಳಿ ಗಮನ ಹರಿಸಬೇಕಾದ ಮತ್ತೊಂದು ವಿಷಯವಷ್ಟೇ ಅಲ್ಲ ಎಂಬುದನ್ನು ಮೇಲಿನ ಅಂಶಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಇದು ಮಹಿಳಾ ಚಳುವಳಿಯ ಗಮನ ಕೇಂದ್ರೀಕರಿಸಬೇಕಾದ ಮುಖ್ಯ ವಿಷಯವಾಗಿದೆ. ಕೋಮುವಾದದ ವಿರುದ್ಧ ಹೋರಾಡಲು ವಿವಿಧ ಸಮುದಾಯಗಳ ಮಹಿಳೆಯರನ್ನು ಒಗ್ಗೂಡಿಸಬೇಕಿದೆ. ಕೋಮುವಾದವು ಎರಡು ಅಲಗಿನ ಕತ್ತಿಯಾಗಿದೆ. ಒಂದೆಡೆ ಅದು ಮಹಿಳೆಯರ ಹಕ್ಕುಗಳನ್ನು ದಮನಿಸುತ್ತದೆ. ಮತ್ತೊಂದೆಡೆ ಇರುವ ಅಲ್ಪ ಸ್ವಲ್ಪ ಹಕ್ಕುಗಳನ್ನು ಕಸಿದು ಮಹಿಳೆಯರನ್ನು ಸಂಕುಚಿತ ಗೋಡೆಗಳ ನಡುವಿನ ಕಗ್ಗತ್ತಲೆಗೆ ನೂಕುತ್ತದೆ. ಎಲ್ಲಾ ಮಹಿಳೆಯರು ಈ ವಾಸ್ತವದ ಬಗ್ಗೆ ಜಾಗೃತರಾಗಬೇಕಿದೆ. ಮಹಿಳಾ ಸಂಘಟನೆಗಳು ತಮ್ಮ ಪ್ರತಿಭಟನೆಯನ್ನು ಬಲಪಡಿಸಬೇಕಿದೆ.

ಇನ್ನೆರಡು ಮುಖ್ಯ ವಿಚಾರಗಳತ್ತ ಇಲ್ಲಿ ಗಮನ ಸೆಳೆಯುವ ಅಗತ್ಯವಿದೆ.

1. 'ರಾಮ ಜನ್ಮಭೂಮಿ ರಥಯಾತ್ರೆ' ಕರೆಗಳತ್ತ ಮಹಿಳಾ ಸಂಘಟನೆಗಳ ಕೆಲವು ಸದಸ್ಯೆಯರು ಹಾಗೂ ಕಾರ್ಯಕರ್ತೆಯರು ಸೆಳೆಯಲ್ಪಟ್ಟರು. ಕೆಲವೆಡೆ ಈ ಕಾರಣಕ್ಕೆ ವಿವಿಧ ಸ್ತರಗಳಲ್ಲಿ, ಸಂಘಟನೆಯಲ್ಲಿ ವಿಭಜನೆಯು ಬಂದಿತು. ಕೋಮುವಾದಿಗಳು ಈ ರೀತಿ ಮಹಿಳಾ ಸಂಘಟನೆಯೊಳಗೆ ವಿಭಜನೆ ತರುವಲ್ಲಿ ಸಫಲರಾಗಲು ಕಾರಣ ಆ ಸಂಘಟನೆಗಳು ಸದಸ್ಯರಿಗೆ ನೀಡಿದ ರಾಜಕೀಯದಲ್ಲಿನ ಶಿಕ್ಷಣದಲ್ಲಿನ ಕೊರತೆಯೇ ಆಗಿದೆ. ಏಕೆಂದರೆ ಹಲವು ಮಹಿಳಾ ಸಂಘಟನೆಗಳು ತಮ್ಮ ಕಾರ್ಯವ್ಯಾಪ್ತಿಯನ್ನು ನೇರವಾಗಿ ಗೋಚರಿಸುವ ಪುರುಷಾಧಿಪತ್ಯದ ವಿರುದ್ಧದ ಹೋರಾಟಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿವೆ. ಇಲ್ಲಿ ಪುರುಷಾಧಿಪತ್ಯವನ್ನು, ತೀರ ಮೇಲ್ ಪದರದಲ್ಲಿ ಕುಟುಂಬದೊಳಗಿನ ವ್ಯಕ್ತಿಯೊಬ್ಬ ನಡೆಸುವ ಹಿಂಸೆ ಎಂಬಂತೆ ಗ್ರಹಿಸಲಾಗಿದೆಯೇ ಹೊರತು ಧರ್ಮ ಮತ್ತು ಪ್ರಭುತ್ವದೊಂದಿಗಿನ ಅದರ ಜೀವಂತ ಹಾಗೂ ಆಳವಾದ ಸಂಬಂಧಗಳನ್ನು ನೋಡುತ್ತಿಲ್ಲ. ಇದರಿಂದಾಗಿ ತಮ್ಮ ತಮ್ಮ ಧರ್ಮ ಹಾಗೂ ಸಮುದಾಯದ ಸುತ್ತ ಕಟ್ಟಿಕೊಂಡಿರುವ, ತಪ್ಪು ಗ್ರಹಿಕೆ ಹಾಗೂ ಆಯಾ ಧರ್ಮದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಧೋರಣೆ ಹಾಗೇ ಮುಂದುವರಿಯುತ್ತದೆ. ಇದರೊಂದಿಗೆ ಹಿಂದು ಸಿದ್ಧಾಂತಿಗಳು ಹಾಗೂ ಧರ್ಮಾಂಧರು ಬಿತ್ತಿರುವ ಅಲ್ಪಸಂಖ್ಯಾತರ ಬಗೆಗಿನ ಪೂರ್ವಾಗ್ರಹಗಳು ಸೇರಿಕೊಂಡಿವೆ. ಪರಿಣಾಮವಾಗಿ ಉಳಿದಂತೆ ಪ್ರಜಾತಾಂತ್ರಿಕ ಪ್ರಜ್ಞೆಯನ್ನು ಹೊಂದಿರುವವರ ನಡುವೆಯೂ ಕೋಮುವಾದವು ಸುಲಭವಾಗಿ ಸ್ನೇಹಿತರನ್ನು ಕಂಡುಕೊಳ್ಳುತ್ತದೆ. ತಾನು ದಮನಿಸಲು ಬಯಸುವ ಜನರ ನಡುವೆಯೇ ಬೆಳೆಯುತ್ತದೆ. ಕೋಮುವಾದಿಗಳಿಂದ ಸಂಪೂರ್ಣವಾಗಿ ಅಪಹರಿಸಲ್ಪಟ್ಟ ಮಹಿಳಾ ಸಂಘಟನೆಗಳೂ ಇವೆ. ಕೋಮುವಾದವು ವೇಗವಾಗಿ ಸಂಘಟನೆಗಳ ಒಳಗೂ ಹಬ್ಬುತ್ತಿರುವ ಹಿನ್ನಲೆಯಲ್ಲಿ ಮಹಿಳಾ ಸಂಘಟನೆಗಳು ಆಗಿರುವ ತಪ್ಪುಗಳಿಂದ ಪಾಠಗಳನ್ನು ಕಲಿಯಬೇಕಿದೆ. ಕೋಮುವಾದಿ, ರಾಜಕೀಯದೊಂದಿಗೆ ರಾಜಿ ಇಲ್ಲದಂತೆ ಹೋರಾಡಬೇಕಾಗಿದೆ. ಮಹಿಳೆಯರನ್ನು ಧರ್ಮದ (ಮತ್ತು ಜಾತಿಯ) ಹಿಡಿತದಿಂದ ಹೊರತರಲು ಕಠಿಣ ಶ್ರಮವನ್ನು ಹಾಕಬೇಕಿದೆ.

ಮಹಿಳೆಯರ ಬದುಕಿನಲ್ಲಿ ಧರ್ಮದ ಪಾತ್ರವನ್ನು ಸ್ವಾನುಕಂಪ ದೃಷ್ಟಿಕೋನದಿಂದ ಪರಿಗಣಿಸುವುದು ಸರಿಯೇ, ಆದರೆ ಅದೇ ಸಮಯದಲ್ಲಿ ಧರ್ಮದ ಪ್ರತಿಗಾಮಿ ಪರಿಣಾಮಗಳ ಬಗ್ಗೆ ಮಹಿಳಾ ದೃಷ್ಟಿಕೋನದಿಂದ ವಿವರಿಸಿ, ಮಹಿಳೆಯರನ್ನು ಜಾಗೃತರನ್ನಾಗಿಸುವುದನ್ನು ನಿರ್ಲಕ್ಷಿಸಬಾರದು. ಅಲ್ಪಸಂಖ್ಯಾತ ಸಮುದಾಯದೊಳಗಿನ ಮಹಿಳೆಯರು ಎದುರಿಸುತ್ತಿರುವ ಸಂಧಿಗ್ದತೆಯ ಬಗ್ಗೆ ಸಂವೇದನಾಶೀಲರಾಗಿರುವ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಲ್ಲದೆ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಹಾಗೂ ಇತರೆ ಸಮಾನ ಆಸರೆ ವಿಷಯಗಳಲ್ಲಿ ಅವರೊಂದಿಗೆ ಒಗ್ಗೂಡುವತ್ತ ವಿಶೇಷ ಗಮನ ನೀಡಬೇಕು. ಅಲ್ಪಸಂಖ್ಯಾತರ ಮೇಲಿನ ದಾಳಿಯಿಂದಾಗಿ ಮಹಿಳಾ ಚಳುವಳಿಗೆ ಸಂಬಂಧಿಸಿದಂತೆ ಬಂದಿರುವ ಮತ್ತೊಂದು ತಿರುವೂ ಸಹ ಆತಂಕಕಾರಿಯಾದುದ್ದಾಗಿದೆ. ಶರಿಯತ್ ಮುಸ್ಲಿಂ ಕಾನೂನಿನಂತಹ ಧಾರ್ಮಿಕ ವಿಧಿ, ನಿಯಮ, ಆಚರಣೆಗಳ ವಿರುದ್ಧ ಹೋರಾಡುತ್ತ ಬರುತ್ತಿದ್ದ ಅಲ್ಪಸಂಖ್ಯಾತ ಸಮುದಾಯದೊಳಗಿನ ಪ್ರಜಾ ತಾಂತ್ರಿಕ ಮಹಿಳಾ ಸಂಘಟನೆಗಳು ಹಾಗೂ ಇತರೆ ಸಾರ್ವತ್ರಿಕ ಮಹಿಳಾ ಸಂಘಟನೆಗಳೊಳಗಿನ ಅಲ್ಪ ಸಂಖ್ಯಾತ ಸಮುದಾಯದ ಹಿನ್ನಲೆಯಿಂದ ಬಂದ ಮಹಿಳೆಯರಲ್ಲಿನ ಕೆಲವರು ಮತ್ತೆ ಧಾರ್ಮಿಕ ಮೂಲಭೂತವಾದದತ್ತ ಸರಿಯತೊಡಗಿದ್ದಾರೆ. ಇದುವರೆಗೆ ತಮ್ಮ ಶತೃಗಳೆಂದು ಪರಿಗಣಿಸಿದವರನ್ನೇ ಯಾವ ವಿಮರ್ಶೆಯೂ ಇಲ್ಲದೆ ಬೆಂಬಲಿಸತೊಡಗಿದ್ದಾರೆ. ಇದು ಒಂದೆಡೆ ಹಿಂದೂ ಕೋಮುವಾದದ ದುರಾಕ್ರಮಣಕ್ಕೆ ಪ್ರತಿಕ್ರಿಯೆಯಾಗಿ ತಮ್ಮ ಧರ್ಮ/ಸಮುದಾಯ ಸಂಸ್ಕೃತಿಯನ್ನು, ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬ ಮೂಲಭೂತವಾದಿಗಳ ಕರೆಗೆ ಬಲಿಯಾಗಿರುವುದರ ಪರಿಣಾಮವಾದರೆ ಮತ್ತೊಂದೆಡೆ ಹಿಂದೂ ಕೋಮುವಾದಿ ಭಯೋತ್ಪಾದನೆ ಮತ್ತು ಕಾಡುತ್ತಿರುವ ಅಭದ್ರತೆ ಇದಕ್ಕೆ ಕಾರಣವಾಗಿದೆ. ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಈ ಪ್ರತಿಕ್ರಿಯೆಯ ಹಿಂದೆ ಅಡಗಿರುವ ಅಪಾಯದ ಬಗ್ಗೆ ಎಚ್ಚರವಹಿಸಬೇಕಿದೆ. ಇದು ನಮ್ಮ ಮೇಲಿನ ದಮನವನ್ನು ಮುಂದುವರೆಸುತ್ತದೆ ಹಾಗೂ ತೀವ್ರಗೊಳಿಸುತ್ತದೆ. ಹಿಂದೂ ಕೋಮುವಾದದ ವಿರುದ್ಧ ಹೋರಾಡುತ್ತಲೇ ಮಹಿಳೆಯರ ಹಿತಾಸಕ್ತಿಯ ಬಗೆಗೆ ರಾಜಿಯಾಗದಂತೆ ತಮ್ಮ ಹಕ್ಕುಗಳಿಗಾಗಿಯೂ ನಾವು ಹೋರಾಟ ಮುಂದುವರಿಸಬೇಕಿದೆ. ಹಲವು ಅಡೆತಡೆಗಳು, ತೊಂದರೆಗಳು ಇದ್ದಾಗ್ಯೂ ಹೊರಬಂದು ಕೋಮುವಾದದ ಮತ್ತು ಮೂಲಭೂತವಾದದ ವಿರುದ್ಧ ಹೋರಾಡುತ್ತಿರುವ ಪ್ರಜಾತಾಂತ್ರಿಕ ಶಕ್ತಿಗಳೊಂದಿಗೆ ಹಾಗೂ ಎಲ್ಲಾ ದಮನಿತ ಮಹಿಳೆಯರೊಂದಿಗೆ ಕೈಗೂಡಿಸಬೇಕಿದೆ.

2. ನಾವಿಲ್ಲಿ ಅರ್ಥ ಮಾಡಿಕೊಳ್ಳಬೇಕಿರುವ ಮತ್ತೊಂದು ಅಂಶವೆಂದರೆ ಕೋಮುವಾದವು ಒಂದು ನಿರಂಕುಶ ರಾಜಕೀಯ ಮತ್ತು ಆರ್ಥಿಕ ನಡವಳಿಕೆಯಾಗಿದೆ. ಅದು ಕೆಲವು ಧರ್ಮಾಂಧ ವ್ಯಕ್ತಿಗಳ ಮತ್ತು ಸಂಘಟನೆಗಳ ಕೆಲಸವಷ್ಟೇ ಅಲ್ಲ. ಚಾರಿತ್ರಿಕವಾಗಿ ನಿರಂಕುಶತೆಯು ತೀವ್ರ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಂಡಿದೆ. ಅದು ಜನರ ಭ್ರಮ ನಿರಸನ ಹಾಗೂ ಹಿಂದುಳಿದ ಪ್ರಜ್ಞೆಯನ್ನು ಆಧರಿಸಿರುತ್ತದೆ. ಆರ್ಥಿಕ ವಿನಾಶಕ್ಕೆ, ಕುಸಿಯುತ್ತಿರುವ ಜೀವಕ್ಕೆ ಕಾರಣವಾಗಿರುವ ಉಚ್ಚವರ್ಗ ಹಾಗೂ ಪ್ರಭುತ್ವದಿಂದ ಜನರ ಗಮನವನ್ನು

> **ಬಿಜೆಪಿ ನೇತೃತ್ವದ ಸರ್ಕಾರವು ತೆಗೆದಿರುವ ಮತ್ತೊಂದು ಕೋಮುವಾದಿ ಮಹಿಳಾ ವಿರೋಧಿ ಕ್ರಮವೆಂದರೆ ಅತ್ಯಾಚಾರಿಗಳಿಗೆ ಮರಣದಂಡನೆ ವಿಧಿಸುವುದು ಎಂಬುದಾಗಿದೆ. ಒಂದೆಡೆ ಸಂಘಪರಿವಾರದ ವಿಶ್ವ ಹಿಂದು ಪರಿಷತ್, ಮಧ್ಯಪ್ರದೇಶದ ಜಾಬ್ವದಲ್ಲಿ ನಡೆದ ನನ್‌ಗಳ ಅತ್ಯಾಚಾರವನ್ನು ಸಮರ್ಥಿಸಿದರೆ, ಬನ್ವಾರಿ ದೇವಿಯ ಮೇಲೆ ಅತ್ಯಾಚಾರ ಎಸಗಿದವರಿಗೆ ಸನ್ಮಾನ ನಡೆಸುತ್ತದೆ. ಇದೇ ಸರ್ಕಾರ ಅದನ್ನೊಂದು ದುರ್ಘಟನೆ ಎಂದು ಕರೆದು ವಿಮೆ ಮಾಡಿಸಲು ಮಹಿಳೆಯರಿಗೆ ಸೂಚಿಸುತ್ತದೆ.**

ತಿರುಗಿಸಿ ಜನರ ನಡುವೆ ಇರುವ ಮತ್ತೊಂದು ಸಮುದಾಯವನ್ನು ಅದಕ್ಕೆಲ್ಲಾ ಕಾರಣವೆಂದು ತೋರಿಸಿ ಅವರ ವಿನಾಶದಲ್ಲೇ ಪರಿಹಾರವಿದೆಯೆಂದು ವೈಶಮ್ಯವನ್ನು ಬೆಳೆಸುವುದರ ಮೂಲಕ ಕೋಮುವಾದವು ಬೆಳೆಯುತ್ತದೆ. ಆದ್ದರಿಂದ ಕೋಮುವಾದವು ಪ್ರಧಾನವಾಗಿ ಶೋಷಕ ವರ್ಗಗಳ ಹಾಗೂ ಪ್ರಭುತ್ವದ ಯೋಜಿತ ನಡೆಯಾಗಿದೆ. ಅಲ್ಲದೆ ಪ್ರಭುತ್ವದ ಜನ ವಿರೋಧಿ ನೀತಿಗಳ ವಿರುದ್ಧ ತೀವ್ರಗೊಳ್ಳುವ ಪ್ರತಿರೋಧವನ್ನು ಹತ್ತಿಕ್ಕಲು ಅನುಕೂಲಕರವಾದ ಸಾಧನ ಸಹ ಇದಾಗಿದೆ. ನಿರಂಕುಶ ಪ್ರಭುತ್ವವೆಂಬುದು ಸರ್ವಾಧಿಕಾರಿ ಪ್ರಭುತ್ವವಾಗಿದ್ದು ಇರುವ ಪ್ರಜಾ ತಾಂತ್ರಿಕ ನಿಯಮಗಳನ್ನು ತೂರಿ ಅದು ಆಳ್ವಿಕೆ ನಡೆಸುತ್ತದೆ. ಇಲ್ಲೇನು ನಡೆಯುತ್ತಿದೆ ಎಂಬುದರೊಂದಿಗೆ ತುಲನೆ ಮಾಡಿ ನೋಡಿ. ತೀವ್ರ ಬಿಕ್ಕಟ್ಟು-ಹೆಚ್ಚಿ ಜನರು ಬೀದಿಗೆ ಎಸೆಯಲ್ಪಡುತ್ತಿದ್ದಾರೆ. ಎಲ್ಲಾ ನೀತಿಗಳೂ ಸಹ ಆಸ್ತಿವಂತ ವರ್ಗಗಳಿಗೆ, ಸಾಮ್ರಾಜ್ಯ ಶಾಹಿಗಳಿಗೆ ಹಾಗೂ ಭೂ ಮಾಲೀಕರಿಗೆ ಪೂರಕವಾಗಿವೆ. ಎಲ್ಲಾ ನೈಸರ್ಗಿಕ ಸಂಪತ್ತನ್ನು ಹಾಗೂ ಶ್ರಮಶಕ್ತಿಯನ್ನು ಲೂಟಿ ಮಾಡಲು ಮುಕ್ತ ಅವಕಾಶ ನೀಡಲಾಗಿದೆ. ಒಂದೆಡೆ ಸಮಸ್ಯೆಗಳು ತೀವ್ರಗೊಳ್ಳುತ್ತಿವೆ. ಮತ್ತೊಂದೆಡೆ ಈ ಶೋಷಣೆ ವಿರುದ್ಧ ಮಹಿಳೆಯರ/ಜನರ ಹೋರಾಟಗಳು ಬಲಗೊಳ್ಳುತ್ತಿವೆ. ಎಲ್ಲಾ ಸಂಸದೀಯ ಪಕ್ಷಗಳ (ಅದು ಬಿಜೆಪಿ ಇರಲಿ, ಕಾಂಗ್ರೆಸ್ ಇರಲಿ, ಮತ್ಯಾವುದೇ ಇರಲಿ) ಹಾಗೂ ಅವು ಪ್ರತಿನಿಧಿಸುವ ಶೋಷಕ ವರ್ಗಗಳ ಆಯ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ನಿರಂಕುಶ ವಿಧಾನವನ್ನು ಬೆಂಬಲಿಸುವುದು, ಅಳವಡಿಸುವುದೇ ಆಗಿದೆ. ಆದ್ದರಿಂದ ಕೋಮುವಾದದ ವಿರುದ್ಧ ಹೋರಾಟದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಯಾವುದೇ ಮಹಿಳಾ ಸಂಘಟನೆ ಅದನ್ನು ಪೋಷಿಸುತ್ತಿರುವ ಹಾಗೂ ಬೆಳೆಸುತ್ತಿರುವ ಶೋಷಕ ವ್ಯವಸ್ಥೆ/ ಪ್ರಭುತ್ವದ ವಿರುದ್ಧವೂ ಹೋರಾಡಬೇಕಿದೆ. ಕೋಮುವಾದವನ್ನು, ಮಹಿಳಾ ದಮನವನ್ನು ವಿಶಾಲ ಚೌಕಟ್ಟಿನೊಳಗಿಟ್ಟು ಅವುಗಳ ನಡುವಿರುವ ಅವಿನಾಭಾವ ಸಂಬಂಧಗಳೊಂದಿಗೆ ಅರ್ಥಮಾಡಿಕೊಳ್ಳದೆ ಬಿಡಿ ಬಿಡಿಯಾಗಿ ಪರಿಗಣಿಸಿ, ಪ್ರತಿಕ್ರಿಯಿಸಿದಲ್ಲಿ ಅದು ಅಂತಿಮವಾಗಿ ಸೋಲಿಗೆ ಕಾರಣವಾಗುತ್ತದೆ.

ಸೈದ್ಧಾಂತಿಕ ನೆಲೆಯಲ್ಲಿ ಹಾಗೂ ವಾಸ್ತವಿಕ ನೆಲೆಯಲ್ಲಿ ಕೋಮುವಾದಿ ದುರಾಕ್ರಮಣವನ್ನು ಎದುರಿಸ ಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಕೋಮುವಾದದ ರಾಜಕೀಯ ಹಾಗೂ ಅದರ ಅಪಾಯದ ಬಗ್ಗೆ ಚಳುವಳಿಯಲ್ಲಿ ತೊಡಗಿಸಿಕೊಂಡಿರುವ ಕಾರ್ಯಕರ್ತೆಯರ ನಡುವೆ ಆಳವಾದ ಅರಿವು ಮೂಡಿಸಲು ದಮನಿತ ಮಹಿಳೆಯರನ್ನು ಜಾಗೃತಗೊಳಿಸಲು ಅಲ್ಪಸಂಖ್ಯಾತ ಮಹಿಳೆಯರೊಂದಿಗೆ ಒಗ್ಗೂಡಲೂ, ಹೋರಾಟ ನಿರತ ಎಲ್ಲಾ ಪ್ರಜಾತಾಂತ್ರಿಕ ಶಕ್ತಿಗಳೊಂದಿಗೆ ಕೈಗೂಡಿಸಲು, ಅಗತ್ಯವಿರುವ ಕಾರ್ಯಯೋಜನೆಯನ್ನು ರೂಪಿಸಿ ಅಳವಡಿಸಬೇಕಾಗಿರುವುದು ಪ್ರತಿ ಮಹಿಳಾ ಸಂಘಟನೆಯ ಮುಂದಿರುವ ತುರ್ತಿನ ಜವಾಬ್ದಾರಿಯಾಗಿದೆ. ●

ಕೃಪೆ : ಮಹಿಳಾ ಜಾಗೃತಿ ಮತ್ತು ವಿಸ್ತಾರ್

ನನ್ನ ದನಿ



ನೊಂದ ದನಿಗಳು ಎಚ್ಚೆತ್ತು ಕೊಳ್ಳುವುದು ಯಾವಾಗ, ಭೂಮಿಯಲಿ ಕಣ್ಣು ತೆರೆದಾಗಿನಿಂದ ಚಾಕರಿಯೋ ಗಟ್ಟಿಯಾಗಿದೆ ಎತ್ತ ಕಡೆ ತಿರುಗಿನೋಡಿದರೂ, ಅದೆ ಗುಡಿಸಲು, ಅದೇ ಮನೆ, ಅದೇ ನಡತೆ, ಅದೇ ದುಡಿತ, ಕುಡಿತ, ನಸುರಗಟ್ಟಿದ ತಲೆ, ಅದೆ ನಾಗರಿಕತೆ, ಸುತ್ತಮುತ್ತಲಿನ ಜನರನ್ನ, ಜಗತ್ತನ್ನ ನೋಡಿಯಾದರು ಕಲಿಯಬಾರದೆ?

ಕಂಪ್ಯೂಟರೀಕರಣ ಯುಗದಲ್ಲಿ, ಶನಿಕೆ ಗುದ್ದಾಲಿಗಳಿಗೆ ರಜ ಸಿಗುವುದಂತು ಗ್ಯಾರಂಟಿ, ಹೀಗಿದ್ದರೆ ನಮ್ಮ ಜನರು ಎಂದು ಯಾವಾಗ ಎಲ್ಲಿ, ಹೇಗೆ, ತಿಳಿವಳಿಕೆಯಿಂದ ಬದುಕಬೇಕು? ಒಡೆಯನ ಕಣದಲ್ಲಿನ ಹೊಟ್ಟಲ್ಲಿ ಹೊಟ್ಟಾಗಿ ಮಣ್ಣಲ್ಲಿ ಮಣ್ಣಾಗಿ ಸುಟ್ಟು ಸುರಟಿ ಹೋಗುತ್ತಾರೆ.

ಬೆಟ್ಟದಷ್ಟು ದುಡಿದರು, ಹಿಡಿಯಷ್ಟು ಅನ್ನಹಾಕುತ್ತಾರೆ ಅವರು ಮಾತ್ರ ತಿಂದು ತೇಗಿ ತಿಮಿರ ತೀರಿಸಿಕೊಳ್ಳುತ್ತಾರೆ. ಅವರ ಮನೆಯವರು ಒಂದು ಹಳೆ ಸೀರೆ ಕೊಟ್ಟರೆ ನಮ್ಮ ಹೆಣ್ಣು ಮಗಳಿಗೆ ಅದೆ ಸಂಪತ್ತು, ಅವರ ಹುಡುಗ ಅದೆ ಸೀರೆಯನ್ನು, ಹಿಡಿದು ಸೆಳೆದಾಗ ಮೌನ, ಯಾಕೆಂದರೆ, ಉಪ್ಪು ತಿಂದ ಮನೆಯ ವಸ್ತು, ಇತ್ತ ಹೆಣ್ಣು ಮಗಳ ತಂದೆ ಕಣ್ಣಾರ ನೋಡಿದರು, ಅಲ್ಲಿ ನಡೆದದುಕ್ಕೆ ತನ್ನ ತನ್ನ ಕುರುಡು, ಎಂದು ನನ್ನ ದನಿಗಳಿಗೆ, ಎಚ್ಚರಿಕೆಯಾಗುವುದು, ನನ್ನ ಸುತ್ತಮುತ್ತಲಿನ ಉಸಿರುಗಳಿಗೆ ಉಸಿರಾಡಲಾಗದೆ ಇರುವಾಗ, ನಾನೋಡದೆ ಇರುವೆ ಬೇರೆ ಕಡೆ !

ಎಂಥಹ ಹೊಡೆತಗಳನ್ನು ನುಂಗುತ್ತಿರಬೇಕು. ಅಲ್ಲಿ ಇಲ್ಲಿ ನಮ್ಮಲ್ಲಿ ಪಕ್ಕದಲ್ಲಿ ಕೆಲವರು, ರಾಜಕೀಯ ಮೊಸಳೆಗಳನ್ನು ಊರ ಕೆರೆಗೊ, ಕುಂಟೆಗೊ ಅಲ್ಲದೆ ತನ್ನ ಮನೆಯ ಮಡಿಕೆಯಲ್ಲಿಟ್ಟುಕೊಂಡು ಅವರಿಗೆ. ಗದ್ದುಗೆ ಹಾಕಿ, ಮನುಷ್ಯನ ಆಸ್ತಿಯಾದಾ ಓಟನ್ನ ಕಿತ್ತು ಅವರಿಗೆ ಕೊಟ್ಟು, ಅವರ ಹೇಸಿಗೆಯನ್ನು ನಕ್ಕಿ ಅವರಿಂದಲೆ, ಇತರ ಜನರಿಗೆ ಅನ್ಯಾಯ ಎಸಗುವುದು, ದಿನ ನಿತ್ಯ ನಾನೋಡುತ್ತಿರುವ ಬೆಂಕಿಯಂಥ ಗುಳಿಗೆಗಳು ಇವು. ಹೀಗಿರುವಾಗ, ನನ್ನ ನಮ್ಮ ಜನರೇಕೆ? ಯಾವಾಗ ಎಚ್ಚರಗೊಳ್ಳುತ್ತಾರೆ. ಎಲ್ಲಾರ ಬದುಕು ಬೇಕಾಗುವುದು ಯಾವಾಗ,

ಅದಕ್ಕೇ...ಹೇಳುವುದು ಕ್ರಾಂತಿ ಪುರುಷರು, ತನ್ನ ಸಾಧನೆಯಿಂದಲೆ ತನ್ನ ಬದುಕು ನೆಲೆ ನಿಂತುಕೊಳ್ಳುವುದು. ನೊಂದ ಎಲ್ಲಾ ದನಿಗಳೆ ಎಚ್ಚರವಾಗಿರಿ.

○ ಎಸ್.ಎಂ. ವೆಂಕಿ

ಜಾಗತೀಕರಣದ ಐಡಿಯಾಲಜಿ

ನಾವೆಲ್ಲರೂ ಅಷ್ಟೆ. ವಿಜ್ಞಾನವೆಂದರೆ ಆರಾಧಿಸುತ್ತೇವೆ. ವೈಜ್ಞಾನಿಕ ವಿಚಾರವೆಂದರೆ ಪುಳಕಿತರಾಗಿಬಿಡುತ್ತೇವೆ. ಮೊನ್ನೆ ಟೀಚರೊಬ್ಬರನ್ನು 'ಜಾಗತೀಕರಣ'ವೆಂದರೇನೆಂದು ಕೇಳಿದಾಗ ಅವರ ಉತ್ತರ "ಎಚ್ಚೆತ್ತುಕೊಳ್ಳುವುದು' ಎಲ್ಲ ವಿಧದಲ್ಲೂ ವ್ಯಕ್ತಿ ಅರಿವನ್ನು ಪಡೆದುಕೊಳ್ಳುವುದು" ಎಂಬುದಾಗಿತ್ತು. ಈ ಉತ್ತರದಲ್ಲಿ ಸತ್ಯಾಂಶವಿಲ್ಲದಿಲ್ಲ. ಅತ್ಯಾಧುನಿಕ ತಂತ್ರಜ್ಞಾನದ ಆವಿಷ್ಕಾರ ಮತ್ತು ಪ್ರಗತಿ ಎಲ್ಲರಲ್ಲೂ ಅನೇಕಾನೇಕ ಭರವಸೆಗಲನ್ನು ಹುಟ್ಟುಹಾಕಿವೆ. ಅಲ್ಲದೆ, "ಮೆದುಳು ಇಂದು ಕೈಗಾರೀಕೀಕರಣ"ಗೊಂಡು ವ್ಯಕ್ತಿ ಅಸಾಧ್ಯ ಚಮತ್ಕಾರಗಳನ್ನು ಪ್ರದರ್ಶಿಸುತ್ತಿದ್ದಾನೆ. ವ್ಯಕ್ತಿಗೆ ಹೊಸ ಆತ್ಮವಿಶ್ವಾಸ ಮೂಡಿ, ತನ್ನ ಸರ್ವ ಸಾಮರ್ಥ್ಯವನ್ನು ಕಂಡುಕೊಳ್ಳಲು ತನ್ನ ವರ್ಗ, ಜಾತಿ, ಲಿಂಗ, ಧರ್ಮ ಇವುಗಳ ಮಿತಿಗಳನ್ನು ಮೀರಿ "ವಿಶ್ವ ಪ್ರಜ್ಞೆ"ಯನ್ನು ಗಳಿಸಲು ಪ್ರಯತ್ನಿಸಿ, ಅನೇಕ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾನೆ. ಹೀಗೆ ಜಾಗತೀಕರಣದ ಪರಿಣಾಮವಾಗಿ ಸಕಾರಾತ್ಮಕ ಬೆಳವಣಿಗೆಗಳು ಆಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಜಾಗತಿಕ ಮಾರುಕಟ್ಟೆಯ ನೀತಿಯಿಂದಾಗಿ, ಮಾರುಕಟ್ಟೆಯಲ್ಲಿ ಉಂಟಾಗಿರುವ ಸ್ಪರ್ಧೆ ಗ್ರಾಹಕ ವಸ್ತುಗಳಿಗೆ ಏಕ ರೀತಿಯ ಗುಣಮಟ್ಟ ಮತ್ತು ಏಕ ರೀತಿಯ ಬೆಲೆಗಳನ್ನು ರೂಪಿಸಿದೆ. ಅಲ್ಲದೆ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಕಾಣಿಸಿಕೊಂಡಿವೆ. ಈ ಉದ್ಯೋಗಾವಕಾಶಗಳಿಗೆ ತಕ್ಕಂತೆ ವೃತ್ತಿಪರ ಶಿಕ್ಷಣ ಎಲ್ಲಾ ವರ್ಗದ ಜನತೆಗೂ ಒಂದಲ್ಲ ಒಂದು ವಿಧದಲ್ಲಿ ದೊರೆಯುವಂತೆಯೂ ಆಗಿದೆ.

ಹೀಗಿದ್ದರೂ, ಜಾಗತೀಕರಣ ಪ್ರಕ್ರಿಯೆ ಮಾಹಿತಿಯನ್ನು ಗುಟ್ಟಾಗಿಸಿ ಕೆಲವರನ್ನು ಮಾತ್ರ 'ಸುಖ ಸಂಸ್ಕೃತಿ'ಯ ಅರಮನೆಯೊಳಗೆ ಬರಮಾಡಿಕೊಳ್ಳುತ್ತದೆ. ಉಳಿದವರನ್ನು ಅಸೂಯಪರರನ್ನಾಗಿಸುತ್ತದೆ. ಅಲ್ಲದೆ, ಜಾಗತೀಕರಣ ಪ್ರಕ್ರಿಯೆಯನ್ನು ವಿರೋಧಿಸಿ, ಪರ್ಯಾಯವಾದ 'ಸ್ವದೇಶಿ' ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದೆಂದರೆ, ಜಾಗತೀಕರಣಕ್ಕೆ ಅಡಿಪಾಯ ಹಾಕಿಕೊಟ್ಟಂತೆಯೇ ಆಗುತ್ತದೆ. ಹಾಗಾದರೆ ಇದರ ಹಿಂದಿರುವ ಸೈದ್ಧಾಂತಿಕ ಚೌಕಟ್ಟು ಯಾವುದು? ಈ ಲೇಖನದಲ್ಲಿ ಈ ಪ್ರಶ್ನೆಯನ್ನು ಪ್ರಧಾನವಾಗಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ.

"ಐಡಿಯಾಲಜಿ" ಪದದ ಅರ್ಥ

ಅನೇಕ ಸಲ ನಾವೆಲ್ಲರೂ 'ಐಡಿಯ' ಎಂಬ ಪದವನ್ನು ಬಳಸುತ್ತೇವೆ. ಸಾಮಾನ್ಯವಾಗಿ ಒಂದು ಆಲೋಚನೆ, ಒಂದು ಉಪಾಯ ಎಂಬ ಅರ್ಥಗಳನ್ನು ಆ ಪದ ಸೂಚಿಸುತ್ತದೆ. ಸಿದ್ಧಾಂತ, ತತ್ವ ಎಂಬ ಪದಗಳಿಗೆ ಸಂವಾದಿಯಾದ ಇಂಗ್ಲೀಷ್ ಪದ "ಐಡಿಯಾಲಜಿ". ಅನೇಕ ಆಲೋಚನೆಗಳ



ಒಂದು ಸಮೂಹ ಅಥವಾ ಚಿಂತನದ ತುಣುಕುಗಳು ತರ್ಕಬದ್ಧವಾಗಿ ವಾಸ್ತವವನ್ನು ಜನಕ್ಕೆ ಕಟ್ಟಿಕೊಡುವುದು ಎಂಬ ಅರ್ಥವನ್ನು ಆ ಪದ ಒಳಗೊಂಡಿದೆ. ಈ ಪದ ಮೊಟ್ಟ ಮೊದಲ ಬಾರಿಗೆ 1797ರಲ್ಲಿ ಡೆಸ್ಟುಟ್ ದಿ ಟ್ರೆಸಿ ಎನ್ನುವ ಫ್ರೆಂಚ್ ವಿದ್ವಾಂಸನಿಂದ ಚಲಾವಣೆಗೆ ಬಂದಿತು. ಆತನ ವಿವರಣೆಯೆಂದರೆ ಆಲೋಚನೆಗಳ ವಿಜ್ಞಾನವೇ ಐಡಿಯಾಲಜಿ. ಅದು ಯಾವುದೇ ಸಂದೇಹ ಅಥವಾ ಗೊತ್ತಿಲ್ಲದರ ಬಗ್ಗೆ ಸೂಚಿಸುವುದಿಲ್ಲ. 'ಅವೈಜ್ಞಾನಿಕ ಭೂತಕ್ಕೆ (ಹಿಂದಿನದ್ದು) ಆಧುನಿಕರು ಕಂಡುಕೊಂಡ ವೈಜ್ಞಾನಿಕ ಉತ್ತರವೇ ಐಡಿಯಾಲಜಿ. ಇಂದು ಈ ಪದಕ್ಕೆ ವಿಸ್ತಾರವಾದ ಅರ್ಥ ಪ್ರಾಪ್ತಿಯಾಗಿದೆ. ಯಾವುದೇ ಒಂದು ಕ್ರಿಯೆ ಅಥವಾ ನುಡಿಯ ಹಿಂದೆ ಒಂದು ಐಡಿಯಾಲಜಿ ಇರುತ್ತದೆ. ಈ ಐಡಿಯಾಲಜಿ ವ್ಯಕ್ತಿಯನ್ನು ಕ್ರಿಯಾಶೀಲ ವಾಗಿಸುತ್ತದೆ. ಆಲೋಚನೆಗೆ ಸಿಡಿಮದ್ದಿನಂತೆ ಇದು ಕಾರ್ಯನಿರ್ವಹಿಸುತ್ತದೆ. ಇದರ ಕಾರ್ಯ ವಿಧಾನ ಮೂರು ರೀತಿಯದ್ದಾಗಿರುತ್ತದೆ. :

1) ವಾಸ್ತವವನ್ನು ಸರಳೀಕರಿಸುವುದು,
2) ವಾಸ್ತವದ ಬಗ್ಗೆ ಆದೇಶವನ್ನೀಯುವುದು, ಹಾಗೂ
3) ವಾಸ್ತವವನ್ನು ಸಮರ್ಥಿಸುವುದು.

ನಿದರ್ಶನವೊಂದರಿಂದ ಮೇಲಿನವುಗಳನ್ನು ಮತ್ತಷ್ಟು

ಜಾಗತೀಕರಣ ಪ್ರಕ್ರಿಯೆ, ಮಾಹಿತಿಯನ್ನು ಗುಟ್ಟಾಗಿಸಿ ಕೆಲವರನ್ನು ಮಾತ್ರ 'ಸುಖ ಸಂಸ್ಕೃತಿ'ಯ ಅರಮನೆಯೊಳಗೆ ಬರಮಾಡಿಕೊಳ್ಳುತ್ತದೆ. ಉಳಿದವರನ್ನು ಅಸೂಯಪರರನ್ನಾಗಿಸುತ್ತದೆ. ಅಲ್ಲದೆ, ಜಾಗತೀಕರಣ ಪ್ರಕ್ರಿಯೆಯನ್ನು ವಿರೋಧಿಸಿ, ಪರ್ಯಾಯವಾದ 'ಸ್ವದೇಶಿ' ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದೆಂದರೆ, ಜಾಗತೀಕರಣಕ್ಕೆ ಅಡಿಪಾಯ ಹಾಕಿಕೊಟ್ಟಂತೆಯೇ ಆಗುತ್ತದೆ. ಹಾಗಾದರೆ ಇದರ ಹಿಂದಿರುವ ಸೈದ್ಧಾಂತಿಕ ಚೌಕಟ್ಟು ಯಾವುದು?

○ ಡಿ. ಡೊಮಿನಿಕ್

ಸ್ಪಷ್ಟಪಡಿಸಿಕೊಳ್ಳಬಹುದು. "ಅಹಿಂಸಾ ಸಿದ್ಧಾಂತ" ಎಂದಾಕ್ಷಣ ನಮಗೆ ನೆನಪಾಗುವುದು ಗಾಂಧೀಜಿ. ಆತ ವಾಸ್ತವವನ್ನು ಅರ್ಥೈಸಿದುದು 'ಅಹಿಂಸೆ'ಯ ನೆಲೆಯಲ್ಲಿ. ಆದರೆ ಈ ಸಿದ್ಧಾಂತ ಕ್ರಿಯಾಶೀಲವಾಗುವುದು ಹೀಗೆ: ನಾವು ಹಿಂಸೆಯನ್ನು ತೊರೆಯಬೇಕು, ಯಾವುದೇ ಜೀವಿಗೆ ನೋವನ್ನುಂಟು ಮಾಡಬಾರದು ಎಂದು ಹೇಳುವ ಗಾಂಧೀಜಿ ಉದಯಿಸಿದ್ದು ಬನಿಯಾ ಜಾತಿಯಿಂದ. ವ್ಯಾಪಾರಿ ಕುಟುಂಬದ ವ್ಯಕ್ತಿ. ಒಬ್ಬ ವ್ಯಾಪಾರಿಗೆ ಲಾಭ ಅಥವಾ ನಷ್ಟ ಉಂಟಾಗುವುದು ಅಹಿಂಸೆ ಮತ್ತು ಹಿಂಸೆಯಿಂದ. ಪ್ರತಿಭಟನೆ, ಗಲಭೆ, ಹಿಂಸೆ ಇರುವ ಎಡೆಗಳಲ್ಲಿ ವ್ಯಾಪಾರ ಸಾಧ್ಯವಿರುವುದಿಲ್ಲ. ಸಂಭ್ರಮ, ಶಾಂತಿ, ಅಹಿಂಸೆ ಇದ್ದಾಗಲಷ್ಟೇ ವ್ಯಾಪಾರ ಸಾಧ್ಯ. ಲಾಭ ಸಾಧ್ಯ, ಆದ್ದರಿಂದ ಆರ್ಥಿಕ ವ್ಯಾಪಾರ ವಹಿವಾಟು ನಡೆಯಬೇಕಾದರೆ 'ಅಹಿಂಸಾವಾದ' ಜಾರಿಯಾಗಬೇಕು. ಇದು ಅಹಿಂಸಾವಾದದ ಕ್ರಿಯಾಶೀಲತೆ. ಹೀಗೆ ಯಾವುದೇ ಐಡಿಯಾಲಜಿಯೂ ಸಹ ತನ್ನದೇ ಆದ ಹಿತಾಸಕ್ತಿಗಳನ್ನು ಹೊಂದಿರುತ್ತದೆ. ಅಲ್ಲದೆ ಹಿತಾಸಕ್ತಿಗಳನ್ನು ಪೋಷಿಸಿ ಬೆಳೆಸುತ್ತಿರುತ್ತದೆ.

ಆದ್ದರಿಂದ ಜಾಗತೀಕರಣದ ಹಿಂದಿರುವ ಸಿದ್ಧಾಂತ. ಏನು? ಚಾರಿತ್ರಿಕವಾಗಿ ನೋಡಿದರೆ ಈ ಸಿದ್ಧಾಂತಕ್ಕೆ ವಿಜ್ಞಾನದ ಬುನಾದಿಯನ್ನು ಹಾಕಿದವರು ಫ್ರಾನ್ಸ್ ದೇಶದ ಸಿದ್ಧಾಂತಿ ಡೆಕಾರ್ಟ್ ಆತನ ಪ್ರಕಾರ "ನಾನು ಆಲೋಚಿಸುವುದರಿಂದಾಗಿ ಅಸ್ತಿತ್ವದಲ್ಲಿದ್ದೇನೆ". ಅಂದರೆ ಭೌತಿಕವಾದ ಅಸ್ತಿತ್ವವನ್ನು ಅಮೂರ್ತಗೊಳಿಸಿ, ಭೌತಿಕ ಜಗತ್ತನ್ನು ವಿಭಾಗಿಸುವುದು. ಆ ಮೂಲಕ ಉತ್ಪಾದನಾ ಸಂಬಂಧಗಳನ್ನು ಅಮೂರ್ತಗೊಳಿಸುವುದು. ಡೆಕಾರ್ಟ್‌ನ ನಂತರ ನ್ಯೂಟನ್ ಹಾಗೂ ಫ್ರಾನ್ಸಿಸ್ ಬೇಕನ್ ವಿಜ್ಞಾನವನ್ನು ಕ್ರಮಕ್ರಮವಾಗಿ ಜಾರಿಗೊಳಿಸಿದರು. ಹೀಗೆ ಆರಂಭವಾದ ಆಲೋಚನಾ ಪ್ರಕ್ರಿಯೆ ಆಧುನಿಕ ವೈಜ್ಞಾನಿಕ ಕ್ರಾಂತಿಯಾಗಿ ಕೈಗಾರಿಕಾ ಕ್ರಾಂತಿಗೆ ನಾಂದಿಯಾಯಿತು. ಇಲ್ಲಿ ಆದ ಒಂದು ಮಹತ್ವದ ಬದಲಾವಣೆಯೆಂದರೆ ಪ್ರಕೃತಿಯನ್ನು ವಸ್ತುನಿಷ್ಠವಾಗಿ ಪ್ರತಿನಿಧೀಕರಿಸಿದ್ದು. ಪ್ರಕೃತಿಯೆಂದರೆ ಒಂದು ಯಂತ್ರ. ಸರಳವಾದದ್ದು, ಸಮಸ್ಯೆಯಿಲ್ಲದ್ದು. ವಿಜ್ಞಾನವೆಂದರೆ, ಈ ಪ್ರಕೃತಿಯನ್ನು ಪ್ರತಿನಿಧಿಸುವುದು. ಅಷ್ಟು ಮಾಡಿದಾಗ ಸ್ಫಟಿಕದಂತೆ ಪಾರದರ್ಶಕವಾದ ಪ್ರಕೃತಿಯ ನಿಯಮಗಳು ನಮ್ಮ ಗ್ರಹಿಕೆಗೆ ಗೋಚರವಾಗುತ್ತವೆ. ಅವುಗಳನ್ನು ನಾವು ನಿಯಂತ್ರಿಸಬಹುದು. ಅವುಗಳ ಮೇಲೆ ಯಜಮಾನ್ಯವನ್ನು ಸ್ಥಾಪಿಸಬಹುದು.

ಈ ಧೋರಣೆಗಳು ಸಾಮಾಜಿಕವಾಗಿ ಅನುಷ್ಠಾನಕ್ಕೆ ಬಂದದ್ದು ಫ್ರೆಂಚ್ ಕ್ರಾಂತಿ (1789)ಯ ಅನಂತರದಲ್ಲಿ. ಚರ್ಚಿನ ನಿಯಂತ್ರಣ ಕ್ಷೀಣಿಸಿ, ವಿಜ್ಞಾನಿ, ಸಿದ್ಧಾಂತಿ ಮತ್ತು ಬಂಡವಾಳಗಾರ ಸಾಮಾಜಿಕ ಬದುಕಿನ ಅನಿವಾರ್ಯ ಅಂಗಗಳಾಗಿಬಿಟ್ಟರು. ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವ ಮುಂತಾದ ಕಲ್ಪನೆಗಳು ಸಾಮ್ರಾಜ್ಯಶಾಹಿ ಬಂಡವಾಳಗಾರನ ಅಧಿಕಾರವನ್ನು, ಕ್ರೌರ್ಯವನ್ನು ಮರೆ ಮಾಚಲು ಮೌಲ್ಯಗಳಾಗಿ ಚಲಾವಣೆಗೆ ಬಂದವು. ಆಗಲೇ ಗನ್ ಪೌಡರ್, ದಿಕ್ಸೂಚಿ ಮತ್ತು ಬೈಬಲ್ ಒಂದಾಗಿ ಹೊಸ

> **ಆಧುನಿಕತೆ ಅಥವಾ ವೈಜ್ಞಾನಿಕ ಕ್ರಾಂತಿ ಆದದ್ದೇ ಈ ವಸ್ತುನಿಷ್ಠ ಮಾದರಿಯ ಅಧ್ಯಯನದಿಂದ. ಎಲ್ಲೆಲ್ಲಿ ವಸಾಹತು ನೆಲೆಗಳು ಜಾರಿಯಾದವೋ ಅಲ್ಲೆಲ್ಲ ಶಿಕ್ಷಣ, ಆಡಳಿತ, ಮತ ಪ್ರಚಾರ, ಆಸ್ಪತ್ರೆ ಮುಂತಾದ ಸಾಂಸ್ಕೃತಿಕ ಸಂಸ್ಥೆಗಳನ್ನು ಹುಟ್ಟುಹಾಕುವ ಮೊದಲು, ಆಯಾ ಸ್ಥಳಗಳ ಬಗ್ಗೆ ಮಾಹಿತಿಯನ್ನು ಒಟ್ಟುಗೂಡಿಸಿದ್ದು ಈ ವಸ್ತುನಿಷ್ಠ ಅಧ್ಯಯನ ಕ್ರಮದಿಂದ. ಈ ಮೂಲಕ ಮೂಲನಿವಾಸಿಗಳ ಚರಿತ್ರೆಯನ್ನು ಪುನರ್ ನಿರ್ಮಿಸಲಾಯಿತು. ಆಯಾ ಜನಾಂಗಗಳ ಮಾನವ ಶಾಸ್ತ್ರೀಯ ಅಧ್ಯಯನಗಳು ಹೊರಬಂದು, ಸಾಂಸ್ಕೃತಿಕ ಅಧ್ಯಯನಗಳ ಮೂಲಕ ಈ ಜನಾಂಗಗಳ ಪ್ರಜ್ಞೆಯನ್ನು ತಿರಿಚಿದ್ದು ಈ ಅಧ್ಯಯನ ಕ್ರಮದಿಂದಲೇ. ಈ ಅಧ್ಯಯನದಲ್ಲಿ ವ್ಯಕ್ತಿ ನಿಷ್ಠತೆಗೆ ಸ್ಥಳವಿಲ್ಲ.**

ಭೌಗೋಳಿಕ ಭೂ ಭಾಗಗಳನ್ನು ಶೋಧಿಸಿ, ಆಕ್ರಮಿಸಿಕೊಂಡು, ಅನಾಗರೀಕರನ್ನು ನಾಗರೀಕರನ್ನಾಗಿಸುವ ಜವಾಬ್ದಾರಿಯನ್ನು ಪಾಶ್ಚಾತ್ಯ ರಾಷ್ಟ್ರಗಳು ಹೊತ್ತುಕೊಂಡದ್ದು. ಹೀಗೆ ವಿಜ್ಞಾನದಲ್ಲಿ ಪ್ರಕೃತಿಯನ್ನು ನಿಯಂತ್ರಿಸಿದ್ದು, ಸಾಮಾಜಿಕವಾಗಿ ಯಜಮಾನ್ಯ ಸ್ಥಾಪನೆ ಮತ್ತು ಸಾಮಾಜಿಕ ಧಮನವಾಗಿ ಭಾಷಾಂತರಗೊಂಡಿತು.

ಲಿಬರಲಿಸಂ : ಜಾಗತೀಕರಣಕ್ಕೆ ಪ್ರಬಲವಾದ ಪುಷ್ಟಿ ದೊರೆತದ್ದು ಇಂಗ್ಲೆಂಡ್‌ನ ಬೋಂಥಮ್, ಜಾನ್‌ಲಾಕ್, ಜೇಮ್ಸ್‌ಮಿಲ್ ಮತ್ತು ಇತರ ಸಿದ್ಧಾಂತಿಗಳಿಂದ. ಇವರುಗಳು ಮಂಡಿಸಿದ ಸಿದ್ಧಾಂತವೇ ಲಿಬರಲಿಸಂ. ಇದನ್ನು ಕನ್ನಡದಲ್ಲಿ "ಉದಾರವಾದ"ವೆಂದು ತಪ್ಪಾಗಿ ಅನುವಾದಿಸಿದ್ದಾರೆ. ಅದನ್ನು "ಸ್ವಯಂ ತಂತ್ರವಾದ"ವೆಂದು ಅನುವಾದಿಸುವುದು ಸೂಕ್ತವೆನಿಸುತ್ತದೆ. ಈ ಸಿದ್ಧಾಂತದ ಮುಖ್ಯ ನಿಯಮಗಳೆಂದರೆ -

1) ನಿಯಂತ್ರಿಕ ಸರ್ಕಾರ

2) ಬಹುರೂಪಿ ಸಮಾಜ ಹಾಗೂ

3) ಮುಕ್ತ ಆಯ್ಕೆಗಳಿಗಾಗಿ ಅಪರಿಮಿತ ವ್ಯಾಪ್ತಿ

ಇದರ ನೈತಿಕತೆಯೆಂದರೆ "ಯೂಟಿಲಿಟಿ" ಅಥವಾ ಪ್ರಾಯೋಜನಿಕತೆ. ಸಾಮಾಜಿಕವಾಗಿ ಈ ಸಿದ್ಧಾಂತ ಜಾತ್ಯಾತೀತ ನಿಲುವನ್ನು ತಾಳುತ್ತದೆ. "ತಾಳಿದವನು ಬಾಳಿಯಾನು" ಎಂಬ ಗ್ರಹಿಕೆ ಇದರದ್ದು. ಅದರಂತೆ ಎಲ್ಲರಿಗೂ ಸುಖದಾಯಕ ಬದುಕೆಂದರೆ ಪ್ರತಿಯೊಬ್ಬ ವ್ಯಕ್ತಿಯ ಆಶೋತ್ತರಗಳಿಗೆ ಬೆಳವಣಿಗೆಯ ಅವಕಾಶ ಮತ್ತು ಅಧಿಕಾರ ಎಟುಕುವಂತಹ ಸಾಮಾಜಿಕ ವ್ಯವಸ್ಥೆ ಇರಬೇಕು. ರಾಜಕೀಯವಾಗಿ ಸರ್ಕಾರ ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಿ, ಪೋಷಿಸಬೇಕು. ಅದರ ಆದ್ಯ ಕರ್ತವ್ಯವೆಂದರೆ ರಕ್ಷಣೆ, ಕಾನೂನು ಮತ್ತು ವ್ಯವಸ್ಥೆಯನ್ನು ನೋಡಿಕೊಳ್ಳುವುದು. ಅಂದರೆ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುವುದು. ಆರ್ಥಿಕವಾಗಿ, ಈ ಸಿದ್ಧಾಂತ ಸಾಧಿಸುವುದೆಂದರೆ ವ್ಯಕ್ತಿ ಉತ್ಪಾದಿಸಲು, ವಿನಿಮಯ ಮಾಡಲು ಮತ್ತು ವ್ಯಾಪಾರ ಮಾಡಲು ಮುಕ್ತನಾಗಿರಬೇಕು. ಅಲ್ಲದೆ, ಆತ ಸ್ವಂತ ಆಸ್ತಿಯನ್ನು ಖರೀದಿಸಲು ಅಥವಾ ಮಾರಲು ಸ್ವತಂತ್ರನಿರಬೇಕು. ಇಂಥ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ತಲೆ ಹಾಕಬಾರದು. ಈ ಆರ್ಥಿಕತೆಗೆ ಸರ್ಕಾರ ಮೂಲಭೂತ ಸೌಕರ್ಯಗಳಾದ ಸಾರಿಗೆ, ಸಂಪರ್ಕ, ಅಂಚೆ ಮುಂತಾದವುಗಳನ್ನು ಒದಗಿಸಬೇಕು.

ಹೀಗೆ ಈ "ಸ್ವಯಂ ತಂತ್ರವಾದ"ದಲ್ಲಿ ಮೂಲಭೂತವಾಗಿ ಇರುವುದು "ಲೇಸೆಝ್ ಫೇರ್" ಐಡಿಯಾಲಜಿ. ಅಂದರೆ "ವ್ಯಕ್ತಿ ಮುಕ್ತನಾಗಿರಲು ಬಿಡಿ" ಎನ್ನುವ ಆದೇಶ. ವ್ಯಕ್ತಿ ಶ್ರೇಷ್ಠ. ಆತನ ಈ ಶ್ರೇಷ್ಠತೆಗೆ ಯಾವುದೇ ಅಡ್ಡಿ ಇರಕೂಡದು. ಇದೇ ವ್ಯಕ್ತಿವಾದ ಅಥವಾ ಸ್ವಯಂತಂತ್ರವಾದ.

ಈ ಸಿದ್ಧಾಂತದ ಜೈವಿಕ ತರ್ಕ ಡಾರ್ವಿನ್ನನ ವಿಕಾಸವಾದಕ್ಕೆ ಮೊರೆ ಹೋಗುತ್ತದೆ. ಅದರಂತೆ, 'ಸ್ವ ಆಸಕ್ತಿ' ಮಾನವ ಸ್ವಭಾವದಲ್ಲಿರುವ ಮೂಲಗುಣ. ಅದರಂತೆ ಅಯೋಗ್ಯನೊಬ್ಬ ಈ ಸಮಾಜದಲ್ಲಿ ಜೀವಿಸಲು ಅರ್ಹನಲ್ಲ. ಸಾಮಾಜಿಕ ಬದುಕೆಂಬುದು ಹೋರಾಟ ಮತ್ತು ಸ್ಪರ್ಧೆಯಿಂದ ಕೂಡಿರುತ್ತದೆ. ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಾರದ ವ್ಯಕ್ತಿ ಜೀವಿಸುವ ಹಕ್ಕನ್ನು ಹೊಂದಿರುವುದಿಲ್ಲ. ಇಂಥ ವ್ಯಕ್ತಿಗೆ ಸರ್ಕಾರ ಯಾವುದೇ ರೀತಿಯ ಸಹಾಯ ನೀಡಕೂಡದು. ಒಟ್ಟಿನಲ್ಲಿ ಬದುಕುವ ಹಕ್ಕು ಶಕ್ತಿವಂತನಿಗೆ ಮಾತ್ರ ಮೀಸಲು. ಅಥವಾ ಈಗಿನಂತೆ 'ಹಣ' ಇರುವವನಿಗೆ ಮಾತ್ರ ಮೀಸಲು. ಈ ಸಿದ್ಧಾಂತಕ್ಕೆ ಮೂಲ ಆಧಾರವೆಂದರೆ ನಿಸರ್ಗದಲ್ಲಿರುವ ಬದುಕು. ಪ್ರಾಣಿ ಪಕ್ಷಿಗಳಿಗೆ ಸಹಜವೆನಿಸಿದ್ದರೂ, ಮಾನವ ಸಮಾಜದಲ್ಲಿ ಅದನ್ನು ಸಮರ್ಥಿಸುವುದು ಅತಾರ್ಕಿಕವಾಗುತ್ತದೆ. ಅಲ್ಲದೆ ಡಾರ್ವಿನ್ನಿನ ವಿಕಾಸವಾದ ಜನಾಂಗ ದ್ವೇಷದಿಂದ ಕೂಡಿದ್ದು, ವಸಾಹತೀಕರಣದ ಸಂದರ್ಭದಲ್ಲಿ ಮೂಲ ನಿವಾಸಿಗಳನ್ನು ಗುಲಾಮಗಿರಿಗೆ ತಳ್ಳಿ, ಅವರ ಅಸ್ತಿತ್ವವನ್ನು ಧ್ವಂಸ ಮಾಡಿದ್ದು ಈ ಸಿದ್ಧಾಂತದಿಂದಲೇ.

ಈ ಮೇಲಿನ ಸಿದ್ಧಾಂತಕ್ಕೆ ಪೂರಕವಾಗಿರುವ ಇತರ ಚಿಂತನಗಳನ್ನು ಈ ಕೆಳಗೆ ಹೀಗೆ ವಿವರಿಸಬಹುದು :

"ರಾಷ್ಟ್ರ" ಅಥವಾ ಪ್ರಭುತ್ವ (ಸ್ಟೇಟ್)

ಮೇಲೆ ಚರ್ಚಿಸಿದ ಐಡಿಯಾಲಜಿ ವಾಸ್ತವ ರೂಪವನ್ನು ಪಡೆದದ್ದು ಈ ಪರಿಕಲ್ಪನೆಯಿಂದ. ಪಾಶ್ಚಾತ್ಯರು ಜಗತ್ತಿನ ಬೇರೆ ಬೇರೆ ಕಡೆ ಹೋಗಿ ತಮ್ಮ ವಸಾಹತು ಕೇರಿಗಳನ್ನು ಸ್ಥಾಪಿಸಿ, ಅಲ್ಲಿನ ಸಂಪನ್ಮೂಲಗಳನ್ನು ದೋಚಲು ಹಾಕಿಕೊಂಡ ಹುನ್ನಾರವೇ ಈ "ರಾಷ್ಟ್ರ" ಅಥವಾ "ಪ್ರಭುತ್ವ" ಎನ್ನುವ ಪರಿಕಲ್ಪನೆಗಳು. ಈ ಮೂಲಕ ರಾಜಕೀಯ "ಭೌಗೋಳಿಕ ಸೀಮಾರೇಖೆ"ಯನ್ನು ಎಳೆದು ಅದನ್ನು ಆಕ್ರಮಿಸಿಕೊಂಡದ್ದು. "ಭಾರತ" ಎನ್ನುವ ರಾಷ್ಟ್ರ ಉದಯವಾದದ್ದೇ ಈ ಆಕ್ರಮಣದಿಂದ. ಇಲ್ಲಿನ

(20ನೇ ಪುಟಕ್ಕೆ)

ದಲಿತ ಬುದ್ಧಿಜೀವಿಗಳು ಮತ್ತು ಹಿಂದುಳಿದ ವರ್ಗಗಳ ಬುದ್ಧಿಜೀವಿಗಳು...

ಎಲ್ಲ ಜಾತಿಗಳ ಪ್ರಜ್ಞಾವಂತರಿಗೆ ಮನವಿ ಮಾಡುವಷ್ಟು ಮಾತ್ರ ಪ್ರಭಾವವಿರಬಹುದಾದ ಈ ಬುದ್ಧಿಜೀವಿಗಳು ಸಂಘಟಿತವಾಗಿ ಏನನ್ನೂ ಮಾಡಲಾಗುತ್ತಿಲ್ಲ; ಲೋಹಿಯಾ ಟ್ರಸ್ಟ್, ಸಮಾಜವಾದಿ ಶಿಬಿರ, ಮಾನವ ಮಂಟಪ, ಜನಮತ-ಹೀಗೆ ಬಗೆಬಗೆಯ ಜಾತ್ಯಾತೀತ ಸಮಾಜ ನಿರ್ಮಾಣದ ಚಟುವಟಿಕೆಯಲ್ಲಿ ತೊಡಗಿರುವ ಇವರು ವ್ಯಾಪಕವಾಗಿ ಕೆಲಸ ಮಾಡಲಾಗುತ್ತಿಲ್ಲ, ಹಾಗೂ ಅಂಥಾ ಸಂಘಟನಾ ಬಲವೂ ಇವರಿಗಿಲ್ಲ ಎಂಬ ವಾಸ್ತವ ನಮ್ಮ ಕಣ್ಣೆದುರಿಗೇ ಇದೆ. ಈ ವರ್ಗದ ಬುದ್ಧಿಜೀವಿಗಳಿಗೆ ಇರುವ ವ್ಯಾಪಕ ಪ್ರಭಾವವುಳ್ಳ ವೇದಿಕೆಗಳು ಅಥವಾ ಸಂಘಟನೆಗಳೆಂದರೆ ದಲಿತ ಸಂಘಟನೆಗಳು ಮಾತ್ರ. ಹಿಂದುಳಿದ ವರ್ಗಗಳ ಬುದ್ಧಿಜೀವಿಗಳು, ಎಲ್ಲೋ ಕೆಲವರು ಮಾತ್ರ ಕಮ್ಯುನಿಸ್ಟ್ ಪಕ್ಷದ ಮಾಜಿ, ಹಾಲಿ ಅಥವಾ ಆತ್ಮದ ಮಟ್ಟದ ಸದಸ್ಯರಿರಬಹುದು; ಇನ್ನು ಕೆಲವರು ಸಮಾಜವಾದಿ ಪಕ್ಷಗಳ ಹಳೆಯ ಗುಂಗಿನಲ್ಲಿರಬಹುದು, ಅಷ್ಟೆ. ಒಕ್ಕೂಟ, ಜಾತಿವಿನಾಶ ವೇದಿಕೆ ಮುಂತಾದ ಸಂಘಟನೆಗಳನ್ನು ರೂಪಿಸಿದ ಈ ಬುದ್ಧಿಜೀವಿಗಳಲ್ಲನೇಕರು ಆನಂತರ ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘಗಳ ಜೊತೆಗಿದ್ದವರೇ ಹೊರತು ತಮ್ಮ ಜಾತಿಗಳ ಜೊತೆಗಿನ ಸಾವಯವ ಸಂಬಂಧವನ್ನು ಉಳಿಸಿಕೊಂಡವರಲ್ಲ, ಹಾಗೂ ಆ ರೀತಿ ಉಳಿಸಿಕೊಳ್ಳುವುದು ಸಾಧ್ಯವೂ ಇರಲಿಲ್ಲ.

○ ನಟರಾಜ್ ಹುಳಿಯಾರ್

ಕಳೆದ ವರ್ಷ ಅರಸೀಕೆರೆಯಲ್ಲಿ ನಡೆದ "ಕೋಮುವಾದದ ನೆರಳಲ್ಲಿ ದಲಿತರು" ಎಂಬ ವಿಚಾರ ಸಂಕಿರಣದಲ್ಲಿ ದಲಿತ ನಾಯಕರಾದ ಶ್ರೀಧರ ಕಲಿವೀರ, "ಈ ಮತೀಯವಾದದ ಕಾಲದಲ್ಲಿ ಓ.ಬಿ.ಸಿ. ಇಂಟಲೆಕ್ಚುಯಲ್ಸ್ (ಹಿಂದುಳಿದ ವರ್ಗಕ್ಕೆ ಸೇರಿದ ಬುದ್ಧಿಜೀವಿಗಳು) ಏನು ಮಾಡುತ್ತಿದ್ದಾರೆ? ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿಲ್ಲ" ಎಂಬರ್ಥ ಬರುವ ಮಾತನ್ನಾಡಿದರು. ಅವರ ಆ ಗಂಭೀರ ಆಕ್ಷೇಪಣೆಯಲ್ಲಿ ಅರ್ಥವಿತ್ತು. ಈ ಬಗ್ಗೆ ಯೋಚಿಸತೊಡಗಿದಂತೆಲ್ಲ ಬಗೆಬಗೆಯ ಸಂಘಟನೆಗಳಲ್ಲಿ ತೊಡಗಿರುವ, ಬಿಡಿಬಿಡಿಯಾಗಿ ಈಗಲೂ ಸಮಾಜದ ಕೆಲಸ ಮಾಡುತ್ತಿರುವ ಅಥವಾ ಮಾಡಿ ಸುಮ್ಮನಾದಂತಿರುವ, ಹುಟ್ಟಿನಿಂದ ಹಿಂದುಳಿದ ವರ್ಗಕ್ಕೆ ಸೇರಿರುವ ಅನೇಕ ಬುದ್ಧಿಜೀವಿಗಳು ನನ್ನ ಕಣ್ಣೆದುರು ತೇಲಿ ಬಂದರು. ಅವರಲ್ಲಿ ಪೂರ್ಣಚಂದ್ರ ತೇಜಸ್ವಿ, ರವಿವರ್ಮ ಕುಮಾರ್, ಕೆ. ರಾಮದಾಸ್, ಅಗ್ರಹಾರ ಕೃಷ್ಣಮೂರ್ತಿ-ಇಂಥ ಹತ್ತಾರು ಹೆಸರುಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಅಷ್ಟೇ ಯಾಕೆ, ಬಂಡಾಯ ಸಂಘಟನೆಯ ನೂರಾರು ಲೇಖಕರನ್ನೂ, ಈ ಪಟ್ಟಿಗೆ ಸೇರಿಸಬಹುದು.

ಮತೀಯವಾದಿ ರಾಜಕಾರಣದ ಕಾಲದಲ್ಲಿ ಕೊಲೆಗಡುಕ ವರ್ಗವಾಗಿ ತಯಾರಾಗುತ್ತಿರುವ ಹಿಂದುಳಿದ ವರ್ಗಗಳ ಹುಂಬರನ್ನು, ಪುಂಡರನ್ನು ತಿದ್ದಲು ಈ ವರ್ಗಗಳ ಬುದ್ಧಿಜೀವಿಗಳು ಏನೂ ಮಾಡುತ್ತಿಲ್ಲ ಎಂಬ ಕಲಿವೀರ ಅವರ ಮಾತು ಕೂಡ ನಿಜ. ಎಲ್ಲ ಜಾತಿಗಳ ಪ್ರಜ್ಞಾವಂತರಿಗೆ ಮನವಿ ಮಾಡುವಷ್ಟು ಮಾತ್ರ ಪ್ರಭಾವವಿರಬಹುದಾದ ಈ ಬುದ್ಧಿಜೀವಿಗಳು ಸಂಘಟಿತವಾಗಿ ಏನನ್ನೂ ಮಾಡಲಾಗುತ್ತಿಲ್ಲ; ಲೋಹಿಯಾ ಟ್ರಸ್ಟ್, ಸಮಾಜವಾದಿ ಶಿಬಿರ, ಮಾನವ ಮಂಟಪ, ಜನಮತ-ಹೀಗೆ ಬಗೆಬಗೆಯ ಜಾತ್ಯಾತೀತ ಸಮಾಜ ನಿರ್ಮಾಣದ ಚಟುವಟಿಕೆಯಲ್ಲಿ ತೊಡಗಿರುವ ಇವರು ವ್ಯಾಪಕವಾಗಿ ಕೆಲಸ ಮಾಡಲಾಗುತ್ತಿಲ್ಲ, ಹಾಗೂ ಅಂಥಾ ಸಂಘಟನಾ ಬಲವೂ ಇವರಿಗಿಲ್ಲ ಎಂಬ ವಾಸ್ತವ ನಮ್ಮ ಕಣ್ಣೆದುರಿಗೇ ಇದೆ. ಈ ವರ್ಗದ ಬುದ್ಧಿಜೀವಿಗಳಿಗೆ ಇರುವ ವ್ಯಾಪಕ ಪ್ರಭಾವವುಳ್ಳ ವೇದಿಕೆಗಳು ಅಥವಾ ಸಂಘಟನೆಗಳೆಂದರೆ ದಲಿತ ಸಂಘಟನೆಗಳು ಮಾತ್ರ. ಹಿಂದುಳಿದ ವರ್ಗಗಳ ಬುದ್ಧಿಜೀವಿಗಳು, ಎಲ್ಲೋ ಕೆಲವರು ಮಾತ್ರ ಕಮ್ಯುನಿಸ್ಟ್ ಪಕ್ಷದ ಮಾಜಿ, ಹಾಲಿ ಅಥವಾ ಆತ್ಮದ ಮಟ್ಟದ ಸದಸ್ಯರಿರಬಹುದು; ಇನ್ನು ಕೆಲವರು ಸಮಾಜವಾದಿ ಪಕ್ಷಗಳ ಹಳೆಯ ಗುಂಗಿನಲ್ಲಿರಬಹುದು, ಅಷ್ಟೆ. ಒಕ್ಕೂಟ, ಜಾತಿವಿನಾಶ ವೇದಿಕೆ ಮುಂತಾದ ಸಂಘಟನೆಗಳನ್ನು ರೂಪಿಸಿದ ಈ ಬುದ್ಧಿಜೀವಿಗಳಲ್ಲನೇಕರು ಆನಂತರ ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘಗಳ ಜೊತೆಗಿದ್ದವರೇ ಹೊರತು ತಮ್ಮ ಜಾತಿಗಳ ಜೊತೆಗಿನ ಸಾವಯವ ಸಂಬಂಧವನ್ನು ಉಳಿಸಿಕೊಂಡವರಲ್ಲ, ಹಾಗೂ ಆ ರೀತಿ ಉಳಿಸಿಕೊಳ್ಳುವುದು ಸಾಧ್ಯವೂ ಇರಲಿಲ್ಲ. ಅಂತರ್ಜಾತೀಯ ವಿವಾಹದಂಥ ಬೆಳವಣಿಗೆಗಳಿಂದ ಹಾಗೂ ಲೋಹಿಯಾ, ಅಂಬೇಡ್ಕರ್ ಮೊದಲಾದವರ ಪ್ರಭಾವಗಳಿಂದ ಜಾತ್ಯಾತೀತ ನೋಟವನ್ನು ರೂಢಿಸಿಕೊಂಡ ಇವರು ತಂತಮ್ಮ ಜಾತಿ ಸಮಾಜಗಳ ಜೊತೆಗೆ ಮಾತಾಡುವ ಅವಕಾಶವನ್ನೂ ಹಾಗೂ ಅವುಗಳ ಮೇಲೆ ತಮ್ಮ ಪ್ರಭಾವವನ್ನೂ ಕಳೆದುಕೊಂಡರು; ಅಥವಾ ಜಾತಿ ಸಮಾಜಗಳ ಜೊತೆ ವ್ಯವಹರಿಸಲಾಗದ ನಿಜವಾದ ಸಂಕೋಚಕ್ಕೆ ಒಳಗಾದರು. ಇವೆಲ್ಲ ಜಾತಿ ವಿನಾಶ ಚಳುವಳಿಯ ಸಹಜ ಬೆಳವಣಿಗೆಗಳೇ ಆಗಿದ್ದವು.

ಆದರೆ ದಲಿತ ಬುದ್ಧಿಜೀವಿಗಳು ಜಾತಿ ವಿನಾಶದ ತತ್ವವನ್ನು ಒಪ್ಪಿಕೊಂಡಾಗಲೂ ಹಿಂದುಳಿದ ವರ್ಗಗಳ ಬುದ್ಧಿಜೀವಿಗಳಿಗಿಂತ ಕೊಂಚ ಭಿನ್ನವಾದ ಸ್ಥಿತಿಯಲ್ಲಿದ್ದರು. ಕವಿ ಸಿದ್ದಲಿಂಗಯ್ಯನವರಂಥವರು ಏಕಕಾಲಕ್ಕೆ ತಮ್ಮ ಜಾತಿಯ ಜನರನ್ನು ಎಚ್ಚರಿಸುತ್ತಲೇ ಜಾತಿ ವಿನಾಶದ ವಿಶಾಲ ಕಾರ್ಯಕ್ರಮದಲ್ಲೂ ಭಾಗಿಯಾಗಬಲ್ಲವರಾಗಿದ್ದರು. ಜೊತೆಗೆ, ದಲಿತ ಸಾಂಸ್ಕೃತಿಕ ನಾಯಕರು ದಲಿತ ಸಾಮಾಜಿಕ ನಾಯಕರಾಗುವ ಸಹಜ ಬೆಳವಣಿಗೆ ಹಿಂದುಳಿದ ವರ್ಗಗಳ ಸಂದರ್ಭದಲ್ಲಿ ಹೆಚ್ಚು ಕಂಡುಬರಲಿಲ್ಲ. ಸಿದ್ದಲಿಂಗಯ್ಯ, ಎಲ್. ಹನುಮಂತಯ್ಯನವರಂಥ ಲೇಖಕರು ತಮ್ಮ ಸಾಹಿತ್ಯಕ ವ್ಯಕ್ತಿತ್ವದ ಪ್ರಭಾವದಿಂದಲೇ ರಾಜಕೀಯ ವ್ಯಕ್ತಿತ್ವವನ್ನು ಪಡೆದವರು. ಸಹಜವಾಗಿಯೇ ಈ ಇಬ್ಬರೂ ದಲಿತ ವಿದ್ಯಾವಂತರನ್ನೂ, ಸಾಮಾನ್ಯ ದಲಿತರನ್ನೂ ತಲುಪಬಲ್ಲ ಶಕ್ತಿ ಪಡೆದುಕೊಂಡರು. ಇವರಿಬ್ಬರಿಗಿಂತ

ಭಿನ್ನವಾದ ಹೊಣೆ ನಿರ್ವಹಿಸುತ್ತಾ ಬಂದಿರುವ, ಸಾಮಾಜಿಕ ನಾಯಕತ್ವದ ಹೊಣೆಯನ್ನು ಹೊರಲು ಸಂಕೋಚ ಪಡುವ ದೇವನೂರ ಮಹಾದೇವರ ಪ್ರಭಾವವಂತೂ ದಲಿತ ಪ್ರಜ್ಞಾವಂತರ ಮೇಲೆ ಇದ್ದೇ ಇದೆ. ದಲಿತ ಸಮಾಜದ ಆಂತರಿಕ ವರ್ಗ ಹೋರಾಟದ ಈ ಕಾಲದಲ್ಲಿ ಅವರ ಮಾತನ್ನು ಎಲ್ಲ ದಲಿತರೂ ಕೇಳಿಸಿಕೊಳ್ಳದೇ ಇರಬಹುದು. ಆದರೆ ಒಂದು ಕಾಲಕ್ಕೆ ಅವರ ಮಾತನ್ನು ದಲಿತರು ಅಪಾರ ಎಚ್ಚರದಿಂದ ಕೇಳಿಸಿಕೊಂಡಿದ್ದು ನಿಜ. ಆದರೆ, ದಲಿತರು ದಲಿತ ಲೇಖಕರ ಮಾತನ್ನು ಕೇಳಿಸಿಕೊಂಡಂತೆ ಕುವೆಂಪು ಅಥವಾ ತೇಜಸ್ವಿಯವರ ಮಾತನ್ನು ಒಕ್ಕಲಿಗರಲ್ಲಿನ ಪ್ರಜ್ಞಾವಂತ ವರ್ಗವಾದರೂ ಇವತ್ತು ಕೇಳಿಸಿ ಕೊಳ್ಳುತ್ತದೆಂದು ನಿರೀಕ್ಷಿಸುವುದು ಕಷ್ಟ. ಆದಿ ಚುಂಚನಗಿರಿಯ ಬಾಲಗಂಗಾಧರನಾಥರ ಮಾತನ್ನೋ, ದೇವೇಗೌಡರ ಮಾತನ್ನೋ ಕೇಳಿಸಿಕೊಳ್ಳುವ ನೂರಾರು ಒಕ್ಕಲಿಗ ವಿದ್ಯಾವಂತರು ಕುವೆಂಪು ಅವರ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿದ್ದಂತೆ ಕಾಣುವುದಿಲ್ಲ.

ಇಂಥ ಕಟುವಾಸ್ತವವನ್ನು ಒಪ್ಪಿಕೊಂಡೇ, ಕಳೆದ ಇಪ್ಪತ್ತೈದು ವರ್ಷಗಳಿಂದ ಬಹುತೇಕ ಹಿಂದುಳಿದ ವರ್ಗದ ಬುದ್ಧಿಜೀವಿಗಳು ತಾತ್ವಿಕವಾಗಿ ಅಥವಾ ಬೇರೆ ಬೇರೆ ರೀತಿಯಲ್ಲಿ ದಲಿತ ಸಂಘಟನೆಗಳ ಜೊತೆಗಿದ್ದರು ಹಾಗೂ ಈಗಲೂ ಇದ್ದಾರೆ. ದಲಿತ ಸಂಘಟನೆಗಳಿಂದ ಅವರೂ ಬೆಳೆದಿದ್ದಾರೆ ಹಾಗೂ ಈ ಸಂಘಟನೆಗಳನ್ನು ಅವರು ಬೆಳೆಸಿಯೂ ಇದ್ದಾರೆ. ಮೊನ್ನೆ ಕೆಲವು ಪ್ರಗತಿಪರರು ಶೂದ್ರರ ಸಂಘಟನೆಯೊಂದನ್ನು ಕಟ್ಟುತ್ತೇವೆ ಎಂದಾಗ, ಇದು ಶೂದ್ರರನ್ನೆಲ್ಲ ಒಗ್ಗೂಡಿಸುವ ವೇದಿಕೆ ಯಾಗಬಲ್ಲದೇ? ಇವರ ಪ್ರಯತ್ನದಿಂದಾಗಿ ಶೂದ್ರ ಜಾತಿಗಳೆಲ್ಲ 'ಶೂದ್ರ' ಎಂಬ ಕೊಡೆಯ ಅಡಿ ಬರಬಲ್ಲವೇ? ಎಂಬ ಬಗ್ಗೆ ಯೋಚಿಸಿದೆ. ಜಾತಿ ಪದ್ಧತಿಯ ಕೆಲವು ಆಂತರಿಕ ಒತ್ತಡಗಳಿಂದಾಗಿ ಇದೂ ಸ್ವಲ್ಪ ಕಷ್ಟ ಎನ್ನಿಸಿತು. ಯಾಕೆಂದರೆ, ಶೂದ್ರ ಜಾತಿಗಳ ಬುದ್ಧಿಜೀವಿಗಳು ಮಾತ್ರ 'ಶೂದ್ರತ್ವ'ವನ್ನು ಅಥವಾ ಶೂದ್ರ ಐಡೆಂಟಿಟಿಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ದೇವಾಂಗ, ಕುರುಬ, ಒಕ್ಕಲಿಗ, ಗಾಣಿಗ, ಉಪ್ಪಾರ ಜಾತಿಗಳ ಬಹುಸಂಖ್ಯಾತರು 'ಶೂದ್ರ' ಎಂಬ ಗುರುತನ್ನೇ ಒಪ್ಪಿಕೊಳ್ಳದೆ ದೇವಾಂಗ ಸಂಘ, ಉಪ್ಪಾರ ಸಂಘ, ಭಾವಸಾರ ಕ್ಷತ್ರಿಯ ಸಂಘ-ಹೀಗೆ ತಂತಮ್ಮ ಜಾತಿ ಸಂಘಟನೆಗಳನ್ನು ಮಾತ್ರ ಒಪ್ಪುತ್ತಾರೆ. ಹಿಂದುಳಿದ ವರ್ಗಗಳ ಆಯೋಗಗಳೆದುರು ಒಟ್ಟಾಗಿ ತಮ್ಮ "ಶೂದ್ರ ಹಿತಾಸಕ್ತಿ"ಯನ್ನು ರಕ್ಷಿಸಿಕೊಳ್ಳುವ ಆರ್ಥಿಕ ವಿಚಾರದಲ್ಲಿ ಕೂಡ ಈ ಜಾತಿಗಳು ಒಗ್ಗೂಡಿದಂತಿಲ್ಲ. ಜೊತೆಗೆ ಡಾಕ್ಟರು, ವಕೀಲರು ಅಥವಾ ಪೊಲೀಸರಾಗಿ ಕೆಲಸ ಮಾಡುತ್ತಿರುವ ಅನೇಕ ದಲಿತ ಬುದ್ಧಿಜೀವಿಗಳು ನಿರ್ವಹಿಸುತ್ತಿರುವಷ್ಟು ಸಾಮಾಜಿಕ ಜವಾಬ್ದಾರಿಯನ್ನಾದರೂ ಹಿಂದುಳಿದ ಜಾತಿಗಳಿಂದ ಬಂದು ಈಗ ಅಧಿಕಾರಶಾಹಿಯ ಭಾಗವಾಗಿರುವ ಬುದ್ಧಿಜೀವಿಗಳು ನಿರ್ವಹಿಸುತ್ತಿರುವಂತೆ ಕಾಣುವುದಿಲ್ಲ.

ಹೀಗೆ 'ಶೂದ್ರ'ರಾಗಿ ಸಂಘಟಿತರಾಗದೆ, ಬಿಡಿಬಿಡಿ ಜಾತಿ ಸಂಘಟನೆಗಳೊಳಗೇ ಉಳಿದಿರುವವರ ಜೊತೆಗೆ ಶೂದ್ರ ಬುದ್ಧಿಜೀವಿಗಳು, ಹಿಂದುಳಿದ ವರ್ಗಗಳ ಲೇಖಕರು ಇರುವುದು ಕಷ್ಟ. ಶಾಂತವೇರಿ ಗೋಪಾಲಗೌಡರಂಥವರು ಒಂದು ವರ್ಗದ ಹೋರಾಟವಾಗಿದ್ದ ರೈತ ಹೋರಾಟಕ್ಕೆ ಚಾಲನೆ ಕೊಡಬಲ್ಲವರಾಗಿದ್ದರೇ ಹೊರತು, ಒಕ್ಕಲಿಗ ಜಾತಿಯ ರೈತರ ಸಂಘದ ಮುಂದಾಳತ್ವ ವಹಿಸಲು ಸಿದ್ಧವಿದ್ದವರಲ್ಲ. ಆದರೆ ದಲಿತ ಸಂಘರ್ಷ ಸಮಿತಿಯನ್ನು ಮುನ್ನಡೆಸುವುದು ದಲಿತ ಲೇಖಕನೊಬ್ಬನಿಗೆ ಹೆಮ್ಮೆಯ ವಿಷಯ. ಅಷ್ಟೇ ಯಾಕೆ, ಒಂದು ಪುಟ್ಟ ಅಂಬೇಡ್ಕರ್ ಸಂಘವನ್ನಾಗಲೀ ಅಥವಾ ಜಗಜೀವನರಾಂ ಸಂಘವನ್ನಾಗಲೀ ಮುನ್ನಡೆಸುವುದು ಕೂಡ ದಲಿತ ಲೇಖಕನೊಬ್ಬನಿಗೆ ತೀರಾ ಮುಜುಗರ ತರುವ ವಿಷಯವಲ್ಲ. ಅಲ್ಲಿ ಭಾಗಿಯಾಗಲು ಇನ್ನಿತರ ಜಾತಿಯ ಬುದ್ಧಿಜೀವಿಗಳಿಗೂ ಇರಿಸುಮುರಿಸಾಗುವುದಿಲ್ಲ. ಹಾಗೆಯೇ ರೈತ ಸಂಘದಲ್ಲಿ ಒಕ್ಕಲಿಗರೇ ಹೆಚ್ಚಾಗಿದ್ದರೂ, ಹಿ.ಶಿ. ರಾಮಚಂದ್ರೇಗೌಡರಿಗಾಗಲೀ, ಕಾಳೇಗೌಡ ನಾಗವಾರರಿಗಾಗಲೀ ಅಲ್ಲಿ ಭಾಗಿಯಾಗಲು ಮುಜುಗರವಾಗುವುದಿಲ್ಲ. ಆದರೆ ಒಕ್ಕಲಿಗ ಸಂಘಗಳ ಮುಂಚೂಣಿಯಲ್ಲಿರಲು ಅವರಿಗೆ ಖಂಡಿತಾ ಮುಜುಗರವಾಗುತ್ತದೆ ಎಂಬುದರಲ್ಲಿ ನನಗಂತೂ ಅನುಮಾನವಿಲ್ಲ. ಅಂದರೆ, ದಲಿತರ ಜಾತಿ ಪ್ರಜ್ಞೆಯ ಎಳೆ ಹಿಡಿದು, ಕೂಡ ಜಾಗೃತಿ ಹೋರಾಟ ಹಾಗೂ ಬದಲಾವಣೆಯ ಮಾತಾಡಬಲ್ಲ ದಲಿತ ಲೇಖಕನ ಒಂದು ಮುಖ್ಯ ಅನುಕೂಲ ಹಿಂದುಳಿದ ವರ್ಗಗಳ ಬುದ್ಧಿಜೀವಿಗಳಿಗಿಲ್ಲ. ಆದ್ದರಿಂದ ದಲಿತ ಲೇಖಕರಿಗಿರುವಂತೆ ಬಹುಜನ ದಲಿತರನ್ನು ತಲುಪುವ ಶಕ್ತಿ ಅಥವಾ 'ಮಾಸ್ ಅಪೀಲ್' ಹಾಗೂ ಜಾತಿಯ ಪರಿಭಾಷೆಯನ್ನು ಬಳಸಿಯೂ ಜಾತಿವಾದಿಯಾಗದೇ ಉಳಿಯುವ ಅವಕಾಶ ಹಿಂದುಳಿದ ವರ್ಗಗಳ ಬುದ್ಧಿಜೀವಿಗಿದ್ದಂತೆ ಕಾಣುವುದಿಲ್ಲ.

ಇವೆಲ್ಲ ನನಗೆ ನಾನೇ ಅಂದುಕೊಳ್ಳುತ್ತಿರುವ ಮಾತುಗಳೇ ಹೊರತು ಸ್ಪಷ್ಟವಾದ ಮಂಡನೆಗಳಲ್ಲ. ಶ್ರೀಧರ ಕಲಿವೀರ ಅವತ್ತು ಹೇಳಿದ ಮಾತೊಂದರ ಬೆನ್ನು ಹತ್ತಿ ಈಚೆಗೆ ಅನ್ನಿಸಿದ್ದನ್ನೆಲ್ಲಾ ಇಲ್ಲಿ ಬರೆದಿರುವೆ. ಇವತ್ತಿಗೂ ಕಮ್ಯುನಿಸ್ಟ್ ಪಕ್ಷಗಳನ್ನು ಬಿಟ್ಟರೆ ದಲಿತರು ಮಾತ್ರ ಒಂದು ದೊಡ್ಡ ವರ್ಗವಾಗಿ ಮತೀಯವಾದಿಗಳನ್ನು ಎದುರಿಸಬಲ್ಲರು ಎಂಬುದು ನನ್ನ ಆಳದ ನಂಬಿಕೆ. ಇವರ ಜೊತೆಗೆ ಸಮಾಜವಾದಿಗಳು, ಪ್ರಗತಿ ಪರವಾಗಿ ಯೋಚಿಸುವ ಬ್ರಾಹ್ಮಣರು, ಹಿಂದುಳಿದ ವರ್ಗದವರು, ಸ್ತ್ರೀವಾದಿಗಳು, ಸಣ್ಣಪುಟ್ಟ ಜಾತ್ಯತೀತ ಸಂಘಟನೆಗಳ ಜನ ಎಲ್ಲ ಸೇರಿ ಈ ಸಂಘಟನೆಗಳನ್ನು ಇನ್ನಷ್ಟು ಬಲಗೊಳಿಸಬಲ್ಲರು. ಈ ಬಗ್ಗೆ ನಾವು ವಾದದ ಧಾಟಿ ಬಿಟ್ಟು, ಹುಡುಕುವ ಜಾಡು ಹಿಡಿದು ಹೊರಟರೆ ಅಷ್ಟೋ ಇಷ್ಟೋ ಬೆಳಕು ಕಾಣಬಹುದೇನೋ. ●

ಬುದ್ಧನೇ ಹೇಳಬೇಕು

ಕರಿಂಬಾಲಪಲ್ಲಿಯ ಕಣ್ಣೀರ ಕಡಲಲಿ
ತೇಲಿ ಹೋದ ಚಿತಾ ಭಸ್ಮ
ಭಗ್ನಗೊಂಡ ಕನಸುಗಳ ಬೆನ್ನೇರಿ ನಸುನಕ್ಕು
ಮರಳಿ ಬಾರದ ಲೋಕದತ್ತ
ವಿಕಾರದ ಪಯಣ
ನಡೆದ ಹಾದಿಯ ತುಂಬೆಲ್ಲ ಕಲ್ಲು ಮುಳ್ಳಿನ ಕತೆ
ರಕ್ತ ಹೀರುವ ಜಿಗಣೆ ವಂಶಸ್ಥರ
ಅಟ್ಟಹಾಸ
ಕ್ರೌರ್ಯಗಳ ಸರಮಾಲೆ !
ಜಾತಿ ಮತವ ತಬ್ಬಿ ಮಾನವೀಯತೆ ಹೊರದಬ್ಬಿ
ಹೃದಯದಂತರಾಳದ ವಿಕೃತಿಗೆ
ಚಾಕು ಚೂರಿಗಳ ಮೆರವಣಿಗೆ
ದ್ವೇಷಾಗ್ನಿಯ ಸ್ಪರ್ಶದ ಕಮಟು ವಾಸನೆಗೆ
ಪುಳಕಗೊಳ್ಳುವ ನರರಾಕ್ಷಸರ ಹಿಂಡು
ಕೇಕೆ ಹಾಕಿ ನಗುವ ಸಂಭ್ರಮ-ಸಡಗರ
ನೋಡ ನೋಡುತ್ತಲೇ ಬೆಂದು/ಬಸವಳಿದ ಜೀವಗಳ
ಸಂಕಟದ ಸದ್ದಡಗಿ ಸ್ಮಶಾನಮೌನದ ಅಂಗಳದೊಳಗೆ
ಮೂಕವೇದನೆಯಷ್ಟೇ ಕುರುಹು
ನೋವಿನ ಹಾಡ ಹಾಡಲಾಗದ ಹಕ್ಕಿ ಬಿಕ್ಕಿ-ಬಿಕ್ಕಿ
ಬುದ್ಧನತ್ತ ಹಾರಿ ಹೋದರೂ...
ಬಟ್ಟ ಬಯಲಿನ ತುಂಬ ಮೈಚಾಚಿ ಮಲಗಿದ್ದ
ಗುಲಾಬಿಯ ಮುಳ್ಳುಗಳೆಲ್ಲ ಮೇಲೆದ್ದು
ಎದೆಸೆಟೆದು ನಿಂತು ಚಡಪಡಿಸಿದ್ದು
ಅನಗತ್ಯವೋ?
ಅನಿವಾರ್ಯತೆಯೋ?
ಬುದ್ಧನೇ ಹೇಳಬೇಕು...

○ ಗೌಡಗೆರೆ ಮಾಯುಶ್ರೀ

(17ನೇ ಪುಟದಿಂದ)
ಸಂಪನ್ಮೂಲಗಳನ್ನು ದೋಚಿ, ಇಂಗ್ಲೆಂಡಿನಲ್ಲಿ ಸಿದ್ಧವಸ್ತುವನ್ನಾಗಿ ಮಾಡಿ, ಭಾರತ ರಾಷ್ಟ್ರದ ಮಾರುಕಟ್ಟೆಗಳಲ್ಲಿ ಮಾರಿದರಲ್ಲದೆ, ಜಾಗತೀಕರಣದ ಮಾರುಕಟ್ಟೆಗೆ ಅಡಿಪಾಯ ಹಾಕಿದ್ದು ಈಗ ಚರಿತ್ರೆ. ಆದ್ದರಿಂದ ಇಂದು ಜಾಗತೀಕರಣದ ನೀತಿ ಹಂತಹಂತವಾಗಿ ಜಾರಿಯಾಗಿ, ಬಹುರಾಷ್ಟ್ರೀಯ ಕಂಪನಿಗಳ ಹಿಡಿತ ಇಲ್ಲಿ ಹೆಚ್ಚಾಗಲು ಈ "ರಾಷ್ಟ್ರ" ಎನ್ನುವ ಸಾಮ್ರಾಜ್ಯಶಾಹಿ ನೀತಿಯಿಂದಲೇ ಎಂಬುದನ್ನು ಮರೆಯುವಂತಿಲ್ಲ.

ವಸ್ತುನಿಷ್ಠ ಮಾದರಿ (ಒಬ್ಜೆಕ್ಟಿಫಿಕೇಷನ್) : ಆಧುನಿಕತೆ ಅಥವಾ ವೈಜ್ಞಾನಿಕ ಕ್ರಾಂತಿ ಆದದ್ದೇ ಈ ವಸ್ತುನಿಷ್ಠ ಮಾದರಿಯ ಅಧ್ಯಯನದಿಂದ. ಎಲ್ಲೆಲ್ಲಿ ವಸಾಹತು ನೆಲೆಗಳು ಜಾರಿಯಾದವೋ ಅಲ್ಲೆಲ್ಲ ಶಿಕ್ಷಣ, ಆಡಳಿತ, ಮತ ಪ್ರಚಾರ, ಆಸ್ಪತ್ರೆ ಮುಂತಾದ ಸಾಂಸ್ಕೃತಿಕ ಸಂಸ್ಥೆಗಳನ್ನು ಹುಟ್ಟುಹಾಕುವ ಮೊದಲು, ಆಯಾ ಸ್ಥಳಗಳ ಬಗ್ಗೆ ಮಾಹಿತಿಯನ್ನು ಒಟ್ಟುಗೂಡಿಸಿದ್ದು ಈ ವಸ್ತುನಿಷ್ಠ ಅಧ್ಯಯನ ಕ್ರಮದಿಂದ. ಈ ಮೂಲಕ ಮೂಲನಿವಾಸಿಗಳ ಚರಿತ್ರೆಯನ್ನು ಪುನರ್ ನಿರ್ಮಿಸಲಾಯಿತು. ಆಯಾ ಜನಾಂಗಗಳ ಮಾನವ ಶಾಸ್ತ್ರೀಯ ಅಧ್ಯಯನಗಳು ಹೊರಬಂದು, ಸಾಂಸ್ಕೃತಿಕ ಅಧ್ಯಯನಗಳ ಮೂಲಕ ಈ ಜನಾಂಗಗಳ ಪ್ರಜ್ಞೆಯನ್ನು ತಿರಿಚಿದ್ದು ಈ ಅಧ್ಯಯನ ಕ್ರಮದಿಂದಲೇ. ಈ ಅಧ್ಯಯನದಲ್ಲಿ ವ್ಯಕ್ತಿ ನಿಷ್ಠತೆಗೆ ಸ್ಥಳವಿಲ್ಲ. ಅಂದರೆ ಒಬ್ಬ ಪಾಶ್ಚಾತ್ಯ ವಿದ್ವಾಂಸ ಮತ್ತೊಂದೆಡೆ ಹೋಗಿ ಅಲ್ಲಿನ ಮೂಲನಿವಾಸಿಗಳ ಬಗ್ಗೆ ನಡೆಸಿದ ಅಧ್ಯಯನ ಬಹಳ ಮೌಲ್ಯಯುತವೆಂದು ಪರಿಗಣಿಸಲಾಗುತ್ತದೆ. ಏಕೆಂದರೆ ಇದು ವೈಜ್ಞಾನಿಕ ರೀತಿಯ ಅಧ್ಯಯನವಾಗುತ್ತದೆ. ಇಂಥ ವಿದ್ವಾಂಸ ಆ ಮೂಲನಿವಾಸಿಗಳ ಬಗ್ಗೆ ಅಧಿಕೃತ ವರದಿಗಾರನಾಗುತ್ತಾನೆ. ಈ ಅಧ್ಯಯನದೊಳಗಿರುವ ಧೋರಣೆಯೆಂದರೆ ಯಜಮಾನಿಕೆಯನ್ನು ಹೇರುವುದೇ ಆಗುತ್ತದೆ. ಅಲ್ಲದೆ, ಅಂತಹ ಯಜಮಾನ್ಯವನ್ನು ಒಪ್ಪಿಕೊಳ್ಳುವಂತೆಯೂ ಮಾಡಲಾಗುತ್ತದೆ.

ಜ್ಞಾನ-ಅಧಿಕಾರಗಳ ಒಳಸುಳಿಗಳು: ಈ ಮೇಲಿನ ವಸ್ತುನಿಷ್ಠ ಮಾದರಿಯಲ್ಲಿ ಪಡೆದುಕೊಂಡ ಮಾಹಿತಿಯೇ ಜ್ಞಾನವೆಂದು ಪರಿಗಣಿಸಲಾದದ್ದು. ಇಡೀ ಶಿಕ್ಷಣ ವ್ಯವಸ್ಥೆ ವಸಾಹತುಗಳಲ್ಲಿ ಆರಂಭಿಸಿ, ಕಲೆ ಹಾಕಿದ ಮಾಹಿತಿಯನ್ನು ಕಲಿಸಿದ್ದೇ ಶಿಕ್ಷಣವಾಯಿತು. ಇಲ್ಲಿ ಸ್ಥಳೀಯ ವ್ಯಕ್ತಿ/ ವಿದ್ಯಾರ್ಥಿಯೆಂದರೆ ಒಂದು ಖಾಲಿ ಸ್ಲೇಟ್. ಈ ಖಾಲಿ ಸ್ಲೇಟ್‌ನಲ್ಲಿ ಈ ಮಾಹಿತಿಯನ್ನು ತುಂಬುವುದು. ಹೀಗೆ ಮಾಡುವುದರ ಮೂಲಕ ಮೂಲ ನಿವಾಸಿಯ ಬಾಲ್ಯ ಕೆಳಮಟ್ಟದಿದ್ದು, ಮುಗ್ಧ, ಅಜ್ಞಾನದಿಂದ ಕೂಡಿರುತ್ತದೆ. ಆದ್ದರಿಂದ ಆತನನ್ನೂ ನಾಗರೀಕನನ್ನಾಗಿ ರೂಪಿಸಬೇಕಾದರೆ ಈ ಮಾಹಿತಿ ಮೂಲ ಶಿಕ್ಷಣ ಅತ್ಯವಶ್ಯಕ. ಹೀಗೆ ಪಾಶ್ಚಾತ್ಯರು ಹುಟ್ಟು ಹಾಕಿದ ಜ್ಞಾನದ ವ್ಯಾಖ್ಯಾನವೆಂದರೆ ಒಂದು ನಾಗರೀಕತೆಯೆನ್ನುವುದು ಅದರ ಹುಟ್ಟು, ಬೆಳವಣಿಗೆ ಮತ್ತು ನಾಶವೆಂಬಂತೆ ಕಟ್ಟಿಕೊಡುವುದೇ ಆಗುತ್ತದೆ. ಇದನ್ನು ಎಷ್ಟು ವಸ್ತುನಿಷ್ಠವಾಗಿ ರೂಪಿಸಲಾಯಿತೆಂದರೆ, ಅದರ ಬಗ್ಗೆ ಸಂದೇಹಗಳೇ ಇರುವುದಿಲ್ಲ. ಸಂದೇಹವುಂಟಾಗುವುದು ನಮ್ಮ ಸ್ಥಿತಿಯ ಬಗ್ಗೆಯೇ. ಆದ್ದರಿಂದಲೇ ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲವೆಂದಿದ್ದು. ಇಂಥ ಜ್ಞಾನವನ್ನು ಹೊಂದವುದೆಂದರೆ ಯಜಮಾನ್ಯವನ್ನು ಹೊಂದುವುದು, ಅದರ ಮೇಲೆ ಅಧಿಕಾರವನ್ನು ಪಡೆಯುವುದು. ಇಲ್ಲಿ ಅಧಿಕಾರವೆಂದರೆ ಆಳ್ವಿಕೆಯನ್ನು ಸ್ಥಾಪಿಸುವುದು ಮತ್ತು ಸ್ವಾವಲಂಬನೆಯನ್ನು ನಿರಾಕರಿಸುವುದು.

ಮೂಲನಿವಾಸಿ ಇದನ್ನು ಪ್ರತಿಭಟಿಸಲು ಹೋದಲ್ಲಿ ಅದು ದಂಗೆಯಾಗುತ್ತದೆ. ಉದಾಹರಣೆಗೆ "ಸಿಪಾಯಿ ದಂಗೆ" ಎಂದು ಬ್ರಿಟಿಷರು ಕರೆದದ್ದನ್ನು ನೆನಪಿಸಿಕೊಳ್ಳಬಹುದು. ಆದ್ದರಿಂದ ಜ್ಞಾನವೆಂದರೆ ಮಾಹಿತಿ. ಇದು ಅಧಿಕಾರವನ್ನು ನೀಡುತ್ತದೆ. ಅಧಿಕ ಅಧಿಕಾರವೆಂದರೆ ಅಧಿಕ ಜ್ಞಾನ...ಹೀಗೆ ಶಿಕ್ಷಣ ಮತ್ತು ನಿಯಂತ್ರಣ ಒಟ್ಟೊಟ್ಟಿಗೆ ಸಾಗುತ್ತದೆ.

ದ್ವಿಮಾನ ವೈರುಧ್ಯಗಳು (ಬಯ್ನರಿ ಅಪೋಲಸಿಷನ್ಸ್) :

ಈ ಪರಿಕಲ್ಪನೆಯು, ಜ್ಞಾನ-ಅಧಿಕಾರ ಸಂಬಂಧಗಳ ಸೂಕ್ಷ್ಮಗಳನ್ನು ಮತ್ತಷ್ಟು ವಿವರಿಸಿಕೊಳ್ಳಲು ಬಳಕೆಯಾದದ್ದು ಸಂರಚನಾ ಸಿದ್ಧಾಂತಿಗಳಿಂದ. ದ್ವಿಮಾನ ವೈರುಧ್ಯಗಳೆಂದರೆ ಒಂದು ವಸ್ತುವಿನ ಸ್ವಭಾವ-ಗುಣ ಇವುಗಳನ್ನು ಖಚಿತವಾಗಿ ಅರ್ಥೈಸಲು ಅದನ್ನು ಮತ್ತೊಂದರೊಡನೆ ವಿರುದ್ಧ ದಿಕ್ಕಿನಲ್ಲಿರಿಸುವುದು. ಹೀಗೆ ಮಾಡುವುದರ ಮೂಲಕ ಜ್ಞಾನ-ಅಧಿಕಾರವೆನ್ನುವುದು ವೈರುಧ್ಯಗಳಲ್ಲಿ ಹೊರ ಬರುತ್ತದೆ. ಇದನ್ನು ಮುಖ್ಯವಾಗಿ ಆಚರಣೆಗೆ ತಂದದ್ದು ಪಾಶ್ಚಾತ್ಯರಿಂದಲೇ. ಈ ಪಾಶ್ಚಾತ್ಯ ವಿದ್ವಾಂಸರು, ತಮ್ಮನ್ನು ಹೊರತುಪಡಿಸಿ, ಉಳಿದೆಲ್ಲವನ್ನು "ಬೇರೆ" ಅಥವಾ ವೈರುಧ್ಯಗಳಿಂದ ಕೂಡಿದ್ದು ಎಂದು ರೂಪಿಸಿದ್ದು. ಆದ್ದರಿಂದ ನಾವು vs ಅವರು, ಬಿಳಿಯ vs ನೀಗ್ರೋ, ಪಾಶ್ಚಾತ್ಯರು vs ಪೌರಾಸ್ತ್ಯ, ಬ್ರಾಹ್ಮಣ vs ದಲಿತ, ಶ್ರೀಮಂತ vs ಬಡವ...ಹೀಗೆ ಶೋಷಣೆಯನ್ನು ಅರ್ಥೈಸುವುದು ಮತ್ತು ವ್ಯವಸ್ಥೆಯನ್ನು ಇದ್ದಂತೆಯೇ ಮುಂದುವರಿಸುವುದು. ಹೀಗೆ ಮಾಡುವುದರಿಂದ "ವಿಭಾಗಿಸಿ ಆಳುವ ನೀತಿ" ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು. ಇದೆಲ್ಲ ಬಹಳ ತರ್ಕಬದ್ಧವಾಗಿಯೇ ಕಾಣಿಸುತ್ತದೆ.

ಈ ಮೇಲಿನ ಆಲೋಚನಾ ಸರಣಿಯೊಂದಿಗೆ ಶಿಸ್ತುಬದ್ಧವಾದ ಶಾಸ್ತ್ರೀಯ ಸಂಗೀತ, ನೃತ್ಯ, ಸಾಹಿತ್ಯ, ಚಿತ್ರಕಲೆ ಮುಂತಾದವುಗಳಲ್ಲದೆ, ಇಂದಿನ ಜೈವಿಕ ಸಂಶೋಧನೆಗಳು ಸಹ ಜಾಗತೀಕರಣದ ಸಿದ್ಧಾಂತಗಳಾಗಿಯೇ ಬರುತ್ತವೆ. ಇವು ಇಂದಿಗೂ ಸಹ ಜಗತ್ತಿನ ಎಲ್ಲ ಕಡೆ ಪ್ರಚಲಿತವಾಗಿವೆ ಮತ್ತು ಕ್ರಿಯಾಶೀಲವಾಗಿವೆ. ಈ ಸಿದ್ಧಾಂತಗಳ ಮೂಲಕ ಜನತೆಯ ಪ್ರಜ್ಞೆಯನ್ನು ವಿಸ್ತರಿಸುತ್ತಲೇ ಶೋಷಣೆಯನ್ನು ಮಾಡಲಾಗುತ್ತದೆ. ಇದನ್ನೇ "ಮೆದುಳಿನ ಕೈಗಾರಿಕೀಕರಣ" ಅಥವಾ "ವಸ್ತುರಹಿತ ಶೋಷಣೆ" ಎಂದು ಕರೆಯುವುದು. ಕೈಗಾರಿಕಾ ಕ್ರಾಂತಿಯ ನಂತರ ಭೌತಿಕ ಶೋಷಣೆಯಿಂದಲೇ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಿಲ್ಲವೆಂದು ಮಾರ್ಕ್ಸ್‌ವಾದ ತೋರಿಸಿಕೊಟ್ಟಿತು. ಅದನ್ನು ಅರಿತೇ ಬಂಡವಾಳಶಾಹಿಗಳು ನಾಜೂಕಾಗಿ "ವಸ್ತು ರಹಿತ ಶೋಷಣೆ"ಯ ಮೂಲಕ ತಮ್ಮ ನಿಯಂತ್ರಣವನ್ನು ಸಾಧಿಸಿದ್ದು. ಈ ವಸ್ತುರಹಿತ ಶೋಷಣೆಯ ಮತ್ತೊಂದು ರೂಪವೇ ಜಾತಿ ವ್ಯವಸ್ಥೆ. ಇಲ್ಲಿ ವ್ಯಕ್ತಿ-ಸಮುದಾಯಗಳು ಮೌಲ್ಯೀಕರಣಗೊಳ್ಳುವುದೇ ಶ್ರೇಣೀಕರಣದೊಳಗೆ. ಅದನ್ನು ದೈವೀಕರಿಸಲಾಗುತ್ತದೆ. ಹಾಗಾಗಿ ಬಹುರಾಷ್ಟ್ರೀಯ ಕಂಪನಿಗಳು ಸಶಕ್ತವಾಗಿ ಬೆಳೆದಿರುವುದು, ಮನುಷ್ಯ ಶಕ್ತಿಯನ್ನು ತಮ್ಮದನ್ನಾಗಿ ಮಾಡಿಕೊಂಡಿರುವುದು ಮೆದುಳಿನ ಮೇಲೆ ಒಡೆತನವನ್ನು ಸ್ಥಾಪಿಸುವುದರ ಮೂಲಕವೇ. ಹೀಗೆ ವ್ಯವಸ್ಥೆಯ ಒಪ್ಪಂದದಲ್ಲಿ ಭಾಗವಹಿಸುವಂತೆ ಮಾಡಲಾಗುತ್ತದೆ. ಇದೇ ಇಂದಿನ ಜಾಗತೀಕರಣದ ಯಶಸ್ಸಿಗೆ ಕಾರಣವಾಗಿರುವುದು. ವಾಸ್ತವದಲ್ಲಿ ಈ 'ವಸ್ತು ರಹಿತ ಶೋಷಣೆಯು' ಯು"ಬಂಡವಾಳ"ಕ್ಕೆ ಮೂರ್ತ ಸ್ಥಿತಿಯನ್ನು ಒದಗಿಸುತ್ತದೆ. ಇಲ್ಲಿ "ಬಂಡವಾಳ" ಒಂದು ಮೌಲ್ಯ ಸಿದ್ಧಾಂತವಾಗಿ ಜಗತ್ತಿನ ಯಾವುದೇ ಮೂಲೆಗೂ ಚಲಿಸಬಹುದು; ಠಿಕಾಣಿ ಹೂಡಬಹುದು, ಲಾಭ ಮಾಡಬಹುದು. ಈ ಮಧ್ಯೆ ನಡೆಯುವ ಹಿಂಸಾತ್ಮಕ ರೂಪಗಳನ್ನು "ಪ್ರಗತಿ", "ಸೇವೆ" ಎಂಬ ಮಂತ್ರ ಪಠಿಸುವುದರ ಮೂಲಕ ಸಹಜವನ್ನಾಗಿಸಿ ಬಿಡಲಾಗುತ್ತದೆ.

ಕೊನೆಯದಾಗಿ :

ಹೀಗಿದ್ದರೂ ಯಾವುದೇ ವ್ಯವಸ್ಥೆ ಪರಿಪೂರ್ಣ ವ್ಯವಸ್ಥೆಯಲ್ಲ. ಯಥಾಸ್ಥಿತಿಯನ್ನು ಶಾಶ್ವತಗೊಳಿಸುವ ಪ್ರಯತ್ನದಲ್ಲೇ ಅದನ್ನು ಮುರಿಯುವ ಒಳಸುಳಿಗಳೂ ಕ್ರಿಯಾಶೀಲವಾಗಿರುತ್ತವೆ. ಹೀಗಾಗಿ ಬಿರುಕು ಸಹಜವಾಗಿರುತ್ತದೆ. ಇಂಥ ಬಿರುಕುಗಳನ್ನು ವ್ಯವಸ್ಥೆಯೊಳಗೆ ಶೋಧಿಸಿ ಬುಡಮಟ್ಟದ ಜನತೆಯನ್ನು ಎಚ್ಚರಿಸುವುದೇ ಸಂಘಟನೆಯ ಕೆಲಸವಾಗುತ್ತದೆ. ಆದ್ದರಿಂದ ಹೊಸದು ಎಂಬುದು ಹಳೆಯದರ ಒಡಲಿನಿಂದಲೇ ಮೂಡಿಬರುತ್ತದೆ ಎಂಬುದು ಮುಖ್ಯ ವಿಚಾರ.

ಆದ್ದರಿಂದ ಜಾಗತೀಕರಣದ ಹೊರಗೆ ಉಳಿಯುವುದು, ಅದರೊಂದಿಗೆ ಯಾವುದೇ ರೀತಿಯ ಸಂಬಂಧ ಬೇಡವೆನ್ನುವುದು, ಪರ್ಯಾಯ ವ್ಯವಸ್ಥೆ ಸ್ಥಾಪಿಸಲು ಹೆಣಗುವುದು, ಪುನಃ ವೈರುಧ್ಯಗಳಲ್ಲಿ ಸಿಕ್ಕಿಕೊಳ್ಳುವುದೇ ಆಗುತ್ತದೆ. ಇಲ್ಲಿ ಮುಖ್ಯವಾದುದೆಂದರೆ ನಾವು ಬೌದ್ಧಿಕ ಪ್ರಾಮಾಣಿಕತೆ ಮತ್ತು ಸೋಲುಗುಳಿ ಮನೋಧರ್ಮಗಳ ನಡುವೆ ಗೆರೆ ಎಳೆಯುವುದು. ಒಟ್ಟು ರಾಕ್ಷಸಿ ವ್ಯವಸ್ಥೆಯೊಳಗೆ ಬುದ್ಧಿಜೀವಿಯು 'ಸುರಕ್ಷಿತ'ನೆಂದು ತಿಳಿಯುವುದು ಅಪ್ರಾಮಾಣಿಕತೆಯಾಗುತ್ತದೆ. ಆದ್ದರಿಂದ ಈ ಅಪಾಯಕಾರಿ ಆಟದೊಳಗೆ ನುಗ್ಗುವುದು, ಜಾಣತನದ ಹೆಜ್ಜೆಗಳನ್ನು ಇಡುವುದು ಹೆಚ್ಚು ಉಪಯುಕ್ತವಾಗಬಹುದು. ನಮಗೆ ಬೇಕಾಗಿರುವುದು ಮುಗ್ಧತೆ-ಸರಳತೆ ಅಲ್ಲ. ಎಚ್ಚರಿಕೆಯಿಂದ ಕೂಡಿದ ದೃಢ ನಿರ್ಧಾರ. ನಮ್ಮ ಎದುರಿಗಿರುವ ಜಾಗತೀಕರಣದ ಬೇತಾಳನ ಪರಿಚಯ ನಮಗೆ ಬೇಕಾಗುತ್ತದೆ. ಅದು ನಮ್ಮ ಮೇಲೆ ಒಡ್ಡಬಹುದಾದ ಪ್ರಲೋಭನೆಗಳ ಬಗ್ಗೆ, ತರಬಹುದಾದ ಒತ್ತಡಗಳ ಬಗ್ಗೆ ಸೂಕ್ಷ್ಮ ಅರಿವನ್ನು ಪಡೆಯಬೇಕಾಗುತ್ತದೆ.

ಹೀಗೆ ಮಾಡುವಾಗ ಒಂದನ್ನು ನೆನಪಿಡಬೇಕಾಗುತ್ತದೆ. ಇಲ್ಲಿ ಪ್ರಯತ್ನಿಸುತ್ತಿರುವುದು ಅಥವಾ ಅಪಾಯ ಕ್ಕೊಡ್ಡಿರುವುದು ಒಬ್ಬನ ಬದುಕನ್ನು ಅಲ್ಲ. ಇಡೀ ಬುಡಮಟ್ಟದ ಜನತೆಯ ಬದುಕನ್ನು ಎಂಬುದು. ●

ಯಾವುದು 'ಹಿಂದುತ್ವ'?

ಗುಡ್ಡಗಾಡು ಪ್ರದೇಶಗಳು ಜನರ ನಡುವೆ ಇದ್ದುಕೊಂಡು, ಸಾಮಾಜಿಕ ಸೇವೆ ನಡೆಸುತ್ತಾ(?) ಈ ಸಮುದಾಯಗಳಲ್ಲಿ ದ್ವೇಷ, ಸಂಕುಚಿತ ದೃಷ್ಟಿಕೋನ-'ಹಿಂದುತ್ವ'-ವನ್ನು ಬಿತ್ತುವುದು. ಆರ್.ಎಸ್.ಎಸ್.ನ ಕೆಲಸ. ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತ ಧಾರ್ಮಿಕ ಕಲಹವನ್ನು ಬಡಿದೆಬ್ಬಿಸುವುದು, ವಿ.ಎಚ್.ಪಿಯ ಕೆಲಸ. ಇನ್ನು ನೇರವಾಗಿ ಗಲಭೆಗಳಲ್ಲಿ ಭಾಗವಹಿಸುವುದು ಭಜರಂಗದಳ, ವಿಎಚ್‌ಪಿ ಮತ್ತು ಇತರ ಪುಡಿ ಕರಸೇವಕರ ಕೆಲಸ. ಸರ್ಕಾರದಲ್ಲಿಯೇ ಇದ್ದುಕೊಂಡು, ಕಾನೂನಿನ ಪರಿಧಿಯೊಳಗೆ, 'ಕೇಸರೀಕರಣ' ಪ್ರಕ್ರಿಯೆಯನ್ನು ಮುತುವರ್ಜಿಯಿಂದ ಮಾಡುವ ಕೆಲಸ ಬಿಜೆಪಿಯದು.

○ ಎಂ. ಆರ್. ಸತ್ಯಪ್ರಕಾಶ್

ಪ್ರಸ್ತುತ ದೇಶಾದ್ಯಂತ 'ಹಿಂದುತ್ವ' ಭಾರೀ ಚರ್ಚೆಯಲ್ಲಿದೆ. ರಾಜಕೀಯ ಲಾಭಗಳಿಗಾಗಿ ಸಲ್ಲದ ಚರ್ಚೆಗಳನ್ನು ಹುಟ್ಟುಹಾಕಿ ಎಲ್ಲೆಗಳನ್ನು ಪರೀಕ್ಷಿಸುವ ಸಂಘ ಪರಿವಾರದವರ ಮನುವಾದಿ ತರಲೆಯಿದು. ಅಸಲಿ 'ಹಿಂದುತ್ವ' ಎಂದರೇನು, ಸಂಘಪರಿವಾರದ ದಿಕ್ಕು-ದೆಶೆಯನ್ನು ರೂಪಿಸಿದ ಸಾವರ್ಕರ್ 'ಹಿಂದುತ್ವ' ಪದವನ್ನು ಮೊದಲಬಾರಿಗೆ ರಾಜಕೀಯ ಅರ್ಥದಲ್ಲಿ ಬಳಸಿರುವುದು ದೇಶದಲ್ಲಿನ ಪ್ರಜ್ಞಾವಂತರೆಲ್ಲರಿಗೂ ತಿಳಿದ ವಿಷಯ.

ರಾಜಕೀಯ ಲಾಭಕ್ಕಾಗಿ, ಅಧಿಕಾರ ಲೋಭಕ್ಕಾಗಿ 'ಹಿಂದೂಧರ್ಮ'ದಿಂದ ಹೈಜಾಕ್ ಮಾಡಿಕೊಂಡು ಬಳಸಲ್ಪಡುತ್ತಿರುವ 'ಹಿಂದುತ್ವ' ಪದವನ್ನು ಸ್ವಯಂ ಸೇವಕರು, ಸಂವಿಧಾನದ 'ಧರ್ಮನಿರಪೇಕ್ಷತೆ'ಯ ಮಟ್ಟಕ್ಕೆ ಏರಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವುದನ್ನಲ್ಲದೆ ಇದುವರೆಗೂ, ಇನ್ನೇನೂ ಮಾಡದ 'ಹಿಂದುತ್ವ'ಕ್ಕೆ ಹೊಸ ಮುಖವಾಡ ತೊಡಿಸುವ ಪ್ರಯತ್ನವನ್ನು ಇಲ್ಲಿಯವರೆಗೂ ಇದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಬಂದಿರುವ ಕೇಸರಿ ಪರಿವಾರದ ಮಂದಗಾಮಿ, ತೀವ್ರಗಾಮಿ ಮೊದಲಾದವರು ಮುಂದುವರೆಸುತ್ತಿದ್ದಾರೆ.

'ಕೋತಿ ತಾನು ತಿಂದು, ಮೇಕೆ ಬಾಯಿಗೆ ಒರೆಸಿದಂತೆ', ಗೋಧ್ರಾ ಹತ್ಯಾಕಾಂಡವನ್ನು ಮುಸ್ಲಿಂ ಸಮುದಾಯ ತೀಕ್ಷ್ಣವಾಗಿ ಖಂಡಿಸಿಲ್ಲವೆಂದು ಮಾನ್ಯ ಪ್ರಧಾನಿಗಳು ಒಂದೆಡೆ ಅಭಿಪ್ರಾಯ ಪಡುತ್ತಾರೆ. ಗುಜರಾತ್ ಹಿಂಸಾಚಾರದ ನಂತರ ವಿದೇಶದಲ್ಲಿ ಮುಖತೋರಿಸಲಾಗದೆ ಒದ್ದಾಡಿಹೋದ ಈ ನಮ್ಮ ಡೊಂಕುಬಾಲದ ನಾಯಕರು, ಮಾತೃಭೂಮಿಗೆ ಕಾಲಿಟ್ಟದ್ದೇ ತಡ, ಮತ್ತದೇ ದರ್ಬಾರಿ ರಾಗವನ್ನು ಹಾಡಿದ್ದು ತಿಳಿಯದ ವಿಷಯವಲ್ಲ.

ಹಿಂಸಾಚಾರದ ಬಿಸಿಯಲ್ಲಿ ನರೇಂದ್ರಮೋದಿಗೆ 'ರಾಜಧರ್ಮ'ವನ್ನು ಬೋಧಿಸುವ ಪ್ರಧಾನಿಗಳು, ಗೋವಾದಲ್ಲಿ ಹಠಾತ್ತನೆ 'ಶೀಘ್ರ ಚುನಾವಣೆ' ಪ್ರವಚನ ನೀಡುತ್ತಾರೆ. ಹೀಗೆ ದಿನಕ್ಕೊಂದು ತರ ಹೇಳಿಕೆಗಳನ್ನು, ತಮ್ಮ ಸೊಗಸಾದ ಮಾತುಗಾರಿಕೆಯ ಮೂಲಕ, ನೀಡುವುದರಲ್ಲಿ ನಿಸ್ಸೀಮರೆನಿಸಿಬಿಟ್ಟಿದ್ದಾರೆ. ಪ್ರಧಾನಿಗಳು. 'ಕೂಸನ್ನು ಚಿವುಟಿ, ತೊಟ್ಟಿಲು ತೂಗುವ' ಜಾಯಮಾನದವರೇನೊ ಇವರು ಎನ್ನಿಸದಿರದು. ಒಮ್ಮೆ 'ಮೋದಿಯ ವಕೀಲ'ನೆಂದು ಇನ್ನೊಮ್ಮೆ 'ಹಿಂದುತ್ವ' ಪ್ರಗತಿಶೀಲ ತತ್ವವೆಂದು ಮಂಡಿಸುವ ಪುಣ್ಯಕೋಟಿ ಪ್ರಧಾನಿ ವಾಜಪೇಯಿಯವರ ವರಸೆಗೆ ಎಂಥೆಂಥ'ವರೋ ತಬ್ಬಿಬ್ಬಾಗಿರುವುದುಂಟು.

ಪ್ರಧಾನಿಗಳು ಗೋವಾದಿಂದ ರವಾನಿಸಿರುವ ಹೊಸ ವರ್ಷದ ಸಂದೇಶದಲ್ಲಿ ಹೇಳುತ್ತಾರೆ, "ಹಿಂದುತ್ವ, ಪ್ರಗತಿಶೀಲ, ಉದಾರವಾದಿ ಮತ್ತು ಮುಕ್ತ ಪರಿಕಲ್ಪನೆ. ಹಿಂದುತ್ವ ಧರ್ಮಾಧಾರಿತ ದ್ವೇಷ, ಅಸೂಯೆಗಳನ್ನು ಯಾವುದೇ ಕಾರಣಕ್ಕೂ ಪ್ರತಿಪಾದಿಸುವುದಿಲ್ಲ. 'ಹಿಂದುತ್ವ' ಮತ್ತು 'ಭಾರತೀಯತೆ'ಗೆ ಯಾವುದೇ ವ್ಯತ್ಯಾಸವಿಲ್ಲ. ಭಾರತ ಎಲ್ಲರಿಗೂ ಸೇರಿದ್ದು, ಎಲ್ಲರೂ ಭಾರತಕ್ಕೆ ಸೇರಿದವರು (ವಿವಿಧ ಧರ್ಮ-ಜಾತಿಗಳ ಜನ) ಪ್ರತಿಯೊಬ್ಬ ಭಾರತೀಯನೂ ಸಮನಾದ ಹಕ್ಕು ಮತ್ತು ಕರ್ತವ್ಯಗಳನ್ನು ಹೊಂದಿದ್ದಾನೆ. ವಿವಿಧ ಧಾರ್ಮಿಕ ಮತ್ತು ಅಧಾರ್ಮಿಕ ಸಂಪ್ರದಾಯದಿಂದ ಶ್ರೀಮಂತವಾದ ದೇಶಿ ಸಂಸ್ಕೃತಿಯ ಸ್ವರೂಪವೆ ಭಾರತೀಯತೆ" ಸರಿ ಎಲ್ಲವೂ ಒಪ್ಪತಕ್ಕ ವಿಚಾರಗಳೇ. ಪ್ರಧಾನಿಯವರ ಉತ್ತಮವಾದ ವಿಚಾರಧಾರೆಗೆ ಅವರು ಖಂಡಿತ ಅಭಿನಂದನಾರ್ಹರು.

ಆದರೆ ಇದೇ ಪ್ರಧಾನಿಗಳು ಇತ್ತೀಚಿಗಷ್ಟೆ ನರೇಂದ್ರಮೋದಿಯನ್ನು ಅತ್ಯುತ್ತಮ ನಾಯಕ ಎಂದು ಹಾಡಿಹೊಗಳಿದ್ದು ಇನ್ನೂ ನೆನನಪಿನಿಂದ ಮಾಸಿಲ್ಲ. ನರೇಂದ್ರ ಮೋದಿ ಜಾರಿಗೊಳಿಸಿದ 'ಹಿಂದುತ್ವ'ಕ್ಕೂ, ವಾಜಪೇಯಿಯವರು ಪ್ರಸ್ತುತ ಪ್ರತಿಪಾದಿಸಿರುವ 'ಹಿಂದುತ್ವಕ್ಕೂ ಎತ್ತಣಿಂದೆತ್ತಣ ಸಂಬಂಧವೊ ಗೊತ್ತಾಗುತ್ತಿಲ್ಲ. ಇದು ಬಹುಶಃ ಪೇಪರ್ ಮೇಲಿನ 'ಹಿಂದುತ್ವ'. ನರೇಂದ್ರ ಮೋದಿ, ತೊಗಾಡಿಯ, ಉಮಾಭಾರತಿ ಪಟಾಲಂನದು ಪ್ರಧಾನಿಗಳೇ ಸಮ್ಮತಿಸಿರುವ ನಿಜವಾದ 'ಹಿಂದುತ್ವ', ವೇದಿಕೆ ಬದಲಾದಂತೆ ಹೇಳಿಕೆಗಳನ್ನು ಬದಲಾಯಿಸುವ ಪ್ರಧಾನಿಗಳ ಧೋರಣೆ ಅಚ್ಚರಿ ತರಿಸುತ್ತದೆ.

(35ನೇ ಪುಟಕ್ಕೆ)

ನಾವೇಕೆ ಬೌದ್ಧರಾಗಬೇಕು?

> ಹಿಂದೂ ಧರ್ಮವನ್ನು ತೊರೆಯಬೇಕೆಂಬ ಬಗ್ಗೆ ನಾನು ಆಂದೋಲನ ಪ್ರಾರಂಭಿಸಿದ್ದು 1935ರಲ್ಲಿ. ಆಗ ನಾಸಿಕ ಜಿಲ್ಲೆಯ ಯೆವಲಾದಲ್ಲಿ ದೊಡ್ಡ ಸಮಾವೇಶವೊಂದು ನಡೆಯಿತು. ಅಲ್ಲೇ ನಾನು ಘೋಷಿಸಿದ್ದು: 'ಹಿಂದೂ ಆಗಿ ಹುಟ್ಟಿರುವೆ; ಆದರೂ ಹಿಂದೂ ಆಗಿ ಸಾಯುವುದಿಲ್ಲ" ಇದು ಸುಮಾರು 21 ವರ್ಷಗಳ ಹಿಂದಿನ ಮಾತು. ಇಂದು ನಾನು ಅದನ್ನು ಪೂರ್ಣಗೊಳಿಸುತ್ತಿದ್ದೇನೆ. ಇಂದಿನ ಧರ್ಮಾಂತರದಿಂದ ನಾನು ತುಂಬಾ ಸಂತುಷ್ಟಗೊಂಡಿರುವೆ; ನನ್ನಲ್ಲಿ ನವೀನ ಪ್ರಫುಲ್ಲತೆ ಮೂಡಿದೆ. ನರಕದಿಂದ ಮುಕ್ತನಾದ ಭಾವನೆ ನನ್ನದಾಗಿದೆ. ನನ್ನನ್ನು ಯಾರೇ ಆಗಲಿ ಕುರುಡಾಗಿ ಅನುಸರಿಸುವುದು ಬೇಕಿಲ್ಲ; ಬೌದ್ಧ ಧರ್ಮ ಸ್ವೀಕರಿಸುವುದಾದರೆ ಸಾರಾಸಾರ ವಿಚಾರ ಮಾಡಿ ಸ್ವೀಕರಿಸುವುದು ಒಳಿತು.
>
> ○ ಡಾ|| ಬಿ.ಆರ್. ಅಂಬೇಡ್ಕರ್

ಬೌದ್ಧ ಧರ್ಮಾನುಯಾಯಿಗಳೇ,

ಬೌದ್ಧ ಧರ್ಮದ ಪುನರುದ್ಧಾರ ಹಾಗೂ ಪ್ರಚಾರದಂಥ ಮಹಾಕಾರ್ಯವನ್ನು ನಾನು ವಹಿಸಿಕೊಂಡಿದ್ದೇಕೆ ಎಂಬ ಬಗ್ಗೆ ಇಂದು ನನ್ನ ಭಾಷಣದಲ್ಲಿ ಪ್ರಸ್ತಾಪಿಸಲಿದ್ದೇನೆ.

ಈ ಮಹಾ ಸಮಾರಂಭವನ್ನು ನಡೆಸಲು ನಾಗಪುರವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ಎಂದು ಬಹು ಜನರು ಪ್ರಶ್ನಿಸಿದ್ದಾರೆ. ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಭದ್ರಕೋಟೆಯಾದ ಕಾರಣ, ಏನಾದರೊಂದನ್ನು ಮಾಡಿ ತೋರಿಸುವ ಇಚ್ಛೆಯಿಂದ ನಾನು ಈ ಸ್ಥಳವನ್ನು ಈ ಸಮಾರಂಭಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆಂದೂ ಕೆಲವರು ತಿಳಿದಿದ್ದಾರೆ. ಇದು ನಿಜವಲ್ಲ. ಇಂಥ ನಿರರ್ಥಕ ವಿಚಾರ ಮಾಡಲು ನನ್ನ ಬಳಿ ಸಮಯವಿಲ್ಲ. ಈ ಸಮಾರಂಭಕ್ಕಾಗಿ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವ ಹಂತದಲ್ಲಿ ಅಪ್ಪಿತಪ್ಪಿಯೂ ನನ್ನ ಮನಸ್ಸಿನಲ್ಲಿ ಆರ್.ಎಸ್.ಎಸ್. ಕುರಿತ ವಿಚಾರ ಬಂದಿಲ್ಲ.

ಬೌದ್ಧ ಧರ್ಮವನ್ನು ಪ್ರಚಾರ ಮಾಡುವಲ್ಲಿ ಹೆಚ್ಚಿನ ಶ್ರೇಯಸ್ಸು ನಾಗ ಜಾತಿ ಜನರಿಗೆ ಸಲ್ಲಬೇಕು. ಬೌದ್ಧ ಧರ್ಮಕ್ಕೆ ಸಂಬಂಧಿಸಿದಂತೆ. ಪ್ರಾಚೀನ ಕಾಲದ ಇತಿಹಾಸವನ್ನು ಅಭ್ಯಾಸ ಮಾಡಿದವರಿಗೆ ಈ ಅಂಶ ಚೆನ್ನಾಗಿ ಗೊತ್ತು. ನಾಗರು ಆರ್ಯರ ಕಡು ವಿರೋಧಿಗಳು. ಆರ್ಯ-ಅನಾರ್ಯರಲ್ಲಿ ಬಹುದೊಡ್ಡ ಯುದ್ಧಗಳು ನಡೆದಿವೆ. ನಾಗ ಜನರನ್ನು ನಿರ್ಮೂಲಗೊಳಿಸುವ ಗುರಿಯನ್ನು ಆರ್ಯರು ಹೊಂದಿದ್ದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ವಿಚಾರಗಳು ಪುರಾಣಗಳಲ್ಲಿ ಸಿಗುತ್ತವೆ. ಅರ್ಜುನನು ನಾಗರನ್ನು ಸುಟ್ಟು ಹಾಕಿದ್ದ. ಅಗಸ್ತ್ಯ ಮುನಿ ನಾಗರನ್ನು ರಕ್ಷಿಸಿದ್ದ. ಬಲಾತ್ಕಾರ ಮತ್ತು ಮೋಸದಿಂದ ನಾಗರನ್ನು ಪತಿತರನ್ನಾಗಿಸಲಾಯಿತು. ಈ ನಾಗರನ್ನು ಎತ್ತಲು ಒಬ್ಬ ಮಹಾಪುರುಷನ ಅವಶ್ಯಕತೆ ಇತ್ತು. ಭಗವಾನ್ ಬುದ್ಧನೇ ಇಂಥ ಮಹಾಪುರುಷನಾಗಿ ಮೂಡಿ ಬಂದ. ಸಮಗ್ರ ಭಾರತದಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಿದ್ದು ನಾಗ ಜನರೇ. ನಾವೆಲ್ಲ ಅದೇ ನಾಗರ ಸಂತಾನ. ವೀರ ನಾಗರು ಮುಖ್ಯವಾಗಿ ನೆಲೆಸಿದ್ದು ನಾಗಪುರದಲ್ಲಿ ಇದರಿಂದಾಗಿಯೇ ಈ ನಗರಕ್ಕೆ ನಾಗಪುರ ಎಂಬ ಹೆಸರು ಬಂದಿದ್ದು. ಈ ನಾಗಪುರಕ್ಕೆ 27 ಕಿ.ಮೀ. ದೂರದಲ್ಲಿ ಹರಿಯುತ್ತಿರುವ ನದಿಯ ಹೆಸರೂ ನಾಗ ಎಂದೇ ಇದೆ. ಈ ನದಿಯ ಎರಡೂ ಕಡೆಗಳಲ್ಲಿ ನಾಗ ಜನ ವಾಸಿಸುತ್ತಿದ್ದರು. ಇಂದು ನಡೆಯುತ್ತಿರುವ ಇಂಥ ಮಹಾ ಸಮಾರಂಭಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಇದು. ಆರ್.ಎಸ್.ಎಸ್. ವಿರೋಧಿಸಲು ಬೇರೆ ಹಲವು ಕಾರಣಗಳಿವೆ; ಆದರೆ ಅವರಲ್ಲಿ ಈರ್ಷ್ಯೆ ಹುಟ್ಟಿಸಲು ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬ ವಾದದಲ್ಲಿ ಮಾತ್ರ ಸತ್ಯಾಂಶವಿಲ್ಲ.

ನಾನು ಪ್ರಾರಂಭಿಸಿರುವ ಮಹಾಕಾರ್ಯವನ್ನು ತಾವುಗಳೆಲ್ಲಾ ಸ್ವೀಕರಿಸಿದ್ದೀರಿ; ಆದರೂ ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಅತಿ ಕಟುವಾದ ಟೀಕೆ-ಟಿಪ್ಪಣಿಗಳು ಪ್ರಕಟವಾಗಿವೆ. ನಾನು ನಿಮ್ಮನ್ನು "ತಪ್ಪು ಮಾರ್ಗದಲ್ಲಿ ಕರೆದೊಯ್ಯುತ್ತಿರುವುದಾಗಿ, ಧರ್ಮಾಂತರದ ಬಳಿಕವೂ ನಾವು ಅಸ್ಪೃಶ್ಯರಾಗೇ ಉಳಿಯುತ್ತೇವೆಂದು, ಧರ್ಮಾಂತರದಿಂದ ನಮಗೆ ಏನೂ ಒಳ್ಳೆಯದಾಗುವುದಿಲ್ಲ ಎಂದು ಟೀಕೆ ಮಾಡಲಾಗಿದೆ. ಈಗ ನಮಗೆ ದೊರಕಿರುವ ರಾಜಕೀಯ ಹಕ್ಕುಗಳು ಧರ್ಮಾಂತರದಿಂದ ಕೊನೆಗೊಂಡು ಬಿಡುತ್ತವೆ ಎಂದೂ ಪ್ರಚಾರ ಮಾಡಲಾಗಿದೆ. ನಾವು ಹೊಸ ಮಾರ್ಗ ಹಿಡಿಯುವುದು ಈ ಪತ್ರಿಕೆಗಳಿಗೆ ಬೇಕಿಲ್ಲ; ಹಳೇ ಮಾರ್ಗವನ್ನು ಅಥವಾ ಅದರದೇ ಒಂದು ತುಣುಕನ್ನು ನಾವು ಹಿಡಿಯಬೇಕೆಂದು ಇವುಗಳು ಅಪೇಕ್ಷಿಸುತ್ತವೆ. ಈ ಪತ್ರಿಕೆಗಳ ಪ್ರಚಾರವು ನಮ್ಮಲ್ಲಿ ಕೆಲವೊಂದು ಹಿರಿಯರ ಹಾಗೂ ಯುವಜನರ ಮೇಲೆ ಕೊಂಚ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ಈ ಬಗ್ಗೆ ನಾನು ಪ್ರತಿಕ್ರಿಯಿಸಬೇಕಾಗಿದೆ. ಸಂದೇಹವನ್ನು ದೂರ ಮಾಡದ ಹೊರತು, ನಮ್ಮ ಆಂದೋಲನಕ್ಕೆ ಬಲ ಬರುವುದಿಲ್ಲ.

ಮಹಾರರು ಮತ್ತು ಚಮ್ಮಾರರು ಸತ್ತ ಪ್ರಾಣಿಗಳನ್ನು ಎತ್ತಿ ಹಾಕುವುದನ್ನು ಹಾಗೂ ಸತ್ತ ಪ್ರಾಣಿಗಳ ಮಾಂಸ

ತಿನ್ನುವುದನ್ನು ಬಿಟ್ಟು ಬಿಡಬೇಕು ಎಂಬ ಮಾತನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ಹೇಳುತ್ತಾ ಬಂದಿದ್ದೇನೆ. ಇದನ್ನು ನಾನು ಆಗ ಆಡಿದಾಗ ಹಿಂದೂ ಸವರ್ಣೀಯರಿಗೆ ಅಪಘಾತವಾಗಿತ್ತು. ನಾನು ಅಂದು ಕೇಳಿದ್ದೆ. "ಹಸು-ಎಮ್ಮೆಗಳ ಹಾಲು ಕುಡಿಯುವವರು ನೀವು; ಅವುಗಳು ಸತ್ತಾಗ ಅವುಗಳನ್ನು ಎತ್ತಿ ಹಾಕಲು ಮಾತ್ರ ನಾವು ಬರಬೇಕೇ? ಹಿಂದೂ ಸವರ್ಣೀಯರು ತಮ್ಮ ತಾಯಿ ಸತ್ತಾಗ ತಾವೇ ಎತ್ತಿ ಹಾಕುತ್ತಾರಾದರೆ, ತಮ್ಮ ಹಸು-ಎಮ್ಮೆ ಎತ್ತುಗಳನ್ನೂ ತಾವೇ ಏಕೆ ಎತ್ತಿ ಹಾಕಬಾರದು?" ಆಗ ಇನ್ನೂ ಮುಂದುವರೆದು ನಾನು ಹೇಳಿದ್ದೆ: 'ನಿಮ್ಮ ತಾಯಿ ಸತ್ತಾಗ ಆ ಶವವನ್ನೂ ಎತ್ತಲು ನಮ್ಮನ್ನು ಕರೆಯುವುದಾದರೆ, ನಾವು ನಿಮ್ಮ ಹಸು-ಎಮ್ಮೆ-ಎತ್ತುಗಳು ಸತ್ತಾಗಲೂ ಬಂದು ಅವುಗಳ ಶವಗಳನ್ನು ಎತ್ತಿ ಒಯ್ಯುತ್ತೇವೆ'. ಇದರಿಂದ ಹಿಂದೂ ಸವರ್ಣೀಯ ಸಮಾಜ ವಿಹ್ವಲಗೊಂಡಿತ್ತು. ನನ್ನ ಮಾತುಗಳಿಗೆ ಉತ್ತರವೆಂಬಂತೆ (ಬ್ರಾಹ್ಮಣರ ಮುಖವಾಣಿಯಂತಿದ್ದ) 'ಕೇಸರಿ' ಪತ್ರಿಕೆಯಲ್ಲಿ ಒಬ್ಬ ಲೇಖಕ, ಸತ್ತ ಹಸು-ಎಮ್ಮೆ-ಎತ್ತುಗಳನ್ನು ಎತ್ತಿ ಹಾಕುವುದನ್ನು ಕೈಬಿಟ್ಟರೆ ಮಹಾರ-ಚಮ್ಮಾರರಿಗೆ ಎಷ್ಟೊಂದು ನಷ್ಟವಾಗುತ್ತದೆ ಎಂಬ ಬಗ್ಗೆ ಕೆಲವೊಂದು ಅಂಕಿ ಅಂಶಗಳನ್ನು ನೀಡಿದ. "ಒಂದು ಸತ್ತ ಹಸು-ಎಮ್ಮೆ ಎತ್ತನ್ನು ಒಯ್ದು ಅದರ ಹಲ್ಲು, ಕೋಡು, ಪಕ್ಕೆಲುಬು ಮುಂತಾದವುಗಳನ್ನು ಮಾರುವುದರಿಂದ ಒಬ್ಬ ಮಹಾರ-ಚಮ್ಮಾರ ಸುಮಾರು 500 ರಿಂದ 600 ವಾರ್ಷಿಕ ಲಾಭ ಗಳಿಸಬಹುದೆಂದು' ಆ ಲೇಖನದಲ್ಲಿ ವಾದಿಸಲಾಗಿತ್ತು. ನನ್ನ ಮಾತುಗಳನ್ನು ಕೇಳುವುದರಿಂದ ಮಹಾರ-ಚಮ್ಮಾರನಿಗೆ ಆರ್ಥಿಕ ನಷ್ಟವಾಗುತ್ತದೆಂದು, ಆ ಕಾರಣ ಅವರು ನನ್ನ ಮಾತು ಕೇಳಬಾರದೆಂದು ಅಲ್ಲಿ ವಾದ ಮಂಡಿಸಲಾಗಿತ್ತು.

ನಂತರ ನಾನು ಒಮ್ಮೆ ಸಂಗಮ ನೇರಕ್ಕೆ ಹೋಗಿದ್ದಾಗ, ಈ ಲೇಖಕನ ಭೇಟಿ ಆಯ್ತು. ಆತ ನನ್ನ ಮುಂದೆ ಅದೇ ವಾದ ಮಂಡಿಸಿದ. ಅಂದಿನ ಬಹಿರಂಗ ಸಭೆಯಲ್ಲಿ ಮಾತಾಡುವಾಗ ಈ ವಿಚಾರವನ್ನು ನಾನು ಎತ್ತಿಕೊಂಡೆ. "ಮಹಾರ-ಚಮ್ಮಾರರಿಗೆ ಊಟವಿಲ್ಲ; ಈ ಮಹಿಳೆಯರಿಗೆ ಮೈ ಮುಚ್ಚಿಕೊಳ್ಳಲು ಬಟ್ಟೆಯಿಲ್ಲ; ವಾಸಿಸಲು ಮನೆಯಿಲ್ಲ; ಉಳಲು ಭೂಮಿಯಿಲ್ಲ. ಹಾಗಾಗಿ ಅವರು ದಲಿತರಾಗಿದ್ದಾರೆ. ಅವರು ಮಹಾದುಃಖಿಗಳಾಗಿದ್ದಾರೆ. ಇದಕ್ಕೆ ಕಾರಣವೇನು?" ಬಹಿರಂಗ ಸಭೆಯಲ್ಲಿ ಯಾರೊಬ್ಬರೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಆಗ ನಾನು ಸಭೆಯಲ್ಲಿ ಹೇಳಿದೆ: "ನಮ್ಮ ಜನರ ಬಗ್ಗೆ ನಾವು ಯೋಚಿಸುತ್ತೇವೆ. ನಮ್ಮ ಜನರಿಗೆ ಲಾಭವಾಗುವ ಬಗ್ಗೆ ನೀವೇನೂ ಚಿಂತಿಸಬೇಕಿಲ್ಲ. ಸತ್ತ ಹಸು-ಎಮ್ಮೆ-ಎತ್ತುಗಳನ್ನು ಒಯ್ದು, ಅವುಗಳ ಹಲ್ಲು, ಮೂಳೆ, ಕೋಡುಗಳನ್ನು ಮಾರಿ ಹಣಗಳಿಸುವ ವಿಚಾರವನ್ನು ನೀವು ನಿಮ್ಮ ಜನರಿಗೇ ಹೇಳಿ. ನಿಮ್ಮ ಜಾತಿಯವರು ಭಾರತದ ಪ್ರತಿಯೊಂದು ಹಳ್ಳಿಹಳ್ಳಿಗೂ ಹೋಗಿ ನೆಲೆಸಿ, ಅಲ್ಲಿ ಸಾಯುವ ಹಸು-ಎಮ್ಮೆ-ಎತ್ತುಗಳನ್ನು ಒಯ್ದು, ಅವುಗಳ ಹಲ್ಲು, ಕೋಡು, ಎಲುಬುಗಳನ್ನು ಮಾರಿ ಹಣ ಸಂಪಾದನೆ ಮಾಡಿಕೊಂಡು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಿ. ಒಂದು ವೇಳೆ ಹೀಗೆ ಮಾಡಲು ನೀವು ಮುಂದೆ ಬಂದಿದ್ದೇ ಆದರೆ, ಪ್ರತಿಯೊಂದು ಕುಟುಂಬಕ್ಕೆ ಪ್ರತಿ ವರ್ಷ 500 ರೂ. ಹಣವನ್ನು ನಾನೇ ಕೊಡುತ್ತೇನೆ. ಇದರಿಂದ ನಿಮಗೆ ಎರಡು ಪಟ್ಟು ಲಾಭವಾಗುತ್ತದೆ. ನಮ್ಮ ಜನರಿಗೆ ನಷ್ಟವಾದರೂ ಅಡ್ಡಿಯಿಲ್ಲ; ನಿಮಗೆ ಲಾಭವಾಗುತ್ತದಲ್ಲ? ಅದೂ ಎರಡು ಪಟ್ಟು? ಈ ಅವಕಾಶವನ್ನು ಯಾವ ಹಿಂದೂ ಸವರ್ಣೀಯರೂ ಕಳೆದುಕೊಳ್ಳಬಾರದು" ಎಂದು ನಾನು ಬಹಿರಂಗ ಸಭೆಯಲ್ಲಿ ಕರೆ ನೀಡಿದೆ. ಆದರೆ ಇದುವರೆಗೆ ಒಬ್ಬನೇ ಒಬ್ಬ ಸವರ್ಣೀಯ ಹಿಂದೂ ಕೂಡ ಸತ್ತ ಪ್ರಾಣಿಯನ್ನು ಒಯ್ದು ಹಾಕಲು ಮುಂದೆ ಬಂದಿಲ್ಲ.

> **ಸಮಗ್ರ ಭಾರತದಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಿದ್ದು ನಾಗ ಜನರೇ. ನಾವೆಲ್ಲ ಅದೇ ನಾಗರ ಸಂತಾನ. ವೀರ ನಾಗರು ಮುಖ್ಯವಾಗಿ ನೆಲೆಸಿದ್ದು ನಾಗಪುರದಲ್ಲಿ. ಇದರಿಂದಾಗಿಯೇ ಈ ನಗರಕ್ಕೆ ನಾಗಪುರ ಎಂಬ ಹೆಸರು ಬಂದಿದ್ದು. ಈ ನಾಗಪುರಕ್ಕೆ 27 ಕಿ.ಮೀ. ದೂರದಲ್ಲಿ ಹರಿಯುತ್ತಿರುವ ನದಿಯ ಹೆಸರೂ ನಾಗ ಎಂದೇ ಇದೆ. ಈ ನದಿಯ ಎರಡೂ ಕಡೆಗಳಲ್ಲಿ ನಾಗ ಜನ ವಾಸಿಸುತ್ತಿದ್ದರು. ಇಂದು ನಡೆಯುತ್ತಿರುವ ಇಂಥ ಮಹಾ ಸಮಾರಂಭಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಇದು.**

ಇದೇ ರೀತಿ, ವಿಧಾನ ಸಭೆಗಳಲ್ಲಿ ನಮಗೆ ಕೆಲವೊಂದು ಸ್ಥಾನಗಳು ಸಿಕ್ಕಲೇಬೇಕು ಎಂದು ನಾನು ಹೇಳಿದಾಗ, ಬ್ರಾಹ್ಮಣ-ರಜಪೂತರು ತಾವೇನು ಮಾಡಬೇಕು ಎಂಬ ಮಾತುಗಳನ್ನು ಆಡಿದ್ದಾರೆ. ಅವರಿಗೆ ನಾನು ಹೇಳಿದ್ದೇನೆ. "ನೀವು ಮಹಾರ-ಚಮ್ಮಾರ-ಭಂಗಿಗಳು ಮಾಡುವ ಕೆಲಸಗಳಿಗೂ ಬನ್ನಿರಿ; ಆ ಕೆಲಸ ಮಾಡಿರಿ". ಆದರೆ ಇದುವರೆಗೆ ಯಾರೊಬ್ಬರೂ ಮುಂದೆ ಬಂದಿಲ್ಲ.

ಒಟ್ಟಾರೆ ಒಂದು ಮಾತಂತೂ ಸತ್ಯ. ಅದೆಂದರೆ ಪ್ರತಿಯೊಬ್ಬರಿಗೆ ಸ್ಥಾನಮಾನ, ಆತ್ಮಗೌರವ ಸ್ವಾಭಿಮಾನಗಳು ಮುಖ್ಯ; ಇವುಗಳನ್ನು ಪಡೆಯಲಿಕ್ಕೇ ಮೊದಲ ಆದ್ಯತೆ. (ಲಾಭಕ್ಕೆ ಏನಿದ್ದರೂ ಎರಡನೇ ಸ್ಥಾನ). ಆದ್ದರಿಂದಲೇ ನಾವು ಇವುಗಳನ್ನು ಪಡೆಯಲು ಸಂಘರ್ಷದ ದಾರಿ ಹಿಡಿದಿದ್ದೇವೆ.

ಗೌರವದ ಬದುಕು ನಡೆಸಲು ಪ್ರತಿಯೊಬ್ಬ ವ್ಯಕ್ತಿಗೂ ಹಕ್ಕಿದೆ. ಈ ಹಕ್ಕು ಪಡೆಯಲು ನಾವು ತ್ಯಾಗಕ್ಕೂ ಸಿದ್ಧ. ಬೌದ್ಧರಾಗುವುದರಿಂದ ನಾವು ಹೊಸ ಮನುಷ್ಯರಾಗುತ್ತೇವೆ. ನಾನು ಕೆಲವೊಂದು ಹಕ್ಕುಗಳನ್ನು ನಿಮ್ಮ ವರ್ಗಕ್ಕೆ ಕೊಡಿಸಿದ್ದೇನೆ. ಅವರಿಗೆ ಹೊಸ ಬದುಕು ದಕ್ಕುವಂತೆಯೂ ನೋಡಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇವೆ. ನನ್ನಲ್ಲಿ ನಂಬಿಕೆ ಇಡಿ. ವಿರೋಧಿಗಳು ತಮ್ಮ ಹಿತಾಸಕ್ತಿ ನೋಡಿಕೊಳ್ಳುತ್ತಿದ್ದಾರೆ; ಅವರ ಪ್ರಚಾರಕ್ಕೆ ಕಿವಿಗೊಡಬೇಡಿ.

ಇಂದು ನಾವಿಲ್ಲಿ ನಡೆಸುತ್ತಿರುವ ಮಹಾಸಮಾವೇಶಕ್ಕೆ ಸಂಬಂಧಿಸಿದಂತೆ ಹಲವಾರು ಕಡೆ ಚರ್ಚೆಗಳು ನಡೆಯುತ್ತಿವೆ. ಆದರೆ ಇದುವರೆಗೂ ಯಾರೊಬ್ಬರೂ ನನ್ನನ್ನು "ನೀವು ಬೌದ್ಧ ಧರ್ಮ ಸ್ವೀಕರಿಸಿದ್ದೇಕೆ? ಬೌದ್ಧ ಧರ್ಮವನ್ನೇ ಆಯ್ಕೆ ಮಾಡಿಕೊಂಡಿದ್ದೇಕೆ"? ಎಂದು ಕೇಳಿಲ್ಲ. ಧರ್ಮಾಂತರ ಎಂಬ ಆಂದೋಲನದಲ್ಲಿ ಇಂಥವು ಪ್ರಮುಖ ಪ್ರಶ್ನೆಗಳಾಗುತ್ತವೆ. ಯಾವ ಧರ್ಮವನ್ನು ಯಾಕಾಗಿ ನಾವು ಆಯ್ಕೆ ಮಾಡಿಕೊಳ್ಳಬೇಕೆಂಬ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಹಿಂದೂ ಧರ್ಮವನ್ನು ತೊರೆಯಬೇಕೆಂಬ ಬಗ್ಗೆ ನಾನು ಆಂದೋಲನ ಪ್ರಾರಂಭಿಸಿದ್ದು 1935ರಲ್ಲಿ. ಆಗ ನಾಸಿಕ ಜಿಲ್ಲೆಯ ಯೆವಲಾದಲ್ಲಿ ದೊಡ್ಡ ಸಮಾವೇಶವೊಂದು ನಡೆಯಿತು. ಅಲ್ಲೇ ನಾನು ಘೋಷಿಸಿದ್ದು: 'ಹಿಂದೂ ಆಗಿ ಹುಟ್ಟಿರುವೆ; ಆದರೂ ಹಿಂದೂ ಆಗಿ ಸಾಯುವುದಿಲ್ಲ" ಇದು ಸಮಾರು 21 ವರ್ಷಗಳ ಹಿಂದಿನ ಮಾತು. ಇಂದು ನಾನು ಅದನ್ನು ಪೂರ್ಣಗೊಳಿಸುತ್ತಿದ್ದೇನೆ. ಇಂದಿನ ಧರ್ಮಾಂತರದಿಂದ ನಾನು ತುಂಬಾ ಸಂತುಷ್ಟಗೊಂಡಿರುವೆ; ನನ್ನಲ್ಲಿ ನವೀನ ಪ್ರಫುಲ್ಲತೆ ಮೂಡಿದೆ. ನರಕದಿಂದ ಮುಕ್ತನಾದ ಭಾವನೆ ನನ್ನದಾಗಿದೆ. ನನ್ನನ್ನು ಯಾರೇ ಆಗಲಿ ಕುರುಡಾಗಿ ಅನುಸರಿಸುವುದು ಬೇಕಿಲ್ಲ; ಬೌದ್ಧ ಧರ್ಮ ಸ್ವೀಕರಿಸುವುದಾದರೆ ಸಾರಾಸಾರ ವಿಚಾರ ಮಾಡಿ ಸ್ವೀಕರಿಸುವುದು ಒಳಿತು; ಏಕೆಂದರೆ ಬಂದವರು ಸ್ಥಿರವಾಗಿ ಈ ಧರ್ಮದಲ್ಲಿ ಉಳಿಯುವುದೂ ಅಷ್ಟೇ ಮುಖ್ಯ.

ಮನುಷ್ಯನ ಉನ್ನತಿಗೆ ಧರ್ಮ ಅವಶ್ಯಕ. "ಧರ್ಮದಲ್ಲಿ ಏನೂ ಇಲ್ಲ; ಧರ್ಮಕ್ಕೆ ಯಾವ ಮಹತ್ವವೂ ಇಲ್ಲ" ಎಂಬುದು ಕಾರ್ಲ್ ಮಾರ್ಕ್ಸ್ ಪ್ರಣೀತ ಸಿದ್ಧಾಂತ. ಇದನ್ನು ನಾನು ಬಲ್ಲೆ. ಅವರ ಪ್ರಕಾರ ಮನುಷ್ಯನಿಗೆ ಬೆಳಿಗ್ಗೆ ಬೆಣ್ಣೆ ಹಚ್ಚಿದ ಟೋಸ್ಟ್, ಮಧ್ಯಾಹ್ನ ಊಟ, ಮಲಗಲು ಒಳ್ಳೇ ಹಾಸಿಗೆ-ಮಂಚ, ನೋಡಲು ಸಿನೆಮಾ, ರಾತ್ರಿ ಊಟ, ಇವಿಷ್ಟೇ ಅವಶ್ಯಕತೆಗಳು. ಈ ಸಿದ್ಧಾಂತ ನನಗೆ ಒಪ್ಪಿಗೆಯಿಲ್ಲ. ಬಡತನವನ್ನು ನಾನು ಅನುಭವಿಸಿ ಬಲ್ಲೆ. ಆರ್ಥಿಕ ಸ್ವಾವಲಂಬನೆ ಅತ್ಯಗತ್ಯ ಎಂಬುದನ್ನು ನಾನು ಒಪ್ಪುವೆ; ಆದರೆ ಮನುಷ್ಯನ ಬದುಕು ಕೇವಲ ಆರ್ಥಿಕ ಅವಶ್ಯಕತೆಗಳ ಪೂರೈಕೆಯಿಂದ ಪರಿಪೂರ್ಣವಾಗುವುದಿಲ್ಲ ಎಂಬುದೂ ನನ್ನ ಬಲವಾದ ನಂಬಿಕೆ.

ಪಶು ಮತ್ತು ಮನುಷ್ಯರಲ್ಲಿ ಅಂತರವಿದೆ. ಮೇವು ಸಿಕ್ಕು ಬಿಟ್ಟರೆ ಪಶುಗಳಿಗೆ ಇನ್ನೇನೂ ಬೇಕಾಗಿಲ್ಲ. ಆದರೆ ಮನುಷ್ಯನಿಗೆ ಹಾಗಲ್ಲ; ಊಟ ಸಿಕ್ಕ ಬಳಿಕವೂ ಅವನ ಬದುಕು ಪರಿಪೂರ್ಣವಾಗದು; ಏಕೆಂದರೆ ಮನುಷ್ಯನಿಗೆ ಮನಸ್ಸು ಎಂಬುದೊಂದಿದೆ. ಮನಸಿನ ವಿಕಾಸವಾಗಬೇಕಾದುದೂ ಅತ್ಯವಶ್ಯ. ಮನುಷ್ಯನನ್ನು ಪಶುಗಳ ಮಟ್ಟಕ್ಕೆ ಇಳಿಸುವ ಸಿದ್ಧಾಂತವನ್ನು ಒಪ್ಪಿಕೊಳ್ಳುವ ದೇಶಗಳಿಂದ ನಾವು ಕಲಿಯಬೇಕಾದೇನೂ ಇಲ್ಲ. ಶರೀರ ನಿರೋಗಿಯಾಗಿರಬೇಕು ಎಂದು ಇಷ್ಟಪಡುವ ಹಾಗೆಯೇ ಶರೀರವನ್ನು ಸಧೃಡವಾಗಿಡಲು ಮನಸು ಸುಸಂಸ್ಕೃತವಾಗಿ ಇರಬೇಕು ಎಂಬುದೂ ಅಪೇಕ್ಷಣೀಯ. ಶಾರೀರಕ ಮತ್ತು ಮಾನಸಿಕ ಎರಡೂ ಸ್ತರಗಳಲ್ಲಿ ಉನ್ನತಿ ಸಾಧಿಸುವುದೇ ಮನುಷ್ಯನ ಧ್ಯೇಯ.

ಶರೀರಕ್ಕೆ ರೋಗ ಬಂದಾಗ ಮನಸ್ಸು ಪ್ರಫುಲ್ಲವಾಗಿರಲು ಸಾಧ್ಯವಿಲ್ಲ. ಪ್ರಫುಲ್ಲತೆ ಬಾರದೇ ಉನ್ನತಿ ಸಾಧ್ಯವಿಲ್ಲ. ಉತ್ಸಾಹ ನಿರ್ಮಾಣವಾಗಬೇಕೆಂದರೆ

ಪ್ರಫುಲ್ಲತೆ ಇರಲೇಬೇಕು. ಚಮ್ಮಾರನ ಮಗ ಪ್ರಥಮ ದರ್ಜೆಯಲ್ಲಿ ಬರಬೇಕೇಕೆ? ಎಂಬ ಪ್ರಶ್ನೆಯನ್ನು ಹಾಕುವ ಉಪಾಧ್ಯಾಯ ಇರುವಾಗ ಚಮ್ಮಾರ ಮಕ್ಕಳಲ್ಲಿ ಅಭ್ಯಾಸ ಮಾಡಬೇಕೆಂಬುತ್ಸಾಹ ಮೂಡುವುದಾದರೂ ಹೇಗೆ?

ಒಟ್ಟಾರೆ, ಶರೀರ ಹಾಗೂ ಮನಸ್ಸು ಎರಡೂ ಸದೃಢವಾಗಲೇ ಧೈರ್ಯ ಬರಲು ಸಾಧ್ಯ; ಹೊಸತನ್ನು ಸಾಧಿಸಲು ಸಾಧ್ಯ. ಇಂಥವರು ಎಂಥ ಆಪತ್ತುಗಳನ್ನಾದರೂ ಎದುರಿಸಬಲ್ಲರು.

ಮನಸ್ಸು ಪ್ರಫುಲ್ಲಗೊಂಡಾಗ ಮಾತ್ರ ಮನುಷ್ಯನ ಉತ್ಸಾಹ ಮೂಡಲು ಸಾಧ್ಯ. ನಾನು ಘೋರ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಶಿಕ್ಷಣವನ್ನು ಪಡೆದೆ. ಶಾಲೆಯಲ್ಲಿ ನನಗೆ ಕುಡಿಯಲು ನೀರನ್ನೂ ಕೊಡುತ್ತಿರಲಿಲ್ಲ. ಮುಂಬಯಿ ನಗರದ ಎಲ್ಫಿನ್‌ಸ್ಟನ್ ಕಾಲೇಜಿನಲ್ಲೂ ನಾನು ಇಂಥದೇ ಪರಿಸ್ಥಿತಿ ಎದುರಿಸಿದೆ. ಆದಾಗ್ಯೂ ಮನಸ್ಸನ್ನು ವಿಕಾಸಗೊಳಿಸಿಕೊಳ್ಳುವ ಧ್ಯೇಯ ಹೊಂದಿ ನಾನು ಆಂದೋಲನವನ್ನು ನಡೆಸಿಕೊಂಡು ಬರುತ್ತಿದ್ದೇನೆ.

ಈ ದೇಶದಲ್ಲಿ ಶತಮಾನಗಳಿಂದಲೂ, ನಿರುತ್ಸಾಹ ಮೂಡಿಸುವ ವಾತಾವರಣವೇ ಇದೆ. ನಾವು ಅನ್ಯಾಯ ಮತ್ತು ಅಸಮಾನತೆ ಆಧಾರಿತವಾದ ಹಿಂದೂ (ಬ್ರಾಹ್ಮಣ) ಧರ್ಮದಲ್ಲಿರುವವರೆಗೆ ನಮ್ಮಲ್ಲಿ ಉತ್ಸಾಹ ಮೂಡಲು ಸಾಧ್ಯವಿಲ್ಲ. ಮನುಸ್ಮೃತಿಯಲ್ಲಿನ ಚಾತುರ್ವರ್ಣ ವ್ಯವಸ್ಥೆಯು ಮನುಷ್ಯನ ಉನ್ನತಿಗೆ ಮಹಾಘಾತುಕವಾದುದು. ಇದರ ಪ್ರಕಾರ ಶೂದ್ರರು ಜೀವನವಿಡೀ ಸೇವೆ ಮಾಡಿಕೊಂಡಿರಬೇಕು. ಇವರಿಗೆ ಶಿಕ್ಷಣಾವಕಾಶವಿಲ್ಲ. ಶೂದ್ರರು ಗುಲಾಮರಾಗಿರುವುದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಅನುಕೂಲವಿದೆ; ಲಾಭವಿದೆ. ಶೂದ್ರರ ಬಳಿ ಗುಲಾಮಗಿರಿಯ ಹೊರತು ಇನ್ನೇನಿದೆ. ಚಾತುರ್ವರ್ಣ ಪದ್ಧತಿ ಕೇವಲ ರೂಢಿಯಾಗಿಲ್ಲ; ಬದಲಾಗಿ, ಅದುವೇ ಧರ್ಮವಾಗಿ ಬಿಟ್ಟಿದೆ.

ಹಿಂದೂ ಧರ್ಮದಲ್ಲಿ ಸಮಾನತೆ ಎಂಬುದೇ ಇಲ್ಲ. "ನೀವು ನಂಬುವ ಚಾತುರ್ವರ್ಣ ವ್ಯವಸ್ಥೆ ಯಾವುದು? ಅದು ಹೇಗಿದೆ? ಅದರ ಆದಿ ಮತ್ತು ಅಂತ್ಯ ಎಲ್ಲಿ? ಅದು ಸಹಜವಾಗಿದೆಯೇ ಅಥವಾ ಒಂದರ ಮೇಲೊಂದಿದೆಯೇ? ಎಂಬ ನನ್ನ ಪ್ರಶ್ನೆಗಳಿಗೆ ಗಾಂಧಿ ಬಳಿ ಉತ್ತರವಿಲ್ಲ. ನಮ್ಮನ್ನು ಗುಲಾರನ್ನಾಗಿಸಿದ ಜನರ ಧರ್ಮವೇ ಅನ್ಯಾಯದ್ದು. ಹಿಂದೂ ಧರ್ಮದಿಂದ ಯಾರ ಅಭ್ಯುದಯವೂ ಸಾಧ್ಯವಿಲ್ಲ. ಇದೊಂದು ಪಾಪಮಯಿ ಧರ್ಮ. ಇದರಲ್ಲಿ ಯಾವ ಜೀವವೂ ಉಳಿದಿಲ್ಲ.

ನಮ್ಮ ದೇಶ ಎಷ್ಟೊಂದು ಬಾರಿ ಗುಲಾಮಗಿರಿಯಲ್ಲಿ ಸಿಲುಕಿಕೊಂಡಿತು. ನನ್ನ ಜನರಿಗೆ ಯುದ್ಧ ಮಾಡುವ ಅಧಿಕಾರ ಇದ್ದಿದ್ದರೆ, ಈ ಮಹಾನ್ ರಾಷ್ಟ್ರ ಎಂದೂ ಗುಲಾಮಗಿರಿಗೆ ಸಿಲುಕುತ್ತಿರಲಿಲ್ಲ; ಯಾರೂ ಈ ದೇಶದ ಮೇಲೆ ಆಕ್ರಮಣ ಮಾಡುವ ಧೈರ್ಯ ತೋರುತ್ತಿರಲಿಲ್ಲ.

ಹಿಂದೂ ಧರ್ಮ ಮನಸ್ಸುಗಳನ್ನೇ ಮಲಿನಗೊಳಿಸಿದೆ. ಬ್ರಾಹ್ಮಣ ಹೆಂಗಸೊಬ್ಬಳು ಗರ್ಭ ಧರಿಸುತ್ತಲೇ ಆ ಮಗುವಿಗೆ ಯಾವುದಾದರೂ ಉನ್ನತ ಸ್ಥಳದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಚಿಂತಿಸಲಾಗುತ್ತದೆ; ಅದೇ ನಮ್ಮ ಹೆಂಗಸೊಬ್ಬಳು ಗರ್ಭ ಧರಿಸಿದಾಗ, ಆ ಮಗುವಿಗೆ ಎಲ್ಲಾದರೂ ಕಸ ಗುಡಿಸುವ ಕೆಲಸ, ಜೀತದ ಕೆಲಸ ಸಿಗುತ್ತದೆಯೇ ಎಂಬ ಚಿಂತೆಯನ್ನು ಮಾಡಲಾಗುತ್ತದೆ. ಹಿಂದೂ ಧರ್ಮವು ಬ್ರಾಹ್ಮಣ ಹಾಗೂ ನಿಮ್ಮ ವರ್ಗದ ಜನರ ಮನಸ್ಸನ್ನು ಇಷ್ಟೊಂದು ಸಂಕುಚಿತಗೊಳಿಸಿಬಿಟ್ಟಿದೆ. ಇಂಥ ಧರ್ಮದಲ್ಲಿ ಉಳಿದಲ್ಲಿ ನಮ್ಮ ಉನ್ನತಿ ಸಾಧ್ಯವೇ ಇಲ್ಲ. ನಮ್ಮ ಉನ್ನತಿಗೆ ಸೂಕ್ತವಾದ ಧರ್ಮವೆಂದರೆ ಬೌದ್ಧ ಧರ್ಮವೇ.

ಬೌದ್ಧ ಧರ್ಮವನ್ನು ಬ್ರಾಹ್ಮಣರೂ ಸ್ವೀಕರಿಸಿದ್ದಾರೆ; ಶೂದ್ರರೂ ಸ್ವೀಕರಿಸಿದ್ದಾರೆ. ಇಂಥ ಎಲ್ಲಾ ಭಿಕ್ಷುಗಳನ್ನು ಉದ್ದೇಶಿಸಿ ಬುದ್ಧ ಹೇಳಿದ್ದೇನೆಂದರೆ, "ಹೇ ಭಿಕ್ಷುಗಳೇ, ನೀವುಗಳು ಅನೇಕ ದೇಶಗಳಿಂದ ಹಾಗೂ ಜಾತಿಗಳಿಂದ ಬಂದವರು; ನೀವೆಲ್ಲಾ ನದಿಗಳಂತೆ. ನದಿಗಳು ಸಾಗರವನ್ನು ಸೇರಿದಾಗ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುವ ಹಾಗೆ, ನೀವು ಬೌದ್ಧ ಸಂಘವೆಂಬ ಸಾಗರವನ್ನು ಸೇರಿದ ಬಳಿಕ, ನಿಮ್ಮ ಹಳೆಯ ಅಸ್ತಿತ್ವವನ್ನು ಕಳೆದುಕೊಂಡಿರುತ್ತೀರಿ. ಈ ಸಂಘದಲ್ಲಿ ಎಲ್ಲರೂ ಸಮಾನರು; ಸಮುದ್ರದ ನೀರಿನಲ್ಲಿ ಯಾವುದು ಗಂಗೆ ಯಾವುದು ಯಮುನೆ ಎಂದು ಹೇಳಲಾಗದಷ್ಟೇ".

ಬೌದ್ಧ ಧರ್ಮವನ್ನು ಬ್ರಾಹ್ಮಣರೂ ಸ್ವೀಕರಿಸಿದ್ದಾರೆ; ಶೂದ್ರರೂ ಸ್ವೀಕರಿಸಿದ್ದಾರೆ. ಇಂಥ ಎಲ್ಲಾ ಭಿಕ್ಷುಗಳನ್ನು ಉದ್ದೇಶಿಸಿ ಬುದ್ಧ ಹೇಳಿದ್ದೇನೆಂದರೆ, "ಹೇ ಭಿಕ್ಷುಗಳೇ, ನೀವುಗಳು ಅನೇಕ ದೇಶಗಳಿಂದ ಹಾಗೂ ಜಾತಿಗಳಿಂದ ಬಂದವರು; ನೀವೆಲ್ಲಾ ನದಿಗಳಂತೆ. ನದಿಗಳು ಸಾಗರವನ್ನು ಸೇರಿದಾಗ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುವ ಹಾಗೆ, ನೀವು ಬೌದ್ಧ ಸಂಘವೆಂಬ ಸಾಗರವನ್ನು ಸೇರಿದ ಬಳಿಕ, ನಿಮ್ಮ ಹಳೆಯ ಅಸ್ತಿತ್ವವನ್ನು ಕಳೆದುಕೊಂಡಿರುತ್ತೀರಿ. ಈ ಸಂಘದಲ್ಲಿ ಎಲ್ಲರೂ ಸಮಾನರು; ಸಮುದ್ರದ ನೀರಿನಲ್ಲಿ ಯಾವುದು ಗಂಗೆ ಯಾವುದು ಯಮುನೆ ಎಂದು ಹೇಳಲಾಗದಷ್ಟೇ".

ಧರ್ಮಾಂತರ ಮಾಡಲು ಇನ್ನೊಂದು ಸಮಯವನ್ನು ನೀವು ಯಾಕೆ ತೆಗೆದುಕೊಂಡಿರಿ ಎಂದು ಕೆಲವರು ನನ್ನನ್ನು ಪ್ರಶ್ನಿಸಿದ್ದಾರೆ. ಇದೂ ಕೂಡ ಮಹತ್ವಪೂರ್ಣ ಪ್ರಶ್ನೆ. ಧರ್ಮದ ತತ್ವಗಳನ್ನು ಇನ್ನೊಬ್ಬರಿಗೆ ಮನದಟ್ಟು ಮಾಡಿಕೊಡುವುದು ಸುಲಭವಾದ ಕಾರ್ಯವಲ್ಲ. ಆದಾಗ್ಯೂ ನಾನು ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ನಾನು ಇನ್ನೂ ಕೆಲವರ್ಷ ಜೀವಿಸಿದ್ದಲ್ಲಿ, ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತೇನೆ.

(ಬಾಬಾ ಸಾಹೇಬ್ ಅಂಬೇಡ್ಕರ್ ಜಿಂದಾಬಾದ್ ಎಂಬ ಘೋಷಣೆಗಳು ಕೇಳಿ ಬರುತ್ತವೆ)

ಉಳ್ಳವರಿಗೆ ಧರ್ಮದ ಅವಶ್ಯಕತೆಯಿಲ್ಲ. ದುಃಖಿತರಿಗೆ, ಪೀಡಿತರಿಗೆ ಧರ್ಮ ಬೇಕು. ಏಕೆಂದರೆ ಧರ್ಮದಿಂದ ಮನುಷ್ಯನಲ್ಲಿ ಆಶಾಭಾವನೆ ಮೊಳಕೆಯೊಡೆಯುತ್ತದೆ. "ಭಯ ಪಡಬೇಡಿ; ನಿರಾಶರಾಗಬೇಡಿ; ನಿಮ್ಮ ಬದುಕೂ ಕೂಡ ಸುಖಮಯವಾಗಲಿದೆ" ಎಂಬ ಆಶಾಭಾವನೆಯನ್ನು ಮನುಷ್ಯನು ಬೆಳೆಸಿಕೊಳ್ಳುವುದು ಧರ್ಮವನ್ನು ಆಶ್ರಯಿಸಿದಾಗಲೇ. ಕೆಲವರು, "ಅಸ್ಪೃಶ್ಯರು ಬೌದ್ಧರಾದರೆ ಏನಾಗುತ್ತದೆ? ಅವರು ಅಸ್ಪೃಶ್ಯರೇ ತಾನೇ?" ಎಂಬ ಪ್ರಶ್ನೆ ಎತ್ತಿದ್ದಾರೆ. ಇದು ಅತ್ಯಂತ ಧೂರ್ತ ಹಾಗೂ ಧಾರ್ಷ್ಟ್ಯದ ಪ್ರಶ್ನೆ. ಸ್ವಹಿತಾಸಕ್ತ ಶಕ್ತಿಗಳು ಮಾತ್ರ ಇಂಥ ಪ್ರಶ್ನೆ ಹಾಕಲು ಸಾಧ್ಯ.

ಯುರೋಪಿನಲ್ಲಿ ಕ್ರೈಸ್ತ ಧರ್ಮ ಪ್ರಸಾರವಾಗಲಾರಂಭಿಸಿದಾಗ, ರೋಂ ಸುತ್ತಮುತ್ತಲ ದೇಶಗಳಲ್ಲಿ ತೀವ್ರ ಆರ್ಥಿಕ ಅಭದ್ರತೆಯಿತ್ತು. ಅಲ್ಲಿ ಜನ ಊಟಕ್ಕೂ ಪರದಾಡುತ್ತಿದ್ದರು. ಆಗ ಆ ಧರ್ಮವನ್ನು ಬಹುಜನ ದುಃಖಿತರು ಸೇರಿದಾಗ, ಗಿಬನ್ ಎಂಬಾತ, ಕ್ರೈಸ್ತ ಧರ್ಮವೊಂದು ಭಿಕಾರಿಗಳ ಧರ್ಮ ಎಂದು ವ್ಯಂಗ್ಯವಾಡಿದ್ದ. ಆದರೆ ಇಂದು ಆ ಧರ್ಮ ಇಡೀ ಯುರೋಪಿನ ಧರ್ಮವಾಗಿದೆ. ಗಿಬನ್ ಇಂದು ಬದುಕಿದ್ದಿದ್ದರೆ, ಆತನ ವ್ಯಂಗ್ಯವೇ ಆತನಿಗೆ ಮುಖಕ್ಕೆ ರಾಚುತ್ತಿತ್ತು.

ಬೌದ್ಧ ಧರ್ಮವು ಭಂಗಿ-ಚಮ್ಮಾರರದ್ದು ಎಂದು ಕೆಲವರು ಕುಹಕ ಮಾಡಬಹುದು; ಆದರೆ ಸತ್ಯವೇನು? ಇಂದು ವಿದೇಶಗಳಲ್ಲೂ ಅತಿಪ್ರಸಿದ್ಧ ಪೂಜನೀಯ ಬುದ್ಧ. ರಾಮ-ಕೃಷ್ಣರಲ್ಲ; ರಾಮ-ಕೃಷ್ಣರ ಮೂರ್ತಿಗಳಿಗೆ ಒಬ್ಬರೂ ಆಕರ್ಷಿತರಾಗುವುದಿಲ್ಲ; ಅಲ್ಲಿ ಅದೇ ಬುದ್ಧನ ಮೂರ್ತಿಗಳಿಗೆ ಮನಸೋಲುವವರು ಅಸಂಖ್ಯ.

ನಾವು ಈಗ ನಮ್ಮ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇದು ನಮಗೆ ಶ್ರೇಷ್ಠ ಮಾರ್ಗ. ಇದು ನಮ್ಮಲ್ಲಿ ಆಶಾಭಾವನೆಯನ್ನು ಚಿಗುರಿಸಿದೆ. ಈ ಧರ್ಮವನ್ನು ನಾವು ಎಲ್ಲಿಂದಲೋ ತಂದಿಲ್ಲ. ಇದು ಇಲ್ಲಿನದೇ. ಈ ದೇಶದಲ್ಲಿ 2000 ವರ್ಷಕ್ಕಿಂತ ಮುಂಚೆ ಬೌದ್ಧ ಧರ್ಮ ಇತ್ತು. ಮೊದಲೇ ಈ ಮಾರ್ಗದತ್ತ ಒಲಿಯದಿರುವ ಬಗ್ಗೆ ನಮಗೆ ಈಗ ದುಃಖವೆನಿಸುತ್ತಿದೆ. ಇದು ಸ್ಥಾವರ ಧರ್ಮವಲ್ಲ. ಸಮಯಾನುಸಾರ ಪರಿವರ್ತನೆಗೆ ಒಳಪಡಬಲ್ಲ ಅಂತಃಶಕ್ತಿ ಈ ಧರ್ಮಕ್ಕಿದೆ. ಇದನ್ನು ಬುದ್ಧನೇ ಸಾರಿದ್ದಾನೆ. ಇದರಷ್ಟು ಉದಾರ ಧರ್ಮ ವಿಶ್ವದಲ್ಲಿ ಇನ್ನೊಂದಿಲ್ಲ.

ಮುಸಲ್ಮಾನರ ಆಕ್ರಮಣದಿಂದಾಗಿ ಬೌದ್ಧ ಧರ್ಮ ನಾಶಹೊಂದಿತು. ಆಕ್ರಮಣ ಕಾಲದಲ್ಲಿ ಸಹಸ್ರಾರು ಮೂರ್ತಿಗಳು ಪುಡಿ ಪುಡಿಯಾದವು. ಭಿಕ್ಷುಗಳು ಕೊಲೆಯಾದರು. ಭಯಭೀತರಾದ ಭಿಕ್ಷುಗಳು ಟಿಬೆಟ್, ಚೀನಾ ಮುಂತಾದ ಅನ್ಯ ದೇಶಗಳಿಗೆ ಪಲಾಯನಗೈದರು. ಪರಿಣಾಮವಾಗಿ ಇಲ್ಲಿ ಭಿಕ್ಷುಗಳ ಕೊರತೆ ಉಂಟಾಯಿತು. ಆಗ ವಾಯುವ್ಯ ಪ್ರಾಂತದಲ್ಲಿ ಚಕ್ರವರ್ತಿಯಾಗಿದ್ದ ಮಿನಾಂಡರ್ (ಮಿಲಿಂದ್) ದೊರೆಗೆ ಧರ್ಮ ಜಿಜ್ಞಾಸೆಯಲ್ಲಿ ವಿಪರೀತ ಆಸಕ್ತಿ ಇತ್ತು. ಅವನು ಹಿಂದೂ ಧರ್ಮಶಾಸ್ತ್ರಜ್ಞರ ಜೊತೆ ಹಲವಾರು ಬಾರಿ ಚರ್ಚೆ ನಡೆಸಿ, ಅವರನ್ನು

ಸೋಲಿಸಿದ್ದ. ಹಲವರನ್ನು ನಿರುತ್ತರರನ್ನಾಗಿಸಿದ್ದ. ಈ ದೊರೆ ಬೌದ್ಧ ಧರ್ಮಶಾಸ್ತ್ರಜ್ಞರೊಂದಿಗೂ ಚರ್ಚೆ ನಡೆಸಬಯಸಿದ. ಸ್ಥಳೀಯ ಬೌದ್ಧ ಧರ್ಮೀಯರು, ಮಹಾ ಬೌದ್ಧ ಶಾಸ್ತ್ರಜ್ಞ, ಭಿಕ್ಷು ನಾಗಸೇನ ಅವರನ್ನು ಭೇಟಿಯಾಗಿ, ದೊರೆ ಮಿನಾಂಡರ್ ಜೊತೆ ಬೌದ್ಧ ಧರ್ಮದ ಬಗ್ಗೆ ಚರ್ಚೆ ನಡೆಸಲು ಬರುವಂತೆ ಕೋರಿದರು. ದೊರೆ ಮಿನಾಂಡರ್ ಮತ್ತು ಭಿಕ್ಷು ನಾಗಸೇನರ ನಡುವೆ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಮಿನಾಂಡರ್ ಕೇಳಿದ ಪ್ರಶ್ನೆ "ಧರ್ಮವೊಂದು ನಶಿಸುವುದು ಏಕೆ"? ಇದಕ್ಕೆ ಭಿಕ್ಷು ನಾಗಸೇನ ಉತ್ತರಿಸಿದ್ದು; "ಧರ್ಮವೊಂದು ನಶಿಸುವುದಕ್ಕೆ ಮೂರು ಮುಖ್ಯ ಕಾರಣಗಳಿವೆ. ಒಂದನೇ ಕಾರಣ, ಮೂಲಾಶಯ ಗಟ್ಟಿಯಿಲ್ಲದ ಧರ್ಮ ಚಿರಕಾಲ ಉಳಿಯದು; ಅದಕ್ಕೆ ಕಾಲಧರ್ಮ ಎಂದು ಮಾತ್ರ ಹೇಳಬಹುದು. ಅದು ಕಾಲ ಕಳೆದಂತೆ ಕರಗಿ ಹೋಗುತ್ತದೆ. ಎರಡನೇ ಕಾರಣ, ಧರ್ಮವೊಂದನ್ನು ಪ್ರಸಾರ ಮಾಡುವ ಜ್ಞಾನಿಗಳ ಕೊರತೆ ತಲೆದೋರಿದಾಗ ಅದು ಮರೆಯಾಗುತ್ತದೆ. ಜಿಜ್ಞಾಸೆಗಳು ಧರ್ಮ ಜ್ಞಾನೆ ನಡೆಸುತ್ತಿರಬೇಕು; ವಿರೋಧಿಗಳ ವಾದಕ್ಕೆ ಉತ್ತರವನ್ನು ನೀಡುತ್ತಿರಬೇಕು.

ಮೂರನೇ ಕಾರಣ, ಧರ್ಮಜಿಜ್ಞಾಸೆ ಜ್ಞಾನಿಗಳಿಗೆ ಪ್ರಿಯವಾಗಬಹುದು; ಆದರೆ ಸಾಮಾನ್ಯರಿಗೆ ಆ ಧರ್ಮದ ತತ್ವಗಳಿಂದ ಆತ್ಮಗೌರವ, ಪ್ರಫುಲ್ಲತೆ ಹಾಗೂ ಉತ್ಸಾಹಗಳು ದೊರಕದೇ ಹೋದರೆ, ಅಂಥ ಧರ್ಮ ಬಹುಕಾಲ ಉಳಿಯದು".

ಈ ಕಾಲಕ್ಕೆ ಮಾತ್ರ ಬೌದ್ಧ ಧರ್ಮವನ್ನು ಆಶ್ರಯಿಸಬೇಡಿ. 2500 ವರ್ಷಗಳ ಬಳಿಕವೂ ಬೌದ್ಧ ಧರ್ಮದ ತತ್ವಗಳನ್ನು ವಿಶ್ವಾದ್ಯಂತ ಮನ್ನಿಸಲಾಗುತ್ತಿದೆ ಎಂಬುದನ್ನು ಮರೆಯಬೇಡಿ.

ಅಮೆರಿಕಾದಲ್ಲಿ ಬೌದ್ಧ ಧರ್ಮಾನುಯಾಯಿಗಳು ಸುಮಾರು 2000 ಸಂಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಲಕ್ಷಾಂತರ ರೂ. ವೆಚ್ಚದಲ್ಲಿ ವಿಹಾರಗಳನ್ನು ಅಲ್ಲಿ ಕಟ್ಟಿಸಲಾಗಿದೆ. ಜರ್ಮನಿಯಲ್ಲಿ 3-4 ಸಾವಿರ ಬೌದ್ಧ ಸಂಸ್ಥೆಗಳಿವೆ. ಬುದ್ಧನ ಬೋಧನೆ ಅಜರಾಮರ. ಆದಾಗ್ಯೂ ಬುದ್ಧನು ತನ್ನ ತತ್ವಗಳು ಚಿರಕಾಲ ಎಂದು ಪ್ರತಿಪಾದಿಸಲಿಲ್ಲ. ತನ್ನ ಧರ್ಮ ಈಶ್ವರನ ಕೊಡುಗೆ ಎಂದು ಬುದ್ಧ ಹೇಳಿಲ್ಲ. "ನಾನು ಸಾಮಾನ್ಯ, ನನಗೆ ಸರಿ ತೋರಿದ್ದನ್ನು ನಾನು ಬೋಧಿಸಿರುವೆ. ನಿಮಗೆ ಒಪ್ಪಿಗೆಯಾಗುವುದನ್ನು ನೀವು ಸ್ವೀಕರಿಸಿ" ಎಂದು ಮಾತ್ರ ಬುದ್ಧ ಹೇಳಿದ್ದಾನೆ. ಈ ಔದಾರ್ಯ ಇನ್ಯಾವ ಧರ್ಮದಲ್ಲೂ ನಮಗೆ ಕಾಣದು.

ಬೌದ್ಧ ಧರ್ಮ ಮತ್ತು ಇತರ ಧರ್ಮಗಳ ನಡುವೆ ಅಪಾರ ಅಂತರವಿದೆ. ಇತರ ಧರ್ಮಗಳು ಮನುಷ್ಯ ಮತ್ತು ಈಶ್ವರನ ನಡುವಣ ಸಂಬಂಧಕ್ಕೆ ಹೆಚ್ಚು ಒತ್ತನ್ನು ಕೊಡುತ್ತವೆ. ಬೌದ್ಧ ಧರ್ಮ ಹೊಂದಿರುವಂಥ ಮೂಲಾಶಯವನ್ನು ಇತರ ಯಾವ ಧರ್ಮಗಳೂ ಹೊಂದಿಲ್ಲ. "ವಿಶ್ವವು ದೇವರಿಂದ ನಿರ್ಮಿತವಾಯಿತು; ಆಕಾಶ, ವಾಯು, ಚಂದ್ರ, ಸೂರ್ಯ ಮತ್ತು ಎಲ್ಲವೂ ಅವನಿಂದ ಸೃಷ್ಟಿಯಾದವು; ದೇವರು ನಮಗಾಗಿ ಇವೆಲ್ಲವನ್ನು ನಿರ್ಮಿಸಿದ್ದಾನೆ. ಆದ್ದರಿಂದ ನಾವು ದೇವರನ್ನು ನಿತ್ಯವೂ ಸುತ್ತಿಸುತ್ತಿರಬೇಕು" ಎಂದು ಇತರ ಧರ್ಮಗಳು ಹೇಳುತ್ತವೆ. ಆದರೆ ಬೌದ್ಧ ಧರ್ಮದಲ್ಲಿ ದೇವರಿಗೆ ಮತ್ತು ಆತ್ಮಕ್ಕೆ ಅವಕಾಶವಿಲ್ಲ. ಪ್ರಪಂಚದಲ್ಲಿ ದುಃಖ ತುಂಬಿದೆ; ಮಾನವ ದುಃಖ ಪೀಡಿತನಾಗಿದ್ದಾನೆ. ಇಂಥ ಪೀಡಿತರ ಉನ್ನತಿಯೇ ಬೌದ್ಧ ಧರ್ಮದ ಧ್ಯೇಯವಾಗಿದೆ. ಬುದ್ಧನಿಗಿಂತ ಯಾವ ಹೆಚ್ಚಿನದನ್ನೂ ಕಾರ್ಲ್ ಮಾರ್ಕ್ಸ್ ಹೇಳಿಲ್ಲ. "ಈ ಧರ್ಮ ಬಹುಜನ ಹಿತಾಯ ಬಹುಜನ ಸುಖಾಯ, ಜನಾನು ಕಂಪಾಯ ಆದಿ, ಮಧ್ಯೆ ಮತ್ತು ಅಂತ್ಯದಲ್ಲಿ ಕಲ್ಯಾಣಕರ". ಬುದ್ಧನ ಈ ಬೋಧನೆ ಸರಳ ಹಾಗೂ ನೇರವಾದುದಾಗಿದೆ.

ನಿಸೂರಾಗಿ

ನಿಸೂರಾಗಿ ಅಂಗಾತ ಮಲಗಿ
ಆಕಾಶ ನೋಡುತ್ತ, ಹಾಗೆ
ಮೇಲೆ ಎತ್ತರಕೆ ಚಿಮ್ಮಿ
ಆಕಾಶ, ನೀರು, ಗಾಳಿ, ಹಕ್ಕಿ
ಚಿಲಿಪಿಲಿ ಎಲ್ಲ-ಎಲ್ಲಾ
ನಾನೇ, ಹಂಗಿನರಮನೆ ತೊರೆದು
ಜಂಗಮನಾಗಿ-ಮರುಳು ಮಾಡುವ
ಜಗಕೆ ನಕ್ಕು-ನಗಿಸುತ್ತ
ಮರು-ಮರುಳು ಮಾಡಿ
ಜಗದ ಮರ್ಮವ ಅರಿತರೂ
ಕಿನ್ನರ ಜೋಗಿಯಂತೆ
ಕೊಳನೂದುವ "ಕೃಷ್ಣಾ"
ನನ್ನೊಳಗ ಮಂಟಪವು
ಘಣಗುಡುವ ಹೊತ್ತು-ಹೂವು
ಹಣ್ಣುಗಳುಂಟು-ಗಂಧ ಧೂಪ
ವಿರಹ-ವೇದನೆಯ ಕರ್ಪೂರದಾರತಿ
ಉರಿದು ಹೋಗುವ ಮೊದಲು
ನೆಲೆಯಾಗು ಬಾ...
ಅದೆಷ್ಟು ಗೋಪಿಕೆಯರು
ನಿನ್ನೊಡನಾಡಲಿ ಬಿಡು
ಅವರಿವರೊಡನೆ ಬೆಸೆದುಕೊಳ್ಳುವ ಹೊತ್ತು
ರಸದ ಉತ್ತುಂಗ ಸ್ಥಿತಿಯಲ್ಲಿ
ನೀ ಬಿಟ್ಟ ನಿಟ್ಟುಸಿರು
ನನ್ನೆದೆಗೆ ಬರಲಿ
ಅರಸುವೆನು ಅದರಲ್ಲೆ
ನಿನ್ನೊಳಗೆ ನನ್ನ ಬೆಚ್ಚನೆಯ
ನೆನಪು
ಹೀಗೆ ಅಂಗಾತ ನಿಸೂರಾಗಿ
ಮಲಗಿ
ನಿಸೂರಾಗಿ

○ ಸುಜಾತಾ ಕುಮಟಾ

ಸೋದರ-ಸೋದರಿಯರೆ, ಈಗ ಹೇಳಬೇಕಾಗಿದ್ದೆಲ್ಲವನ್ನೂ ನಾನು ಹೇಳಿದ್ದೇನೆ. ಬೌದ್ಧ ಧರ್ಮ ಒಳ್ಳೆಯ ಧರ್ಮವಾಗಿದೆ. ಇದರಲ್ಲಿ ಯಾವ ದೋಷವೂ ಇಲ್ಲ. ಹಿಂದೂ ಧರ್ಮದಲ್ಲಿದ್ದ ನಮ್ಮನ್ನು ವಿದ್ವಾಂಸರಾಗುವ ಅವಕಾಶಗಳಿಂದ ವಂಚಿಸಲಾಯಿತು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ನಮ್ಮ ತಲೆ ಮೇಲೆ ದೊಡ್ಡ ಬೆಟ್ಟವೊಂದನ್ನು ಇಟ್ಟು ಬಿಟ್ಟಿದ್ದಾರೆ. ಇದನ್ನು ಕೆಳಗೆ ಉರುಳಿಸುವುದು ಹೇಗೆ ಅಥವಾ ಇದನ್ನು ಒಡೆದು ಚೂರು ಚೂರು ಮಾಡುವುದು ಹೇಗೆ ಎಂಬ ಜ್ಞಾನವನ್ನು ನಾನು ನಿಮಗೆ ನೀಡಬಯಸುತ್ತೇನೆ. ಇದು ನನ್ನ ಕರ್ತವ್ಯವೂ ಹೌದು. ಇದನ್ನು ನೀವೆಲ್ಲರೂ ಸ್ವೀಕರಿಸಿ.

ಇಂದಿನಿಂದ ನಿಮ್ಮೆಲ್ಲರ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಎಲ್ಲರೂ ನಿಮ್ಮನ್ನು ಗೌರವಿಸುವಂತೆ ಜೀವನ ನಡೆಸಿ, ಬೌದ್ಧ ಧರ್ಮದ ದೃಷ್ಟಿಯಿಂದ ಹೇಳುವುದಾದರೆ ಭಾರತ ಒಂದು ಕಾಡಿನಂತಿದೆ. ನಾಗರಿಕ ಜೀವನ ನಡೆಸಲು ಸಾಧ್ಯವಾಗುವಂತೆ ಭಾರತವನ್ನು ಬದಲಾಯಿಸಬೇಕಾಗಿದೆ. ಆದ್ದರಿಂದ ನೀವು ಒಪ್ಪಿಕೊಂಡಿರುವಂತೆ, ಬೌದ್ಧ ಧರ್ಮವನ್ನು ಉತ್ತಮ ರೀತಿಯಲ್ಲಿ ಅನುಸರಿಸುವ ಪ್ರತಿಜ್ಞೆ ಮಾಡಿ. ಇಲ್ಲದೇ ಹೋದರೆ ನಿಮ್ಮಿಂದ ದರ್ಮ ಪರಿವರ್ತನೆಗೆ ಅಪಚಾರವಾಗುತ್ತದೆ. ನೀವೆಲ್ಲರೂ ಬೌದ್ಧರು; ನಮ್ಮ ದೇಶದ ಹಾಗೂ ಸಮಗ್ರ ವಿಶ್ವದ ಉನ್ನತಿಗೆ ಶ್ರಮಿಸುವುದಾಗಿ ಇಂದು ಪ್ರತಿಜ್ಞೆ ಕೈಗೊಳ್ಳಿ. ವಿಶ್ವದ ಉನ್ನತಿ ಬೌದ್ಧ ಧರ್ಮದಿಂದ ಮಾತ್ರ ಸಾಧ್ಯ. ನ್ಯಾಯಕ್ಕೆ ಅವಕಾಶ ಸಿಕ್ಕದವರಿಗೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ.

ಈ ಕೆಲಸ ಬಹು ಜವಾಬ್ದಾರಿಯುತವಾದುದು. ಇದನ್ನು ಸಮರ್ಥವಾಗಿ ನಿಭಾಯಿಸಲು ನೀವು ಸಂಕಲ್ಪ ಕೈಗೊಳ್ಳಬೇಕಾಗಿದೆ. ವೈಯಕ್ತಿಕ ಜೀವನದಲ್ಲೇ ಮುಳುಗಿ ಹೋಗಬೇಡಿ. ಧರ್ಮ ಪ್ರಚಾರದಂಥ ಪವಿತ್ರ ಕಾರ್ಯಕ್ಕೆ ನಿಮ್ಮ ಸಮಯ ಹಾಗೂ ಆದಾಯದ ಶೇಕಡಾ 20ರಷ್ಟನ್ನಾದರೂ ದಾನ ಮಾಡಿ. ನಿಮ್ಮೆಲ್ಲರನ್ನೂ ನಾನು ನನ್ನ ಜೊತೆ ಕರೆದೊಯ್ಯಬೇಕಾಗಿದೆ. ತಥಾಗತನೂ ಮೊಟ್ಟ ಮೊದಲ ಬಾರಿಗೆ ಕೆಲವೇ ಕೆಲವು ಜನರಿಗೆ ಧರ್ಮದೀಕ್ಷೆ ಕೊಟ್ಟಿದ್ದ; ಅವರನ್ನು ಧರ್ಮ ಪ್ರಚಾರಕ್ಕೆ ತೊಡಗಿಸಿದ. ಬುದ್ಧನು ಕಾಲ, ದೇಶಗಳನ್ನು ಪರಿಗಣಿಸಿ, ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡ; ನಾವು ಹಾಗೇ ಮಾಡಬೇಕು.

ಭಾರತದಲ್ಲಿ ಇಂದು ಬಹಳ ಜನ ಭಿಕ್ಷುಗಳು ಇಲ್ಲ. ಧರ್ಮ ಪರಿವರ್ತನೆಗೆ ಭಿಕ್ಷುಗಳು ಬೇಕೇ ಬೇಕು ಎಂದೇನೂ ಇಲ್ಲ. ಬೌದ್ಧ ಧರ್ಮ ಸ್ವೀಕರಿಸಿದ ಪ್ರತಿಯೊಬ್ಬರೂ ಭಿಕ್ಷು ಕಾರ್ಯವನ್ನು ಕೈಗೊಳ್ಳಬಹುದೆಂದು ನಾನು ಘೋಷಿಸುತ್ತೇನೆ. ಇನ್ನೊಬ್ಬರಿಗೆ ತ್ರಿಶರಣ, ಪಂಚಶೀಲ, ಅಷ್ಟಾಂಗಮಾರ್ಗ ಮತ್ತು ಇಪ್ಪತ್ತೆರಡು ಪ್ರತಿಜ್ಞೆಗಳನ್ನು ಬೋಧಿಸುವುದರೊಂದಿಗೆ, ಬೌದ್ಧ ಧರ್ಮ ದೀಕ್ಷೆಯನ್ನು ನೀಡಬಹುದಾಗಿದೆ.

(1956ರ ಅಕ್ಟೋಬರ್ 14ರಂದು ನಾಗಪುರದ ದೀಕ್ಷಾಭೂಮಿಯಲ್ಲಿ ಬಾಬಾ ಸಾಹೇಬರು ಮಾಡಿದ ಭಾಷಣ) ●

ದಲಿತ ; ಜಾತಿಯೋ...ಜನಾಂಗವೋ...

2001ರ ಆಗಸ್ಟ್ 31 ರಿಂದ ಸೆಪ್ಟೆಂಬರ್ 7ರವರೆಗಿನ ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ 'ಜನಾಂಗ ದ್ವೇಷ'ದ ಬಗೆಗೆ ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ಮಹಾಸಮ್ಮೇಳನವನ್ನು ಏರ್ಪಡಿಸಿತ್ತು. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಜನಾಂಗ ದ್ವೇಷದ ಬಗೆಗೆ ಬಡಾಯಿಕೊಚ್ಚುವ ಭಾರತ ಇಲ್ಲಿನ ಅಸ್ಪೃಶ್ಯರ ಬಗ್ಗೆ ಆಶಾಢಭೂತಿ ನಿಲುವು ತಾಳಿರುವುದನ್ನು ಪ್ರಶ್ನಿಸಿದ ಭಾರತದ ದಲಿತರ ದಂಡೇ ಅಲ್ಲಿಗೆ ಹೋಗಿತ್ತು. ನಂತರ ಎಲ್ಲವೂ ತಣ್ಣಗಾಗಿದೆ. "ದಲಿತ; ಜಾತಿಯೋ-ಜನಾಂಗವೋ" ಅನ್ನುವ ಚರ್ಚೆ ನಿಂತೇ ಹೋಗಿದೆ. ಭಾರತ ಸರ್ಕಾರವಂತೂ ದಲಿತರ ಸಮಸ್ಯೆಯನ್ನು ಜನಾಂಗ ಸಮಸ್ಯೆ ಎಂದು ಪರಿಗಣಿಸಲು ಸಿದ್ಧವಿಲ್ಲ. ಈ ಚರ್ಚೆ ನಿರಂತರವಾಗಿ ಮುಂದುವರೆಯಬೇಕೆಂಬುದು 'ಸಂವಾದ'ದ ಹಂಬಲ. ಹಾಗಾಗಿ, ಡರ್ಬಾನ್ ಸಮ್ಮೇಳನದ ಹಿನ್ನೆಲೆಯಲ್ಲಿ ಬರೆಯಲಾದ ಈ ಲೇಖನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. — ಸಂಪಾದಕ

ಮೂಲ : ಶಿವ ವಿಶ್ವನಾಥನ್   ಅನು : ಡಿದಾಚಿ


ಚಿತ್ರ : ಜಾನ್ ದೇವರಾಜ್

ಇತ್ತೀಚಿನವರೆಗೂ, ವರ್ಣಭೇದ ಮತ್ತು ಜನಾಂಗೀಯವಾದ ಅಂತರಾಷ್ಟ್ರೀಯ ಸಮಾವೇಶಗಳಲ್ಲಿ ಭಾರತವು ತಾನು ಸ್ವಾತಂತ್ರ್ಯಕ್ಕೆ ಹೋರಾಡುತ್ತಿದೆಯೆಂದು ತೋರಿಸಿಕೊಳ್ಳುತ್ತಿತ್ತಲ್ಲದೆ, ಜನಾಂಗೀಯವಾದ, ವಸಾಹತುವಾದ, ವರ್ಣಭೇದಗಳನ್ನು ಖಂಡಿಸುವ ಅಧಿಕೃತ ವಕ್ತಾರನಂತೆಯೂ ತೋರಿಸಿಕೊಂಡಿದೆ. ಆದರೀಗ, ಅದರ ಈ 'ದೊಡ್ಡಣ್ಣ'ನ ಪಾತ್ರವು ತನ್ನೊಳಗಿನಿಂದಲೇ ತೀವ್ರವಾಗಿ ಸವಾಲಿಗೊಳಗಾಗಿದೆ. ಸಾರ್ವತ್ರಿಕ ಹಕ್ಕು-ಬಾಧ್ಯತೆಗಳ ವಿಚಾರದಲ್ಲಿ ಭಾರತವು ಅತಿಕ್ರಮಣಕಾರಿಯಾಗಿರುವುದು ಖಂಡನೆಗೆ ಒಳಗಾಗಿದೆ. ಅಲ್ಲದೆ, ಈ ಜಾತಿ ಎನ್ನುವುದೊಂದು 'ಆಂತರಿಕ ಸಂಗತಿ'ಯೆಂದು ಮುಗ್ಧರಾಗಿ ನಂಬಿದ್ದ ನಾವು ಸಹ ಖಂಡನೆಗೊಳಗಾಗಿದ್ದೇವೆ. 'ಜನಾಂಗ'ದಂತೆ ಜಾತಿ ಎಕೆ? ಆ ಹೇಳಿಕೆಗಳಿಗೆ ಆಧಾರ ಮತ್ತು ಪ್ರತಿಸವಾಲುಗಳೇನು? ಈ ವಾದದ ಕ್ರಮಬದ್ಧತೆ ಹೇಗೆ? ಹಾಗೂ ಜಾತಿಭೇದವನ್ನು ಜನಾಂಗಬೇಧವನ್ನಾಗಿ ನೋಡುವ ರಾಜಕೀಯ ಯಶಸ್ವಿಯಾಗಬಹುದೇ?

ಇತ್ತೀಚೆಗೆ, ನಾನು ಓದಿದ ಅತ್ಯಂತ ಕುತೂಹಲಕಾರಿಯಾದ ಪತ್ತೆದಾರಿ ಕತೆಯೆಂದರೆ ಫ್ರೆಡ್ರಿಕ್ ಡರ್ರೆನಾಮಟೆನ 'ನ್ಯಾಯಾಧೀಶ ಮತ್ತು ಆತನ ಗಲ್ಲಿಗೇರಿಸುವವ' (ದಿ ಜಡ್ಜ್ ಅಂಡ್ ಹಿಸ್ ಹ್ಯಾಂಗ್‌ಮನ್ ಡರ್ರೆನ್‌ಮಟ್, 1954). ಒಬ್ಬ ನಿಷ್ಠಾವಂತ ಪೇದೆ ಮತ್ತು ತಾನೆಂದೂ ಸಿಕ್ಕಿಬೀಳಲಾರನೆಂದು ನಂಬಿರುವ ಅಪರಾಧಿಯ ಮುಖಾಮುಖಿಯೇ ಆ ಕ್ಲಾಸಿಕ್ ಕಥೆ. ಆತ್ಮವಿಶ್ವಾಸದ ಆ ಅಪರಾಧಿ ಪೇದೆಯ ಎದುರಿಗೆ ಒಬ್ಬ ವ್ಯಕ್ತಿಯನ್ನು ಕೊಂದು ತನ್ನ ಶಕ್ತಿಯನ್ನು ಮೆರೆದು, ತನ್ನನ್ನು ಅಪರಾಧಿಯನ್ನಾಗಿಸಲು ಸವಾಲೆಸೆಯುತ್ತಾನೆ. ಅಪರಾಧಿಯು ತಪ್ಪಿಸಿಕೊಳ್ಳುತ್ತಾನೆ. ಮತ್ತು ಈ ಜಟಾಪಟಿ ಮುಂದುವರಿಯುತ್ತದೆ. ಒಂದು ದಿನ ಪೇದೆಗೆ ತನ್ನೊಟ್ಟೆಯಲ್ಲಿ ಕ್ಯಾನ್ಸರ್ ಆಗಿದೆಯೆಂದೂ, ತನ್ನ ಕೊನೆ ಸಮೀಪಿಸುತ್ತಿದೆಯಾದ್ದರಿಂದ, ತನ್ನ ಎದುರಾಳಿಯನ್ನು ಉರುಳಿಸಲು ಅಲ್ಪ ಸಮಯ ಮಾತ್ರ ಇರುವುದೆಂದು ಗೊತ್ತಾಗುತ್ತದೆ. ವ್ಯಂಗ್ಯವಾಗಿ ನೋಡುತ್ತಾ ಅಪರಾಧಿಯು ಹೇಳುತ್ತಾನೆ, "ನಾನು ಮಾಡಿರುವ ಅಪರಾಧಕ್ಕಾಗಿ ನನ್ನನ್ನು ನೀನು ಎಂದೂ ಅಪರಾಧಿಯಾಗಿಸಲು ಸಾಧ್ಯವಿಲ್ಲ. "ಅವಕಾಶಕ್ಕಾಗಿ ಕಾಯುತ್ತಿದ್ದ ಪೇದೆಯು, ಅವಕಾಶ ಸಿಕ್ಕಿದಾಕ್ಷಣ ಹೀಗೆಂದು ಪ್ರತ್ಯುತ್ತರ ವೀಯುತ್ತಾನೆ, "ನೀನು ಮಾಡದ ಅಪರಾಧಕ್ಕಾಗಿ ನಿನ್ನನ್ನು ಅಪರಾಧಿ ಯನ್ನಾಗಿಸುತ್ತೇನೆ" ಹಾಗೆಯೇ ಆತ ಮಾಡುತ್ತಾನೆ. ತೃಪ್ತಿಗೊಂಡ ಆತ, ಔತಣಕೂಟವೊಂದನ್ನು ಏರ್ಪಡಿಸುತ್ತಾನೆ. ಅಪರಾಧಿಗೆ ತಕ್ಕ ಶಿಕ್ಷೆಯಾಯಿತು. ಕೊನೆಗೂ ನ್ಯಾಯಾ ನ್ಯಾಯವಾಯ್ತು. ರೌಡಿ ಆಲ್‌ಕ್ಯಾಪ್ನೆ ಅಪಹರಣ. ಕೊಲೆ ಅಥವಾ ತೆರಿಗೆ ಪಾವತಿಸದಕ್ಕಾಗಿ ಬಂಧಿತನಾದನೆಂಬುದು ಮುಖ್ಯವಲ್ಲ. ಆತ ಬಂಧಿಯಾದದ್ದು ಮತ್ತು ಬಂಧಿಯಾದ ಸಂದರ್ಭಗಳಷ್ಟೇ ಮುಖ್ಯ.

ಇತ್ತೀಚಿನ ದಲಿತ ಕಾರ್ಯಕರ್ತರು ಮತ್ತು ಗೋಲ್‌ನಿಗೆ ಸಂಬಂಧಿಸಿದಂತೆ ಜಾತಿಯನ್ನು ಜನಾಂಗವೆಂದು ವ್ಯಾಖ್ಯಾನಿಸುವಾಗ, ಎದ್ದಿರುವ ಜಗಳವು ಡರ್ರೆನ್‌ಮೆಟ್ ನೊಂದಿಗೆ ಒಂದು ಆಂತಕಕಾರಿ ಸಂಬಂಧವಿರುವುದನ್ನು ನೋಡಬಹುದು. ಅನಿರೀಕ್ಷಿತವೆಂಬಂತೆ ಡರ್ಬನ್ ಸಮಾವೇಶಕ್ಕೆ ಮುನ್ನ ದಲಿತರು, ಅಂದರೆ ಧ್ವನಿ ಎತ್ತಿರುವ ಕೆಲವರು ಜಾತಿಯನ್ನು ಜನಾಂಗವೆಂದು ಪರಿಗಣಿಸ ಬೇಕೆಂದು, ಅದರಲ್ಲೂ, ಭಾರತದಲ್ಲಿ 'ಜಾತಿಯು ಜನಾಂಗವಾದಿ"ಯಾಗಿದೆಯೆಂದು ಸ್ಪಷ್ಟೀಕರಿಸಿದ್ದಾರೆ. ಇದು ನಾಟಕೀಯವಾಗಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿದೆ. ಉಸಿರುಕಟ್ಟಿರುವ ಬ್ರಾಹ್ಮಣ್ಯವನ್ನು ನಾವು ಬಿಟ್ಟು ನೋಡಿದರೆ, ಅಲ್ಲಿ ಹುಡುಗಾಟಿಕೆಯ ಅಂಶವೊಂದನ್ನು ಗುರುತಿಸಬಹುದು. ಈ ಹಿಂದೆ 'ವರ್ಣದ್ವೇಷ ಪದ್ಧತಿ ಮತ್ತು ಜನಾಂಗವಾದೀ" ಸಮಾವೇಶಗಳಲೆಲ್ಲ ಭಾರತ ಸರ್ಕಾರಕ್ಕೆ ಒಂದು ವಿಧದ ಖುಷಿ ದೊರೆಯುತ್ತಿತ್ತು. ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ, ಮಂಡೇಲರವರಿಗೆ ಭಾರತ ಬೆಂಬಲಿಸಿದ್ದು, ಪ್ಯಾಲೆಸ್ಟೇನ್ ಹೋರಾಟ ಹಾಗೂ ಗಾಂಧೀಜಿಯಿಂದ ಪ್ರಭಾವಿತವಾದ ಸ್ಟೀವ್‌ಬೈಕೋ ಮತ್ತು ಮಾರ್ಟಿನ್ ಲೂಥರ್‌ಕಿಂಗ್‌ರವರ ಇತರ ಸ್ವಾತಂತ್ರ್ಯ

ಹೋರಾಟಗಳ ಹಸಿರು ನೆನಪುಗಳನ್ನು ಅದು ಮೆಲುಕುಹಾಕಿದಂತಿತ್ತು. ಸ್ವಾತಂತ್ರ್ಯವೆನ್ನುವುದು ನಮ್ಮ ವಂಶಾವಳಿಯಲ್ಲಿದ್ದು, ಈ ಎಲ್ಲ ಸಮಾವೇಶಗಳು ಮತ್ತು ಪ್ರದರ್ಶನಗಳಲ್ಲಿ ನಾವು ಸ್ವಾತಂತ್ರ್ಯದ ಹೋರಾಟಗಾರರಂತೆ ಕಾಣಲಾಗಿತ್ತು. ಯಾವುದೇ ಅಂತರಾಷ್ಟ್ರೀಯ ಸಭೆಗಳಲ್ಲಿ ಜನಾಂಗವಾದ, ವಸಾಹತುಶಾಹಿ, ವರ್ಣದ್ವೇಷವನ್ನು ಖಂಡಿಸುವ ಅಧಿಕೃತ ವಕ್ತಾರರಾಗಿದ್ದೆವು. ಆದರೀಗ ನಮ್ಮ ಆ ಮಹತ್ವದ ಪಾತ್ರಕ್ಕೆ ಬೆದರಿಕೆಯುಂಟಾಗಿದೆ. ಅದೂ ಸಹ ಒಳಗಿನಿಂದಲೇ. ಸಾರ್ವತ್ರಿಕ ಹಕ್ಕು-ಬಾಧ್ಯತೆಗಳ ವಿಚಾರದಲ್ಲಿ ಭಾರತವು ಅತಿಕ್ರಮಣಕಾರಿಯಾಗಿ, ಖಂಡನೆಗೆ ಒಳಗಾಗಿದೆ ಹಾಗೂ ಇಲ್ಲಿಯ ತನಕ ನಾವು ಮುಗ್ಧರಾಗಿ, ಜಾತಿಯೆನ್ನುವುದೊಂದು 'ಆಂತರಿಕ ಸಂಗತಿ'ಯೆಂದು ನಂಬಿದ್ದು ಈಗ ಖಂಡನಾರ್ಹವೆನಿಸಿದೆ.

ಅನಿರೀಕ್ಷಿತವೆಂಬಂತೆ, ದಲಿತ ಕಾರ್ಯಕರ್ತರು ಜಾತಿಯನ್ನು ಕಾನೂನಿನ ಚೌಕಟ್ಟಿನಲ್ಲಿ 'ಜನಾಂಗವಾದಿ'ಯ ಒಂದು ರೂಪವೆಂದು ನೋಡಬಯಸಿದ್ದಾರೆ. ಅದನ್ನು ಪರಿಕಲ್ಪರನಾತ್ಮಕವಾಗಿಯಾಗಲೀ, ವಿಶ್ಲೇಷಣಾತ್ಮಕ ವಾಗಿಯಾಗಲೀ ಅಥವಾ ವಾಸ್ತವದಲ್ಲಿ ಅದು ಜನಾಂಗವಾದಿಯೇ ಎಂಬುದು ಅವರಿಗೆ ಮುಖ್ಯವಲ್ಲ. ತಮಗೆ ಜಾತಿ ಎಂದರೇನೆಂದು ತಿಳಿದಿದ್ದು, ಜಾತಿ ಮತ್ತು ಜನಾಂಗವೆನ್ನುವುದು ಭಿನ್ನವಾದರೂ, ಅದನ್ನು ಇನ್ನೊಂದನ್ನಾಗಿ ಕಾಣುವುದೇ ಭಿನ್ನತೆಯೆನಿಸುತ್ತದೆ ಯೆಂಬುದು ದಲಿತರ ವಾದ. ಇದು ದಂಗು ಬಡಿಸುವಂತಿದ್ದರೂ ಅರ್ಥೈಸಲೇಬೇಕಾಗಿದೆ. ಇದನ್ನು ಅರ್ಥವಿಜ್ಞಾನ (ಹರ್ಮನಿಟಿಕ್ಸ್)ದ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿವರಿಸಬೇಕೇ .ವಿನಃ ಸಮಾಜ ಶಾಸ್ತ್ರಜ್ಞರ ಪ್ರಾಧ್ಯಪಕರನ್ನಾಗಲೀ ಅಥವಾ ಕಾನೂನುತಜ್ಞರನ್ನಾಗಲೀ ಸಾಲಾಗಿ ನಿಲ್ಲಿಸುವುದರಿಂದ ಉಪಯೋಗವೇನಿಲ್ಲ. ಕೆಲವು ಸಮಾಜಶಾಸ್ತ್ರಜ್ಞರೇನಾದರೂ 'ಅದೊಂದು' ಕೆಟ್ಟ ಸಮಾಜಶಾಸ್ತ್ರೀಯ ರೀತಿ'ಯೆಂದರೆ ಮ್ಯಾಕ್‌ವೆಸೆಟ್ಟಲ್ ಮುಂತಾದವರು ತಲೆಕೆಡಿಸಿಕೊಳ್ಳುವುದಿಲ್ಲ. 'ಅದು ಕೆಟ್ಟ ಸಮಾಜವಾಗಿದ್ದು ನಿಮ್ಮ ಸಮಾಜಶಾಸ್ತ್ರ ಅದನ್ನು ತಿದ್ದಲು ಕಿರುಬೆರಳ ಪ್ರಯತ್ನವನ್ನೂ ಸಹ ಮಾಡಿಲ್ಲವೆಂದು' ಅವರು ಪ್ರತ್ಯುತ್ತರವೀಯುತ್ತಾರೆ. ಆದ್ದರಿಂದ ಇದರೊಳಗೆ ಪ್ರವೇಶಿಸಲು ತಕ್ಕಮಟ್ಟಿನ ಚಮತ್ಕಾರ ಬೇಕಾಗುತ್ತದೆ.

ಇಲ್ಲಿ ನಾವು ಕೇಳಿಕೊಳ್ಳಬೇಕಾಗಿರುವ ಪ್ರಶ್ನೆ ಇಲ್ಲಿನ ವಾದ ಏನು? ಆ ವಾದದ ವಿಧಾನ ಹೇಗಿದೆ? ಈ ಚಮತ್ಕಾರಿಗಳ ರಾಜಕಾರಣ ಯಶಸ್ವಿಯಾದೀತೆ? ಈ ಕ್ಷಣದಲ್ಲಿ ನಾವು ಲುಯಿಸ್‌ಡುಮೊಂಟ್ ಅಥವಾ ಎಂ.ಎನ್. ಶ್ರೀನಿವಾಸರಿಂದ ಆರಂಭಿಸಲಾಗದು. ಮಂಡಲ್ ಅಥವಾ ರಾಣೆಯವರ ವರದಿಗಳೇನೂ ಇಲ್ಲ. ಪ್ರಮುಖ ಸಮಿತಿಗಳೇನು ಸಭೆ ನಡೆಸಿಲ್ಲ. ಬದಲು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯವರ ವೆಬ್‌ಸೈಟ್‌ಗಳಿಂದ ಇಳಿಸಿಕೊಂಡ ಮುದ್ರಿತ ಕರಪತ್ರಗಳಿಂದಷ್ಟೇ ಇದನ್ನು ಆರಂಭಿಸಬೇಕಿದೆ. ಅಲ್ಲೇನು ವಿಶ್ವವಿದ್ಯಾನಿಲಯದ ವೇದಿಕೆ ಇಲ್ಲ. ಆ ಕೆಲಸವನ್ನು 'ದಿ ಹಿಂದೂ' ದಿನಪತ್ರಿಕೆಯು (ಸಾಂದರ್ಭಿಕವಾದುದು) ತಮ್ಮ ವಿಸಿಡಿಂಗ್ ಪ್ರಾಧ್ಯಾಪಕರಾದ ಗೋಪಾಲ್‌ಗುರು, ಗೆಲ್‌ಓಮಾವಿಡ್ತಾ, ಸ್ವಾಮಿ ಅಗ್ನಿವೇಶ ಹಾಗೂ ಇತರರ ಮೂಲಕ ಮಾಡಿದೆ.

> **ಡರ್ಬನ್ ಸಮಾವೇಶಕ್ಕೆ ಮುನ್ನ ದಲಿತರು, ಅಂದರೆ ಧ್ವನಿ ಎತ್ತಿರುವ ಕೆಲವರು ಜಾತಿಯನ್ನು ಜನಾಂಗವೆಂದು ಪರಿಗಣಿಸ ಬೇಕೆಂದು, ಅದರಲ್ಲೂ, ಭಾರತದಲ್ಲಿ 'ಜಾತಿಯು ಜನಾಂಗವಾದಿ'ಯಾಗಿದೆಯೆಂದು ಸ್ಪಷ್ಟೀಕರಿಸಿದ್ದಾರೆ. ಇದು ನಾಟಕೀಯವಾಗಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿದೆ. ಉಸಿರುಕಟ್ಟಿರುವ ಬ್ರಾಹ್ಮಣ್ಯವನ್ನು ನಾವು ಬಿಟ್ಟು ನೋಡಿದರೆ, ಅಲ್ಲಿ ಹುಡುಗಾಟಿಕೆಯ ಅಂಶವೊಂದನ್ನು ಗುರುತಿಸಬಹುದು.**

ಈ ಸಂದರ್ಭದಲ್ಲಿ ಹಿನ್ನಲೆಯಾಗಿ, ಬಂದ ಎರಡು ದಾಖಲೆಗಳು ಮಹತ್ವವೆನಿಸುತ್ತವೆ. ಮೊದಲನೆಯದ್ದು-ದಲಿತ ಮಾನವ ಹಕ್ಕುಗಳ ಕುರಿತ 'ಅಡ್ವೊಕೆಸಿ ಅಪ್‌ಡೇಟ್ (ಪ್ರಕಾಸಂ, ಭೋಪಾಟ್ಕರ್ ಮತ್ತು ಸ್ಯಾಮುವೆಲ್ 2001) ಹಾಗೂ ಎರಡನೆಯದ್ದು-ಮಾರ್ಟಿನ್ ಮಕ್ವಾನೆ ತುಣುಕು 'ಜಾತಿ ಜನಾಂಗವಾಗಿರಲಿಕ್ಕಿಲ್ಲ'. ಸಮಾಜಶಾಸ್ತ್ರ ವಿಭಾಗಗಳನ್ನು ತಲೆಕಳೆಗಾಗಿಸಲು ಆ ಶೀರ್ಷಿಕೆಯೇ ಸಾಕು! ಇದಕ್ಕೇನಾದ್ರೂ ಪ್ರತ್ಯುತ್ತರವಿದೆಯೇ? (ಕೋಯಿ ಜವಾಬಾಹೈ?) ಅಡ್ವೊಕೆಸಿಯ 15ನೇ ಸಂಚಿಕೆಯಲ್ಲಿ ಸೂಕ್ಷ್ಮ ಓದನ್ನು ಬಯಸುತ್ತದೆ. ಆರಂಭದಲ್ಲೇ ಮೂರು ಅಂಶಗಳನ್ನು ಒತ್ತಿ ಹೇಳುತ್ತದೆ. 1) ಜಾತಿ ವಿರುದ್ಧದ ಚಳುವಳಿಗಳ ಸಂಕ್ಷಿಪ್ತ" ಚರಿತ್ರೆ- ಸಮಾಜ ಸುಧಾರಣಾ ಚಳುವಳಿಗಳು, ಗಾಂಧಿಯನ್ ಚಳುವಳಿಗಳು ಹಾಗೂ ಮಾರ್ಕ್ಸಿಸ್ಟರೆಲ್ಲರು ಹೋರಾಡಿದರಾದರೂ, ಸೋತರು. ಚಳುವಳಿಗಳ ಪ್ರಾಮುಖ್ಯತೆಯನ್ನು ಅಲ್ಲಗಳೆಯುತ್ತಿಲ್ಲ. ಎನ್.ಜಿ.ಓ.ಗಳು ಕರ್ತೃ ಮತ್ತು ಅನುವಾದಕರಾಗಿ ಅದಕ್ಕೆ ಪರ್ಯಾಯವನ್ನಿತ್ತಿವೆ.

ತಳಸ್ತರ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಎಲ್ಲ ಹಂತಗಳಲ್ಲೂ, ಈ ಎನ್‌ಜಿಓಗಳು, ಚಳುವಳಿಗಳ ಪರಿಣಾಮ ಮತ್ತು ತಂತ್ರಗಳನ್ನು ಕುರಿತು ಚಿಂತಿಸಿವೆ. ಈ ಸ್ವ-ಚಿಂತನೆಯೊಳಗೆ ಸರ್ಕಾರವು (ಸ್ಟೇಟ್) ಸುಧಾರಣೆಯ ನೇತಾರನಾಗಿರುವುದಲ್ಲದೆ, ದಲಿತ ಸ್ವಾಭಿಮಾನದ ವಿರೋಧಕನಾಗಿಯೂ ಗೋಚರಿಸುತ್ತದೆ. ಹಾಗಾದರೆ ಇಲ್ಲಿರುವ ಪ್ರಶ್ನೆಯೆಂದರೆ-ಈ ಸರ್ಕಾರದ ವಿರುದ್ಧ ಹೋರಾಡುವವರು ಯಾರು? ಮ್ಯಾಹಾತ್ಮಕವಾಗಿ ಇದಕ್ಕೆ ಎರಡು ಉತ್ತರಗಳಿವೆ: ವಿಚಾರಧಾರೆಯ ಚೌಕಟ್ಟನ್ನೆ ಬದಲಾಯಿಸುವುದು. ಇದು ಸುಧಾರಣೆಯ ಪ್ರಶ್ನೆಯಾಗಿರದೆ, ಹಕ್ಕುಗಳ ಪ್ರಶ್ನೆಯಾಗಿದೆ. ಇಲ್ಲಿನ ಕೇಂದ್ರ ಸ್ಥಳೀಯ ಅಥವಾ ರಾಷ್ಟ್ರೀಯವಾಗಿರದೆ ಅಂತರಾಷ್ಟ್ರೀಯ ವಾಗಿರುವುದು. ಮಾನವ ಹಕ್ಕುಗಳ ಚಳುವಳಿಯು, ತನ್ನ ಸಾರ್ವತ್ರಿಕತೆಯ ಕುರಿತು ಪ್ರಶ್ನೆಗಳಿದ್ದಾಗ್ಯೂ, ಅಂತರಾಷ್ಟ್ರೀಯ ವ್ಯಾಪ್ತಿ ಮತ್ತು ಪ್ರಭಾವವನ್ನು ಒಳಗೊಂಡಿದೆ. ಆದ್ದರಿಂದ ದಲಿತ ಚಳುವಳಿಯು ಅಂತರಾಷ್ಟ್ರೀಯ ಮಾನವ ಹಕ್ಕುಗಳ ಚಳುವಳಿಯಾಗಬೇಕು. ಇಲ್ಲಿ ಕರ್ತೃತ್ವ ಬದಲಾಗುತ್ತದೆ, ವಿಚಾರಧಾರೆ ಪಲ್ಲಟಗೊಳ್ಳುತ್ತದೆ, ಹಂತಗಳು ಮಾರ್ಪಾಟಾಗುತ್ತವೆ ಹಾಗೂ ಈ ಬದಲಾವಣೆಗಳೊಂದಿಗೆ ವಿಮೋಚನೆಯತ್ತ ಸಾಗಲು ಪರಿಣಾಮಕಾರಿ ರಾಜಕಾರಣದ ಸಾಧ್ಯತೆಯೂ ಇರುತ್ತದೆ. ಅಥವಾ ಇದೊಂದು ಹುಸಿ ಬಯಕೆಯೂ ಇರಬಹುದೇ? 'ಅಡ್ವೊಕೆಸಿ ಅಪ್‌ಡೇಟ್' ಈ ಸಶಕ್ತೀಕರಿಸುವ ನಿಟ್ಟಿನಲ್ಲಿ ಒಂದು ಸಣ್ಣ ಗುಣಾತ್ಮಕ ಪ್ರಯತ್ನವೆಂದಷ್ಟೇ ಭಾವಿಸುತ್ತದೆ. ಇಲ್ಲಿ ಉಪಾಯ ಸರಳವಾದುದು. ಇಲ್ಲಿನ ವಾದವೆಂದರೆ "ಜಾತಿ ಮತ್ತು ಜಾತಿ ತಾರತಮ್ಯವು, ಜನಾಂಗ ಮತ್ತು ಜನಾಂಗ ತಾರತಮ್ಯದೊಡನೆ ಸಾಮ್ಯತೆ ಹೊಂದಿದೆ. ಆದ್ದರಿಂದ ಜನಾಂಗವಾದ, ಜನಾಂಗ ತಾರತಮ್ಯ, ಪರಕೀಯರ ದ್ವೇಷ ಮತ್ತು ಸಂಬಂಧಿಸಿದ ಅಸಹನೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ತೊಡೆದುಹಾಕಲು ನಿರ್ಧರಿಸಿದಂತೆ ಜಾತಿ ಹಾಗೂ ಜಾತಿ ತಾರತಮ್ಯವೂ ಸಹ ಅಂತರಾಷ್ಟ್ರೀಯ ಸಮಾವೇಶದ ಚೌಕಟ್ಟಿನೊಳಗೆ ಬರತಕ್ಕದ್ದು" ಇಲ್ಲಿ ರಾಜಕಾರಣದ ದಾಳಗಳನ್ನು ಉರುಳಿಸಿದಂತೆ ಕಾಣುತ್ತದೆ. ಅಂದರೆ ಹೋಲಿಕೆಯ ತರ್ಕವನ್ನು ಐಡೆಂಟಿಟಿಯ ತರ್ಕವನ್ನಾಗಿ ಪರಿಗಣಿಸಬಹುದೇ? ಇದು ಭವಿಷ್ಯವಾಣಿಯ ಈಡೇರಿಕೆಯೇ? ಅಥವಾ ಕಾಟಾಚಾರದ ಯೋಚನೆಯೇ? ಇದು ಕೆಟ್ಟ ಸಮಾಜಶಾಸ್ತ್ರ ಹಾಗೂ ಕೆಟ್ಟ ರಾಜಕಾರಣವೇ ಅಥವಾ ಇನ್ನೇನಾದ್ರೂ ಇರಬಹುದೇ? ಜ್ಞಾನ ಪ್ರಕಾಸಂ ಮುಂತಾದವರು ತಮ್ಮ ವಾದವನ್ನು ಚಾರಿತ್ರಿಕ ದೃಷ್ಟಿಕೋನದ ಮೂಲಕ ಮಂಡಿಸುತ್ತಾರೆ.

ಅವರ ಪ್ರಕಾರ, ದಲಿತರ ಚರಿತ್ರೆಯೆಂದರೆ ಅದೊಂದು ನೋವಿನ ಪರಂಪರೆಯಾಗಿದ್ದು, ಆ ಪದದಲ್ಲೇ ಅದು ಅಭಿವ್ಯಕ್ತಗೊಳ್ಳುತ್ತದೆ. ದಲಿತ ಪದವನ್ನು ರೂಪಿಸಿದವರು ಜ್ಯೋತಿರಾಮ್ ಫುಲೆಯವರು. "ದಲಿತ ಎನ್ನುವ ಪದ ತುಳಿತಕ್ಕೊಳಪಟ್ಟವರೆಂದರ್ಥ" ಅದೊಂದು ಸಂಸ್ಕೃತ ಮೂಲದ ಮರಾಠಿ ಪದವಾಗಿದೆ. ಆ ಪದದಲ್ಲೇ ಅದರ ಮೀಮಾಂಸೆಯು ಅಡಗಿದೆ. 'ದಲ್' ಅಂದರೆ ಮುರಿಯುವುದು, ಬಿರುಕುಬಿಟ್ಟದ್ದು, ತೆರೆದದ್ದು, ಹರಡಿರುವುದು. ಸೀಳುವುದು, ದಮನಿಸುವುದು, ನಾಶಗೊಳಿಸುವುದು. ಹೀಗೆ ಅದರ ವಾಙ್ಮಯವೇ ವಿಸ್ತೃತ ವ್ಯಾಪ್ತಿಯನ್ನು ಪಡೆಯುತ್ತದೆ.

ಈ ಪದದ ಪಯಣವೇ ಕುತೂಹಲಕಾರಿಯಾದುದು. ಮೊದಲಿಗೆ ಫುಲೆಯವರು ಅದನ್ನು ಜಾತಿಹೀನರು ಮತ್ತು ಅಸ್ಪೃಶ್ಯರನ್ನು ಸೂಚಿಸಲು ಬಳಸಿದ್ದರು. ಅದೇ ಅಂಬೇಡ್ಕರ್‌ರವರಲ್ಲೂ ಪ್ರತಿಧ್ವನಿಸುತ್ತದೆ. ಕೆಲವು ಸಮಯ ಅದು ಮಹಾರಾಷ್ಟ್ರದ ಮಹರ್‌ಸಮುದಾಯಕ್ಕೆ ಮಿತಿಗೊಂಡಿತ್ತು. 1970ರ ದಶಕದಲ್ಲಿ ದಲಿತ ಪ್ಯಾಂಥರ್ಸ್ ಅದನ್ನೊಂದು ಜನರನ್ನೊಳಗೊಳ್ಳುವ ಪರಿಕಲ್ಪನೆಯಾಗಿ ಬಡರೈತರು, ಬುಡಕಟ್ಟಿನವರು ಮತ್ತು ಭೂರಹಿತರನ್ನು ಸೂಚಿಸಲು ಬಳಸಿದರು. ವರ್ತಮಾನದಲ್ಲಿ ದಲಿತ ಪಥವು ಎಲ್ಲ ಕಡೆಗಣಿತ ಮತ್ತು ಶೋಷಿತ ಜನರನ್ನು ಸೂಚಿಸುತ್ತದೆ. ಸರ್ಕಾರವು ಅದನ್ನು ಪರಿಶಿಷ್ಟ ಜಾತಿಗಳಿಗೆ ಅನ್ವಯಿಸಿ, ತನ್ನ ತೆಕ್ಕೆಯೊಳಗೆ ಪಳಗಿಸಿಕೊಂಡಿತು. ಈಗ ಅದು ಹಕ್ಕಿನ ಪರಿಕಲ್ಪನೆಯಾಗಿ ಭಾರತದಿಂದಾಚೆ ಹಾಗೂ ಕಾನೂನಿನ ನೌಕರಶಾಹಿಯ ವರ್ಗೀಕರಣದಾಚೆ ಮತ್ತೊಂದು ಪಯಣವನ್ನು ಆರಂಭಿಸುತ್ತಿದೆ.

ದಲಿತ ಬದುಕಿನ ನೋವಿನ ಇತಿಹಾಸದಲ್ಲಿ ಪದಗಳು ಬಹು ಮುಖ್ಯ. ಹೆಸರುಗಳು ಮಹತ್ತ್ವವುಳ್ಳವು. ಅನೇಕ ವರ್ಗೀಣಕರಣಗಳೆಲ್ಲವು ಜೀವ ವಿರೋಧಿಯಾಗಿವೆ. ದಲಿತರ ಶೋಷಣೆಯು ಒಂದು ಹೆಸರಿಸಬಹುದಾದ ಕ್ರಿಯೆ. ಈ ಕೆಳಗಿನ ಹೆಸರುಗಳ ಭ್ರಷ್ಟತೆಯನ್ನು ಗಮನಿಸಿ- ಅವರ್ಣರು, ಚಾಂಡಾಲರು, ಅಚ್ಯುತರು, ಪರೆಯರು, ಅಸ್ಪೃಶ್ಯರು, ಸಾಮೀಪ್ಯಹೀನರು, ಜಾತಿಹೀನರು, ಜಾತಿಭ್ರಷ್ಟರು, ಜಾತಿಬಾಹಿರರು, ಹೀಗೆ ಹೆಸರಿಸುವುದೇ ಅವಮಾನೀಯವಾದುದು. ಪ್ರಕಾಸಂ ಮುಂತಾದವರ ಪ್ರಕಾರ, "ಅವರ ಐಡೆಂಟಿಟಿಯು ಮೇಲ್ಜಾತಿಯವರಿಂದ ವ್ಯಾಖ್ಯಾನಿತರಾದುದು. ಮತ್ತು ಅದನ್ನು ದಲಿತರು ಮೈಗೂಡಿಸಿಕೊಂಡರು" ಹೀಗೆ ಮೊದಲ ಹೆಜ್ಜೆ ಸ್ಪಷ್ಟವಿದೆ. ಈ ಆಟವೇ ನಾಮಕರಣದ್ದು ಮತ್ತು ವರ್ಗೀಕರಣದೆಂದಾದರೆ, ದಲಿತ ಕುಶಲಮತಿಗಲೂ ಸಹ, ಈ ಆಟದ ನಿಯಮಗಳನ್ನು ಬದಲಿಸಬಹುದು ಮತ್ತು ಬದಲಿಸಲೇಬೇಕು.

ಅಡ್ವೊಕೆಸಿ ಅಪ್‌ಡೇಟ್‌ನ ಉಳಿದ ಪ್ಯಾರಾಗಳು ಪೂನಾ ಅಥವಾ ನೆಹರೂ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗಗಳ ಹೊರಗೆ ನೇರವಾಗಿ ನಡೆಯುವಂಥವು. ಒಬ್ಬ ವಿದ್ವಾಂಸ ಗುರುತಿಸುವಂತೆ ಅದು ಸಮಾಜಶಾಸ್ತ್ರೀಯ ಸಂಚಿಕೆ ಅಥವಾ ಇಪಿಡಬ್ಲ್ಯುವಿಗೆ ಸಾಕಾಗಬಹುದು. ಆದರೆ ಅದು ಭಾರತೀಯ ಸಮಾಜಶಾಸ್ತ್ರಕ್ಕೆ ಅಂಥ ಕೊಡುಗೆಯೇನೂ ಅಲ್ಲ. ಡೂಮೇ ಅಥವಾ ಶ್ರೀನಿವಾಸರ ಪ್ರೇತಗಳು ಈ ಪುಟಗಳನ್ನು ಕಾಡುತ್ತಿಲ್ಲ. ಸಂಸ್ಕೃತೀಕರಣವು ಕೇವಲ ಒಂದು ಅಡಿಟಿಪ್ಪಣಿಯಾಗುವುದಿಲ್ಲ. ಆದರೆ ಜಾತಿ ಪದ್ಧತಿಯ ರಾಚನಿಕ ನಿಯಮಗಳು ಶ್ರೇಣೀಕರಣ, ಪ್ರತ್ಯೇಕತೆ ಮತ್ತು ಅವಲಂಬನೆಗೆ-ಇವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಎರಡನೇ ಹೆಜ್ಜೆಯೆಂದರೆ ಕುಲಕಸುಬು, ಮೈಲಿಗೆ ಮತ್ತು ಶಕ್ತಿಹೀನತೆಗಳ ಮಧ್ಯೆಯಿರುವ ಅಂತಃ ಸಂಬಂಧವನ್ನು ಗುರುತಿಸುವ ಚಾರಿತ್ರಿಕ ಸಮಾಜಶಾಸ್ತ್ರ.

ಮೂರನೆಯದು, ಜನಾಂಗವಾದ ಮತ್ತು ಜಾತಿಗಳ ಮಧ್ಯೆ ಇರುವ ರಾಚನಿಕ ಸಂಬಂಧವನ್ನು ಹುಡುಕುವಂಥದ್ದು. ಅದರ ಉದ್ದೇಶ ಐಡೆಂಟಿಟಿಯನ್ನು ಗುರುತಿಸುವುದು ಅಲ್ಲ. ಬದಲು ಅವುಗಳೊಳಗಿನ ಅಂತಃ ಸಂಬಂಧವನ್ನು ಪರಿಶೀಲಿಸುವುದು: ಅಂದರೆ ಅವುಗಳ ಮಧ್ಯೆ ಇರುವ ಹೋಲಿಕೆ ಮತ್ತು ಸಾಮ್ಯತೆಗಳನ್ನು ಹುಡುಕುವುದು. ಅಸ್ಪೃಶ್ಯತೆಯೆನ್ನುವುದು 'ಬಚ್ಚಿಟ್ಟ ವರ್ಣದ್ವೇಷವೇ' ಆಗಿದೆ. ಅಂದರೆ ಅವುಗಳ ಹೋಲಿಕೆಯಲ್ಲಿ ಕಂಡು ಬರುವ ಮುಖ್ಯ ಸಂಗತಿಯೆಂದರೆ ವಂಚನೆ ಮತ್ತು ದೂರವನ್ನು ಕಾಯ್ದುಕೊಳ್ಳುವಿಕೆ, ಪ್ರತ್ಯೇಕಿಸುವಿಕೆ ಇವೆರಡರಲ್ಲಿನ ಪ್ರಧಾನ ಲಕ್ಷಣ. ದೂರವನ್ನು ಕಾಯ್ದುಕೊಳ್ಳುವಿಕೆಯಲ್ಲಿನ ಮಹತ್ವದ ಸಂಗತಿಯೆಂದರೆ ಆ ಪರಿಭಾಷೆಯೊಳಗಿನ ಕಲ್ಪನೆಗಳಾದ ಮೈಲಿಗೆ, ಕೊಳಕುತನ, "ಮುಟ್ಟು'. ಯಾವುದೇ ರೀತಿಯ ಸಾಮೀಪ್ಯ ತಿರಸ್ಕಾರಕ್ಕೊಳಗಾಗುವಂಥದ್ದು ಅಥವಾ ಮೈಲಿಗೆಯಾಗುವಂಥದ್ದು. ಈ ಪ್ರತ್ಯೇಕತೆಯನ್ನು ವಿರೋಧಿಸಿದಲ್ಲಿ ಹಿಂಸೆ ಕಟ್ಟಿಟ್ಟ ಬುತ್ತಿ. ಇದರ ಮೊದಲ ಆಚರಣೆಯು ಮೈಲಿಗೆ ಅಥವಾ ಕೊಳಕಿಗೆ ಸಂಬಂಧಿಸಿದ್ದು. ದಲಿತರೆಂದರೆ ಮೈಲಿಗೆಯ ಸಂಗತಿಯಾಗಿದ್ದು ಮದುವೆ, ಊಟ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಇರುವಂಥ ನಿರ್ಬಂಧಗಳು. ಕೊಳಕು ಮತ್ತು ಅಸಂಬದ್ಧತೆಯೊಡನೆ ಗುರುತಿಸಲಾಗುವ ಅವರು ತುಚ್ಛ ಮತ್ತು ಹೇಯ ಕೆಲಸಗಳಾದ ಚರ್ಮ ಹದಮಾಡುವಿಕೆ ಮತ್ತು ಕಸ ತೆಗೆಯುವಿಕೆಗೆ ಮಾತ್ರ ಅರ್ಹರು. ಅವರ ಸ್ಪೃಶ್ಯವೇ ಮಲಿನಗೊಳಿಸುವಂಥ'ದ್ದು, ಅವರ ಕಸುಬು ಸಹ ಮೈಲಿಗೆಯಾದುದು. ಸಾರ್ವಜನಿಕ ಸ್ಥಳಗಳು, ರಸ್ತೆಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ಸ್ನಾನ ಗೃಹಗಳು...ಮುಂತಾದವುಗಳಿಗೆ ದಲಿತರಿಗೆ ಪ್ರವೇಶವಿಲ್ಲ. ಈ ಕೊಳಕೇ ದಲಿತ ಮಹಿಳೆಯರ ಲೈಂಗಿಕ ಶೋಷಣೆಯನ್ನು ಸಮರ್ಥಿಸುತ್ತದೆ. ಇದರ ಅಂತಿಮ ರೂಪವೆಂದರೆ ದಲಿತರ

> **ಯಾವುದೇ ಅಂತರ್‍ರಾಷ್ಟ್ರೀಯ ಸಭೆಗಳಲ್ಲಿ ಜನಾಂಗವಾದ, ವಸಾಹತುಶಾಹಿ, ವರ್ಣದ್ವೇಷವನ್ನು ಖಂಡಿಸುವ ಅಧಿಕೃತ ವಕ್ತಾರರಾಗಿದ್ದೆವು. ಆದರೀಗ ನಮ್ಮ ಆ ಮಹತ್ವದ ಪಾತ್ರಕ್ಕೆ ಬೆದರಿಕೆಯುಂಟಾಗಿದೆ. ಅದೂ ಸಹ ಒಳಗಿನಿಂದಲೇ. ಸಾರ್ವತ್ರಿಕ ಹಕ್ಕು-ಬಾಧ್ಯತೆಗಳ ವಿಚಾರದಲ್ಲಿ ಭಾರತವು ಅತಿಕ್ರಮಣಕಾರಿಯಾಗಿ, ಖಂಡನೆಗೆ ಒಳಗಾಗಿದೆ ಹಾಗೂ ಇಲ್ಲಿಯ ತನಕ ನಾವು ಮುಗ್ಧರಾಗಿ, ಜಾತಿಯೆನ್ನುವುದೊಂದು 'ಆಂತರಿಕ ಸಂಗತಿ'ಯೆಂದು ನಂಬಿದ್ದು ಈಗ ಖಂಡನಾರ್ಹವೆನಿಸಿದೆ.**

ವಿರುದ್ಧ ಕಾಡುವ ಹಿಂಸೆ, ಅದು ದೌರ್ಜನ್ಯದಿಂದ ಹಿಡಿದು ಭೂಮಿಯಿಂದ ಬಲವಂತವಾಗಿ ತೆರವುಗೊಳಿಸುವುದು. ಲೂಟಿ ಮತ್ತು ಅತ್ಯಾಚಾರದವರೆಗೂ ವ್ಯಾಪಿಸಿರುತ್ತದೆ. ಈ ಚಿತ್ರಣ ದಕ್ಷಿಣ ಆಫ್ರಿಕಾದೊಂದಿಗೆ ಮೆಲುಕು ಹಾಕುವಂಥದ್ದು. (ಪ್ರತಿಧ್ವನಿಸುವಂತದ್ದು). ಆದರೂ, ವರ್ಣದ್ವೇಷವು ರಾಜ್ಯ-ಪ್ರಭುತ್ವದ ಅಧಿಕೃತ ಐಡಿಯಾಲಜಿಯಾದರೆ, ಭಾರತದಲ್ಲಿ ರಾಜ್ಯ-ಪ್ರಭುತ್ವವು ದಲಿತರ ಕಲ್ಯಾಣಕ್ಕೆ ಸಂವಿಧಾನವಾತ್ಮಕವಾಗಿ ಜವಾಬ್ದಾರಿಯಾದುದು. ಈ ದ್ವಂದ್ವವು ನಾಗರೀಕ ಸಮಾಜದ ಮಟ್ಟದಲ್ಲಿ ಎದ್ದು ಕಾಣುವಂಥದ್ದು. ಅಲ್ಲಿ ಮೈಲಿಗೆಯ ವಿಧಿ-ಆಚರಣೆಗಳು ಧಾರ್ಮಿಕ ಅಥವಾ ಶುಚಿತ್ವದ ನೆಲೆಗಳಲ್ಲಿ ಸಮರ್ಥನೆಗೊಳಗಾಗುತ್ತಿರುತ್ತವೆ.

'ಬಚ್ಚಿಟ್ಟ ವರ್ಣದ್ವೇಷ ಪದ್ಧತಿ' ಪರಿಕಲ್ಪನೆಯು ಭಾರತೀಯ ರಾಜ್ಯಾಂಗವನ್ನು ತೇಲಿಸಿಬಿಡಲು ರೂಪಿಕೆಯಾದುದು. ಅವರ ಪ್ರಕಾರ, ದಲಿತರ ಕಲ್ಯಾಣವೆನ್ನುವುದು ಕಪಟ ನಾಟಕ ರಾಜ್ಯಾಂಗದ ಎದುರು ಪ್ರತಿಭಟಿಸುವುದು ನಿಷ್ಪ್ರಯೋಜಕವೆಂಬುದನ್ನು ದಲಿತರು ಕಂಡುಕೊಂಡಿದ್ದಾರೆ. ಇಲ್ಲಿ ರಾಜ್ಯಾಂಗವೆನ್ನುವುದು ರಾಜಕೀಯ ಇಚ್ಛೆ ಇಲ್ಲದ್ದು. ಅದರ ಆಡಳಿತ ವ್ಯವಸ್ಥೆಯು ಮೇಲ್ಜಾತಿಗಳಿಂದ ಕೂಡಿದ್ದು, ಜಾತಿಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವಂಥದ್ದು. "ಇದರ ಪರಿಣಾಮವೆಂದರೆ ದೌರ್ಜನ್ಯದ ವಿರುದ್ಧ ದಾವೆಯನ್ನು ನೋಂದಾಯಿಸಿಕೊಳ್ಳುವುದಿಲ್ಲ. ಅಥವಾ ನೋಂದಾಯಿಸಿ ಕೊಂಡರೂ ಕ್ರಮ ತೆಗೆದುಕೊಳ್ಳುವುದಿಲ್ಲ.

ಇಂಥ ಕುಟಿಲತೆಯಿಂದ ಕೂಡಿದ ರಾಜ್ಯಾಂಗವನ್ನು ಪ್ರತಿಭಟಿಸುವುದು ಹೇಗೆ? ಅಪರಾಧೀ ರಾಜಕಾರಣ ಸತ್ವಹೀನವಾದುದು. ಗಾಂಧಿಯು 'ಹರಿಜನ' ಐಡಿಯಾದ ಮೂಲಕ ಅದನ್ನು ಪ್ರಯತ್ನಿಸಿದ್ದರು. ಈ ಪ್ರಯತ್ನದಲ್ಲಿ ದಲಿತ ಸಮಸ್ಯೆಯನ್ನು ಹರಿಜನ ಎನ್ನುವುದರ ಮೂಲಕ, ಅದು ಹಿಂದೂ ಸಮಸ್ಯೆ ಹಾಗೂ ಒಬ್ಬ ಹಿಂದೂವಿನ ಜವಾಬ್ದಾರಿ. ಗಾಂಧೀಜಿಯ ಈ ತಂತ್ರ 'ಸ್ವ-ಕಳೆದುಕೊಳ್ಳುವಿಕೆ'ಯ ರಾಜಕಾರಣವಾಗಿದ್ದು ಕ್ರಿಯಾ ತಂತ್ರಗಳನ್ನು ಮರು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಿದ್ದರೂ, ಆ ಪ್ರಕ್ರಿಯೆಯಲ್ಲಿ ಅದು ದಲಿತರೊಳಗಿನ ನಿರೀಕ್ಷಿತ-ನ್ಯಾಯಸಮ್ಮತ ರೋಷವನ್ನು ಕಸಿದುಕೊಂಡಿತು. ರಾಜ್ಯಾಂಗವು ಅವಮಾನದ ರಾಜಕಾರಣವನ್ನು ನಡೆಸಿದ್ದರಿಂದ ಅದು ಕಾಯುವ ರಾಜಕಾರಣವಾಗಿ ಬಿಟ್ಟಿತು. ಈ ರಾಜಕಾರಣವನ್ನು ವಿರೋಧಿಸಲು ಈಗ ಅನುಸರಿಸಿದ ತಂತ್ರವೆಂದರೆ ಮುಖಭಂಗದ ರಾಜಕಾರಣವನ್ನು ನಡೆಸುವುದು. ಇದಕ್ಕೆ ಕಟ್ಟಿದ ರಂಗಸಜ್ಜಿಕೆಯೆಂದರೆ ಚುನಾವಣಾ ರಾಜಕಾರಣವಾಗಿರದೆ ಅಂತರಾಷ್ಟ್ರೀಯ ವೇದಿಕೆಗಳದ್ದಾಗಿತ್ತು.

ಇಂಥ ಮುಖಭಂಗದ ರಾಜಕಾರಣವು ಸಾಧ್ಯವಾಗಬೇಕಾದರೆ ವ್ಯಾಖ್ಯೆ ಮತ್ತು ನಡಾವಳಿಗಳನ್ನು ನಿರೂಪಿಸುವ ರಾಜಕಾರಣವನ್ನು ರೂಢಿಸಿಕೊಳ್ಳುವುದು. ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲರಿಗೂ ಅರ್ಥವಾಗುವ ಭಾಷೆಯಾದ ವಿಶ್ವಸಂಸ್ಥೆಯ ರಾಜಕಾರಣವನ್ನು ಎರಡು ಪರಿಭಾಷೆಗಳಲ್ಲಿ ನಿಲ್ಲಿಸಬಹುದು- ಜನಾಂಗ ಹತ್ಯೆ ಮತ್ತು ಹಕ್ಕುಗಳು. ಜನಾಂಗ ಹತ್ಯೆಯ ರಾಜಕಾರಣವು ಇನ್ನೂ ಅಪಕ್ವವಾಗಿದ್ದು, ಹಕ್ಕುಗಳ ರಾಜಕಾರಣವು-ಎರಡೂ ಕಾರಣಗಳಿಗಾಗಿ ಪ್ರಸ್ತುತವೆನಿಸುತ್ತದೆ. ಆಫ್ರಿಕಾದಲ್ಲಿ ಪ್ರಜಾಪ್ರಭುತ್ವದ ಪುನರುತ್ಥಾನ ಮತ್ತು ಹಕ್ಕುಗಳನ್ನು ಯುರೋಪು ಮಾರುಕಟ್ಟೆಯಂತೆ ರೂಢಿಗತ ಮಾಡಿದ್ದು. ಜ-7ರಿಂದ ವಿಶ್ವಸಂಸ್ಥೆಯವರೆಗೂ ಪ್ರತಿಯೊಬ್ಬರೂ ಗುರುತಿಸುವಂಥ ಸಾರ್ವತ್ರಿಕತೆಯ ಭಾಷೆಯೆಂದರೆ ಹಕ್ಕುಗಳದ್ದು. ಆದರೆ ಇಂಥ ಸಂಬಂಧಕ್ಕೆ ಮೂರು ತೊಡಕುಗಳಿದ್ದವು. ಮೊದಲನೆಯದೆಂದರೆ ದಲಿತರ ಸಮಸ್ಯೆಯನ್ನು ಲಿಂಗಸಂಬಂಧ, ಬಡತನ ಮತ್ತು ಇತರ ಸಂಗತಿಗಳಾಗಿ ವಿಂಗಡಿಸಿದ್ದು, ಬಡತನದ ಸಮಸ್ಯೆಯನ್ನು ಅಭಿವೃದ್ಧಿಯ ತರ್ಕದಲ್ಲಿ ಲೀನಗೊಳಿಸಲಾಯಿತು-ಹಾಗೂ ದಲಿತ ಮಹಿಳೆಯರ ಲೈಂಗಿಕ ಹಿಂಸೆಯು ದಲಿತ ಸಮಸ್ಯೆಯಾಗದೆ ಲಿಂಗತ್ವ(ಜೆಂಡರ್)ದ ಸಂಗತಿಯಾಯಿತು. ಈ ವಿಭಾಗಗಳು ರಾಜಕಾರಣದಿಂದ ಕೂಡಿದ್ದರೂ ಸಹ, ಒಟ್ಟಾರೆಯಾಗಿ ಅದು ಅಂತರಾಷ್ಟ್ರೀಯಗೊಳಿಸುವಲ್ಲಿ ಅಷ್ಟೇನೂ ಸಾಧ್ಯವಾಗಲಿಲ್ಲ. ಎರಡನೆಯದಾಗಿ, ಭಾರತೀಯ ರಾಜ್ಯಾಂಗವು ಪ್ರಜಾಸತ್ತಾತ್ಮಕ ಕಲ್ಯಾಣ ರಾಜ್ಯವಾಗಿ ತೋರಿಸಲಾಯಿತಲ್ಲದೆ, ಜಾತಿ ಸಂಗತಿಯು ತಾತ್ಕಾಲಿಕ, ಪ್ರಕ್ರಿಯಾತ್ಮಕ ಮತ್ತು ಆಂತಿರಕವೆಂಬಂತೆ ಬಿಂಬಿಸಲಾಯಿತು. ಮೂರನೆಯದಾಗಿ, ವಿದ್ವಾಂಸ ಜಗತ್ತು ಜಾತಿಯನ್ನು ಉಪಖಂಡದ ವಿದ್ಯಮಾನವೆಂದು ನಿರ್ದಿಷ್ಟ ನೈತಿಕತೆಗೆ ಭಟ್ಟಿ ಇಳಿಸಿದ್ದು. ಹೀಗಿರುವಲ್ಲಿ, ಪ್ರತಿಸ್ಪರ್ಧಿಯೇ ವಿಚಾರಧಾರೆಯನ್ನು ವ್ಯಾಖ್ಯಾನಿಸುವುದಲ್ಲದೆ, ಆಟದ ನಿಯಮಗಳನ್ನು ರೂಪಿಸಿದ್ದು, ತಾನು ಒಳಿತನ್ನು



ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹಂಬಲಿಸುವ ಎಲ್ಲರ ವೇದಿಕೆಯಾಗಬೇಕೆಂಬುದು **'ಸಂವಾದ'**ದ ಆಸೆ. ಎಲ್ಲ ಜನ ವರ್ಗದ ಸಂಕಟ-ನೋವು ಮತ್ತು ಪರಿಹಾರಗಳಿಗೆ ತನ್ನನ್ನು ತೊಡಗಿಸಿಕೊಳ್ಳಲು ಪತ್ರಿಕೆ ಇಚ್ಛಿಸುತ್ತದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ. ತಮ್ಮೆಲ್ಲರ ಪಾಲ್ಗೊಳ್ಳುವಿಕೆಯೇ ಪತ್ರಿಕೆಯ ಯಶಸ್ಸು! ತಾವೆಲ್ಲ ಲೇಖನ-ಪ್ರತಿಕ್ರಿಯೆಗಳನ್ನು ಕಳುಹಿಸುವ ಮೂಲಕ ಸಹಕರಿಸಬೇಕೆಂದು ಕೋರುತ್ತೇವೆ.

— ಸಂಪಾದಕ

ಚಂದಾ ವಿವರ

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-) **ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)**

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಚೆಕ್, ಡಿಡಿ, ಎಂ.ಓ, ಮೂಲಕ ಮಾತ್ರ ಸ್ವೀಕರಿಸಲಾಗುವುದು

ಚಂದಾ ಕಳಿಸಬೇಕಾದ ವಿಳಾಸ : 'ಸಂವಾದ' ಮಾಸ ಪತ್ರಿಕೆ

ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ, ಬೆಂಗಳೂರು - 560 091 ದೂರವಾಣಿ : 3287943 / 3281667

ಬಯಸುವವನಾಗಿ, ಪೋಷಕ ಮತ್ತು ಅಂಪೈರ್ ಆಗಿ ಗೋಚರಿಸುವುದರಿಂದ ಪ್ರತಿಸ್ಪರ್ಧಿಯನ್ನು ಎದುರಿಸುವುದು ಹೇಗೆ?

ಅಲ್ಲಿ ಅನೇಕ ತಂತ್ರಗಳು ಮಾದರಿಗಳಾಗಿ ಸಿಗುತ್ತವೆ. ಕಡ್ಸ್‌ರ್ಜನ ಅಂತರಜಾಲ (ಇಂಟರ್‌ನೆಟ್)ದ ಮೂಲಕ ಒಂದು ಭ್ರಮಾತ್ಮಕ ಸಮುದಾಯವನ್ನು ಪರಿಕಲ್ಪಿಸಿದರು. ಮೆಕ್ಸಿಕೋದಲ್ಲಿ ಚಿಯಾಪ್ಪಾಗಳು ಇಂಟರ್‌ನೆಟನ್ನು ಕರಗತ ಮಾಡಿಕೊಂಡು ವೆಬ್‌ಸೈಟ್‌ಗಳ ಮೂಲಕ ಅಂತರಾಷ್ಟ್ರೀಯ ರಾಜಕಾರಣವನ್ನು ರೂಪಿಸುತ್ತಾರೆ. ಆದರೆ, ರಾಜಕೀಯವಾಗಿ ಭಾರತವು ಬಹುವಾಗಿ ನೆಚ್ಚಿಕೊಂಡದ್ದು ಸಾರ್ವಜನಿಕ ವೇದಿಕೆಗಳು ಮತ್ತು ಅಂತರಾಷ್ಟ್ರೀಯ ಸಭೆಗಳನ್ನಲ್ಲದೆ ವೆಬ್‌ಸೈಟ್‌ಗಳನ್ನು ಅಲ್ಲ. ಇಲ್ಲಿ ಒಬ್ಬರು ಇಂಟರ್‌ನೆಟ್‌ನ ರಾಷ್ಟ್ರಗಳನ್ನು ಆಕ್ರಮಿಸುವುದು ಅಲ್ಲ. ಬದಲು ವಿಚಾರಧಾರೆಯ ವ್ಯಾಖ್ಯಾನಿತ ಜಾಗಗಳನ್ನು ಹಿಡಿಯುವುದು. ಜನಾಂಗವಾದವೆನ್ನುವುದು ಸಾರ್ವತ್ರಿಕವಾಗಿ ಖಂಡನೀಯ ಭಾಷೆಯಾಗಿದೆ. ಅದು ಬೆಟ್ಟದಂತಿದ್ದ ವಿಶ್ವಸಂಸ್ಥೆಯನ್ನು ಕದಲಿಸಿತು. ಅದರ ಅಡಿಪಾಯ ಹಾಗೂ ನಿಗಮಗಳನ್ನೇ ಬದಲಿಸಿತು. ಆದ್ದರಿಂದ, ಭಾರತದಲ್ಲಿ ಜಾತಿಯನ್ನು ಜನಾಂಗವೆಂದು ವ್ಯಾಖ್ಯಾನಿಸಿದಲ್ಲಿ, ಅದನ್ನು ಸ್ಥಳೀಯಗೊಳಿಸಿದರೂ ಸಹ, ಅಂತರಾಷ್ಟ್ರೀಯ ವೇದಿಕೆಗಳನ್ನು ಬಳಸಿ, ಅಧಿಕೃತ ಭಾರತದ ರೂಪವನ್ನು ಮುಖಭಂಗಕ್ಕೊಳಪಡಿಸಬಹುದು. ನೈತಿಕತೆಯನ್ನು ಬೋಧಿಸುವ ರಾಜ್ಯಾಂಗವನ್ನು ಅಡಿಯಲ್ಲೇ ಹಿಡಿಯಬಹುದಿತ್ತು. ಆದ್ದರಿಂದ, ವ್ಯಾಖ್ಯಾನಗಳ ರಾಜಕಾರಣವು ಮಹತ್ವದ್ದಾಯಿತು. ಪಠ್ಯದ ಹಂತದಲ್ಲಿ ಮೇಲ್ಜಾತಿಯವನೊಬ್ಬನನ್ನು ಮೀರಿಸುವುದು ಹೇಗೆ? ಅಲ್ಲಿ ದಲಿತ ಜ್ಞಾನ ಮೀಮಾಂಸೆಯನ್ನು ಮಾತನಾಡುವ ತಿಳಿಗೇಡಿ ಯಾರೂ ಇಲ್ಲ. ಏಕೆಂದರೆ ಸಂದರ್ಭ ಮತ್ತು ಸಮಯವು ಅದಾಗಿರದೆ ಕಾನೂನಾತ್ಮಕ ವ್ಯಾಖ್ಯೆಗಳನ್ನು ನೀಡಬೇಕಿತ್ತು. ನಾಲ್ಕನೆಯ ಹೆಜ್ಜೆಯೆಂದರೆ, ಒಬ್ಬರು ಹಕ್ಕುಗಳ ರಾಜಕಾರಣದಲ್ಲಿ ಪ್ರವೇಶಿಸುವುದು ಹೇಗೆ?

ಸರಳಸ್ಪಷ್ಟವಾದ ಆರಂಭವೆಂದರೆ-"ಎಲ್ಲ ಮಾನವರು ಮಾನಜೀವಿಗಳಾಗಿರುವುದರಿಂದಲೇ ಮಾನವ ಹಕ್ಕುಗಳನ್ನು ಹೊಂದಿರುತ್ತಾರೆ" ಅಥವಾ ಭಾರತೀಯ ಕುಲೀನರು (ಎಲೈಟರು) ಈ ಸ್ಪಷ್ಟತೆಯಿಂದ ಎಡವಿದರೇ? ನಾವಿದನ್ನು ಜಫರ್‌ಸೋನಿಯನ್ ಶೈಲಿಯಲ್ಲಿ ಮತ್ತೊಮ್ಮೆ ಅದನ್ನು ಒತ್ತಿ ಹೇಳಬೇಕೆ? ಈ ಸತ್ಯಗಳನ್ನು ನಾವು ಸ್ವತಃ ಸಿದ್ಧ ಗೋಚರವೆಂದು ನಂಬುತ್ತೇವೆ. "ಜೈವಿಕವಾಗಿ, ದಲಿತರು ಮಾನವರೆ. ಆದರೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅವರು ಅಲ್ಪ ಮಾನವರು" ಆದ್ದರಿಂದ ಮಾನವೀಯತ್ವವನ್ನು ಮರುಪಡೆಯಲು ದಲಿತರು ಮಾನವಹಕ್ಕುಗಳ ವಿಚಾರಧಾರೆಗೆ ಇಳಿಯಲೇಬೇಕು.

ಹಕ್ಕುಗಳು ಸಾರ್ವತ್ರಿಕವಾದರೂ, ಇತಿಹಾಸಗಳು ಮತ್ತು ಅನುಭವಗಳು ನಿರ್ದಿಷ್ಟವಾಗಿರುತ್ತವೆ, ಸೂಕ್ತ ಧ್ವನಿಯನ್ನು ಕಂಡುಕೊಳ್ಳಲು, ಅಡ್ವೋಕೆಸಿ ಅಪ್‌ಡೇಟ್‌ನ ಪ್ರಕಾರ "ಮಾನವಹಕ್ಕುಗಳ ಕುರಿತ ವ್ಯಾಖ್ಯಾನವು ದಲಿತ ದೃಷ್ಟಿಕೋನದಲ್ಲಿ ಮರು ವ್ಯಾಖ್ಯಾನಕ್ಕೊಳಪಡಿಸಬೇಕಾಗುತ್ತದೆ" ಅದೊಂದು ಬೌದ್ಧಿಕ ಯೋಜನೆಯಾಗುವುದಾದರೆ ಅದನ್ನು ಮತ್ತೆರಡು ಯೋಜನೆಗಳಲ್ಲಿಟ್ಟು ನೋಡಬೇಕಾಗುತ್ತದೆ. ಒಂದು-ಕಳೆದ ದಶಕದಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕತೆಯನ್ನು ಕುರಿತಂತೆ, ಅವು ಏಶಿಯಾದ ಮೌಲ್ಯಗಳಿಗೆ ತದ್ವಿರುದ್ಧವೆಂದು ಅಭಿಪ್ರಾಯಗಳು ಪ್ರಕಟಗೊಂಡಿದ್ದವು. ಇಲ್ಲಿ ಖೊಮೇನಿ ಮತ್ತು ಲೀಕ್ವಾನ್‌ಯೇವ್‌ರ ಅಭಿಪ್ರಾಯಗಳು ಏಶಿಯಾದ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ ಎಂಬುದನ್ನು ದಲಿತರು ಒಪ್ಪುವುದಿಲ್ಲ. ಹಾಗೇನಾದರೂ ಮಾಡಿದಲ್ಲಿ ಜಾತಿಯನ್ನು ನಾಗರೀಕತೆಯ ಯೋಜನೆಯ ಭಾಗವಾಗಿ ಬಿಂಬಿಸಿದಂತಾಗುತ್ತದೆ. ಇಂಥ ನಾಗರೀಕತೆಯು ದಲಿತರಿಗೆ ಇಟ್ಟ ಬೋನಿನಂತಾಗುತ್ತದೆ. ಹಾಗಿದ್ದರೂ, ಹಕ್ಕುಗಳು ಆಧುನಿಕತೆಯ ಕೊಡುಗೆಯಾಗಿದ್ದು, ಅದರೊಳಗೆ ಬಿಡುಗಡೆಯ ಭರವಸೆಯಿರುವುದನ್ನು ದಲಿತರು ವಿಶ್ಲೇಷಣೆ ಇಲ್ಲದೆ ಒಪ್ಪಿದ್ದಾರೆ. ರಾಜ್ಯಾಂಗದ ಹಕ್ಕುಗಳ ದೃಷ್ಟಿಯು ಯಾಂತ್ರಿಕವಾದುದು ಮತ್ತು ವ್ಯಕ್ತಿವಾದದಿಂದ ಪ್ರೇರಿತವಾದುದೆಂದು ದಲಿತರು ಗುರುತಿಸುತ್ತಾರೆ. ಇದು ಹಕ್ಕುಗಳನ್ನು 'ವ್ಯಕ್ತಿ'ಯಿಂದ 'ಸಮುದಾಯ ಹಕ್ಕಿ'ನತ್ತ ಮರುವ್ಯಾಖ್ಯಾನಿಸಿದೆ. ಅಡ್ವೋಕಸಿ

ಅಪ್‌ಡೇಟ್ ಪ್ರಕಾರ ದಲಿತ ಮಾನವಹಕ್ಕುಗಳು ವಿಶಿಷ್ಟವಾದುವು. ಕಾರಣ ಅವರ ಸಮುದಾಯ ಲಕ್ಷಣವೇ ಆಗಿದೆ. ಪರಿಕಲ್ಪನೆಗಳು ಸ್ಪಷ್ಟವಾದಂತೆ ಹಾಗೂ ಪ್ರಚಾರಾಂದೋಲನಗಳು ತೀವ್ರಗೊಂಡಂತೆ ದಲಿತ ಕಾರ್ಯಕರ್ತರಿಗೆ ಗೋಚರಿಸುವ ಸಂಗತಿಯೆಂದರೆ ಪರಿಣಾಮಗಳನ್ನು ಕುರಿತು ವಾದಿಸುವುದರಲ್ಲೇ ಮಹತ್ವದ ಯಶಸ್ಸು ಸಹ ಇರುವುದು. ಇದು ವಿಶ್ಲೇಷಣಾತ್ಮಕ ಅಥವಾ ಸೈದ್ಧಾಂತಿಕ ವಿಧಾನವಾಗಿರದೆ ವಾಸ್ತವ ಸಂಗತಿಯನ್ನಾಧರಿಸಿದೆ. ಅಂತರಾಷ್ಟ್ರೀಯವಾಗಿ ಜನಾಂಗ ಮತ್ತು ಜನಾಂಗ ತಾರತಮ್ಯ ಆಲದ ಮರದ ಬೇರುಗಳಂತೆ ನಿಬಂಧನೆಗಳನ್ನು ಸೃಷ್ಟಿಸಿದೆ. ಆದ್ದರಿಂದ, ಜನಾಂಗವಾದ, ಜನಾಂಗೀಯ ತಾರತಮ್ಯ, ಪರಕೀಯ ದ್ವೇಷ ಮತ್ತು ಸಂಬಂಧಿತ ಅಸಹನೆಯನ್ನು ಈ ಅಂತರಾಷ್ಟ್ರೀಯ ಸಮಾವೇಶದಲ್ಲಿ ತೊಲಗಿಸಲು ನಿಶ್ಚಯಿಸಿರುವಾಗ, ನಾವು ಮಾಡಬೇಕಾಗಿರುವುದೆಂದರೆ ಸ್ವಲ್ಪ ಚಾಕ್ಯತೆಯನ್ನುಪಯೋಗಿಸಿ ಪರಿಕಲ್ಪನಾತ್ಮಕ ಮತ್ತು ರಾಜಕೀಯ ನೆಲೆಯಲ್ಲಿ ಜಾತಿಯನ್ನು ಜನಾಂಗವೆಂದು ತೋರಿಸುವುದು. ಇದೊಂದು ವರ್ಗೀಕೃತ ಆತಿಥ್ಯ ಕೋರಿಕೆಯಾಗಿದೆ. ಏಕೆಂದರೆ ಅದು ಹಿಂಸಾತ್ಮಕವಾಗಿ ನೋವನ್ನು ಅನುಭವಿಸುವ ಒಂದೇ ಕುಟುಂಬದ ಪರಿವಾರಕ್ಕೆ ಸೇರಿದುದಾಗಿದೆ. ಅಲ್ಲದೆ ಅಲ್ಲಿ ಐಡೆಂಟಿಟಿಯ ನಾಶ, ಲೈಂಗಿಕ ಹಿಂಸೆ, ಚರಿತ್ರೆಯ ಅವಹೇಳನ ಎಲ್ಲವೂ ಇದೆ.

ಹೀಗೆ ಪ್ರವೇಶವನ್ನು ಪಡೆಯಲು ಎರಡು ದಾರಿಗಳಿವೆ. ಜಾತಿ ಜನಾಂಗವೆನ್ನುವುದು ಏಕೆ? ಏಕೆನ್ನುವುದಕ್ಕೆ ಉತ್ತರ ಬಹಳ ಸ್ಪಷ್ಟವಿದೆ. ಅದನ್ನು ನಮ್ಮ ಚರಿತ್ರೆ ಹೇಳುತ್ತದೆ. ಹಾಗೂ ನಮ್ಮ ಅನುಭವವೂ ಕೂಡ ಅದೇ ಆಗಿದೆ. ಇದರಾಚೆ ದಲಿತ ಜಗತ್ತಿನ ವಸ್ತುನಿಷ್ಠ ಚರಿತ್ರೆಯೂ ಸಹ ಬದುಕು ಮತ್ತು ಕಷ್ಟಗಳ ಸರಮಾಲೆಯ ಚರಿತ್ರೆಯಾಗಿದ್ದು, ಅದರ ಪರಿಣಾಮಗಳು ಕೂಸಿನಂತೆ ಆ ಚರಿತ್ರೆಗೆ ಆತುಕೊಂಡಿದೆ. ಜಾತಿಯು ಜನಾಂಗೀಯ ಪರಿಣಾಮಗಳನ್ನು ಹೊಂದಿದೆಯಾದರೆ, ಅದು ಜನಾಂಗವೇ ಆಗಿದೆ. ಆದ್ದರಿಂದ ಜಾತಿಯು ಜನಾಂಗ ವಿಮೋಚನೆಯೊಡನೆ ಜೋಡಣೆಯಾಗಲೇಬೇಕು. ಆದ್ದರಿಂದ ವಿಶ್ವಸಂಸ್ಥೆಗೆ ಸುಸ್ವಾಗತ. ಆದರೆ ಭಾವನೆಗಳ ಕಥಾನಕ ಮಾತ್ರ ಸಾಲದು. ಇದು ವಕೀಲರ ಮತ್ತು ನೌಕರಶಾಹಿಯ ಜಗತ್ತಿನಲ್ಲಿ ನಡೆಯದು. ಅದಕ್ಕೆ ಬೇಕಾದ ಸೂಕ್ತ ಪರಿಭಾಷೆಯನ್ನು ಹುಡುಕಿಕೊಳ್ಳಬೇಕು. ಜಾತೀ ಜನಾಂಗ ಸಮಾನತೆಯು ಮೂರನೆ ಪರಿಭಾಷೆಯಾದ 'ಹುಟ್ಟು' (ವಂಶ) ಎಂಬುದು ಕಾನೂನು ಪಠ್ಯವಾಗಿ ಇಲ್ಲದಿದ್ದಲ್ಲಿ ಅವು ಕ್ಷೀಣವಾಗಿ ಬಿಡುತ್ತವೆ.

ಅದೊಂದು ಜೀವ ಉಳಿಸುವ ಪರಿಭಾಷೆ. 'ಹುಟ್ಟು' ಎನ್ನುವುದು ರಕ್ತ ಮತ್ತು ರಕ್ತ ಸಂಬಂಧಗಳನ್ನು ಕುರಿತದ್ದು. ಅದು ಅನುವಂಶೀಯವಾದುದು. ಜಾತಿ ಈ ಪರಿಭಾಷೆಯಿಂದಲೇ ಜನಾಂಗದೊಂದಿಗೆ ಸಾಮ್ಯತೆಯನ್ನು ಹೊಂದುವುದು. ಅಡ್ವೋಕಸಿ ಅಪ್‌ಡೇಟ್ ಅದಕ್ಕೆ ಜನಪದೀಯ ಸಿದ್ಧಾಂತವಾದ ಬಣ್ಣವನ್ನು ಸೇರಿಸುತ್ತದೆ. ಆದ್ದರಿಂದ, ರಕ್ತವು ವರ್ಣಸಿದ್ಧಾಂತದಲ್ಲಿಯಷ್ಟೇ ಇರುವುದಲ್ಲದೆ, ಆರ್ಯ ಮತ್ತು ದ್ರಾವಿಡ ಜನಾಂಗಗಳ ಪರಿಭಾಷೆಗಳಲ್ಲೂ ಇದೆ. ಅದರ ಪ್ರಕಾರ 'ವರ್ಣ ಎಂದರೆ ಬಣ್ಣ'-ಹಾಗೂ 'ವರ್ಣವ್ಯವಸ್ಥೆಯು ಮೂಲ ಚರ್ಮದ ಬಣ್ಣವನ್ನು ಆಧರಿಸಿದೆಯೆಂದು ಕಾಣುತ್ತದೆ. ಕ್ರಮೇಣ ಅದು ಅಂತರ್‌ವಿವಾಹ ಮತ್ತು ರಕ್ತ ಬೆರೆತು ತಳಿ ಮತ್ತು ರಕ್ತವಾಗಿ ಪರಿವರ್ತನೆಗೊಳ್ಳುತ್ತದೆ. ದಕ್ಷಿಣ ಭಾರತದಲ್ಲಿ, ಇತರ ಭಾಗಗಳನ್ನು ಹೊರತುಪಡಿಸಿ ಇರುವ ನಂಬಿಕೆಯೆಂದರೆ ಇಲ್ಲಿನ ಜನರೆಲ್ಲ ದ್ರಾವಿಡ ಜನಾಂಗವಾಗಿದ್ದಾರಲ್ಲದೆ ಆರ್ಯನ್ನರು ಅಲ್ಲ. ಆರ್ಯನ್ನರ ಅಧಿಕಾರದ ವಿರುದ್ಧ ದಕ್ಷಿಣದಲ್ಲಿ ತೀವ್ರವಾದ ರಾಜಕೀಯ ಆಂದೋಲನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಜಾತಿ ಆಧಾರಿತ ತಾರತಮ್ಯವು ಜನಾಂಗೀಯವೆಂದು ಕರೆಯಬಹುದಾಗಿದೆ"

> **ದಲಿತ ಬದುಕಿನ ನೋವಿನ ಇತಿಹಾಸದಲ್ಲಿ ಪದಗಳು ಬಹು ಮುಖ್ಯ. ಹೆಸರುಗಳು ಮಹತ್ತ್ವವುಳ್ಳವು. ಅನೇಕ ವರ್ಗೀಣಕರಣಗಳೆಲ್ಲವು ಜೀವ ವಿರೋಧಿಯಾಗಿವೆ. ದಲಿತರ ಶೋಷಣೆಯು ಒಂದು ಹೆಸರಿಸಬಹುದಾದ ಕ್ರಿಯೆ. ಈ ಕೆಳಗಿನ ಹೆಸರುಗಳ ಭ್ರಷ್ಟತೆಯನ್ನು ಗಮನಿಸಿ-ಅವರ್ಣರು, ಚಾಂಡಾಲರು, ಅಚ್ಯುತರು, ಪರೆಯರು, ಅಸ್ಪೃಶ್ಯರು, ಸಾಮೀಪ್ಯಹೀನರು, ಜಾತಿಹೀನರು, ಜಾತಿಭ್ರಷ್ಟರು, ಜಾತಿಬಾಹಿರರು, ಹೀಗೆ ಹೆಸರಿಸುವುದೇ ಅವಮಾನೀಯವಾದುದು.**

ಕೊನೆಯ ವಾದವು ಮೂರು ರೀತಿಯಲ್ಲಿದೆ. ಜಾತಿಯನ್ನು ಜನಾಂಗವೆಂದು ನೋಡುವ ದಲಿತರ ಬದುಕಿನ ಅನುಭವ ಅಲ್ಲಿದೆ. ಜನಪದೀಯ ಸಿದ್ಧಾಂತದ ಪ್ರಕಾರ ಚರ್ಮ ಮತ್ತು ರಕ್ತವು ಜನಾಂಗೀಯ ಚೌಕಟ್ಟಿನಲ್ಲೇ ಇದೆ. ಇದಲ್ಲದೆ ಜನಾಂಗವಾದಿ ರಾಜಕಾರಣವು ಜಾತಿಯ ದಬ್ಬಾಳಿಕೆಗಿಂತ ಮುಕ್ತಿದಾಯಕವಾದುದೆಂಬ ಚೌಕಟ್ಟು.

ಆದರೆ ಈ ಚೌಕಟ್ಟುಗಳು, ಕೂಡಲೇ ಪಲ್ಲಟಗೊಳ್ಳುತ್ತವೆ. ಶೋಷಣೆಯ ವಿದ್ಯಮಾನದ ಪರಿಭಾಷೆಗಳಲ್ಲಿ ವಾದಿಸಿದುದನ್ನೇ ತಂತ್ರಗಾರಿಕೆಯ ಚರಿತ್ರೆಯನ್ನಾಗಿಯೂ ಪ್ರತಿನಿಧೀಕರಿಸಲಾಗುತ್ತದೆ. ಆದರೆ ಬರಹಗಾರರು ತಕ್ಷಣವೇ ಒತ್ತಿಹೇಳುವುದೇನೆಂದರೆ ಈ ತಂತ್ರಗಾರಿಕೆಗಳು ಸಹ ತೌಲನಿಕ ಸಮಾಜಶಾಸ್ತ್ರವನ್ನು ಒಳಗೊಳ್ಳುತ್ತವೆಯೆಂದೂ, ಕ್ಷೇತ್ರೀಯ ರಾಜಕಾರಣವು ಸಾಮೀಪ್ಯ ಸಂಬಂಧ ಹಾಗೂ ಸಧೂರತೆಯ ತೌಲನಿಕ ರಾಜಕಾರಣವನ್ನು ಬಿಂಬಿಸುತ್ತದೆ.

ಅಡ್ವೋಕೆಸಿ ಅಪ್‌ಡೇಟ್ ಒಪ್ಪಿಕೊಳ್ಳುವ ಪ್ರಕಾರ ತಳಮಟ್ಟದಲ್ಲಿ ಸಾಕಷ್ಟು ವಿಶ್ಲೇಷಣೆ ಇಲ್ಲದ್ದರಿಂದ ಪರಿಣಾಮಕಾರಿಯಾದ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಲಾಗಿಲ್ಲ. ಆದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಆ ತಂತ್ರವು "ಇರುವ ಎಲ್ಲ ಅವಕಾಶಗಳನ್ನು" ಬಳಸಿಕೊಂಡು ಮುನ್ನುಗ್ಗಿತು. ಇಲ್ಲಿ ಸಂಖ್ಯಾತರ್ಕವು ನೂರ ಅರವತ್ತು ಮಿಲಿಯನ್ ದಲಿತರ ಹಾಗೂ ಮೂರು ಮಿಲಿಯನ್ ಬೂರಾಕಮಿನ್‌ಗಳೆಂದು ಸೂಚಿಸಿದ್ದು ಸಹಾಯಕಾರಿಯಾಯಿತಲ್ಲದೆ ಪರಿಕಲ್ಪನಾತ್ಮಕವಾಗಿ ಮತ್ತು ವಾಸದ ನೆಲೆಯನ್ನಾಧರಿಸಿ ಕ್ರಮೇಣ 240 ಮಿಲಿಯನ್ ದಲಿತ ಏಶಿಯನ್‌ರೊಡನೆ ಬೆಂಬಲವನ್ನು ಪಡೆಯಲನುಕೂಲವಾಯಿತು. ದಲಿತ ಎನ್‌ಜಿಓನಗಳು ದಕ್ಷಿಣ ಏಷ್ಯಾದ ವಿದ್ಯಮಾನವನ್ನು ತೆಗೆದುಕೊಂಡು ಅದನ್ನೇ ತಾತ್ಕಾಲಿಕವಾಗಿ ಜಾಗತಿಕಗೊಳಿಸಲಾಯಿತು.

ಈ ಜಾಗತಿಕಗೊಳಿಸಿದ ರಾಜಕಾರಣದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಸಂಪರ್ಕ ಸಾಧನೆ ಹಾಗೂ ಪ್ರಚಾರಾಂದೋಲನದ ಮೂಲಕ ಏನನ್ನು ಸಾಧಿಸಬಹುದೆಂದು ಇಲ್ಲಿರುವ ಪ್ರಶ್ನೆಯೆಂದರೆ ಎನ್‌ಜಿಓ ರಾಜಕಾರಣವು ವಿಶ್ವಸಂಸ್ಥೆಯ ಏಜೆನ್ಸಿಗಳಾಗಿ, ಆಧಾರಗಳಾಗಿ, ನ್ಯಾಯಾಲಯಗಳಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜಕಾರಣದ ಚೌಕಟ್ಟನ್ನು ಬದಲಿಸಲಾದೀತೆ ಎಂಬುದು. ಯಾಕೆಂದರೆ ಈ ಎನ್‌ಜಿಓ ರಾಜಕಾರಣದ ಚೌಕಟ್ಟಿನಲ್ಲಿ ವಿಶೇಷವಾಗಿ ಆರೋಗ್ಯ, ವಿಕೋಪಗಳು, ಅಭಿವೃದ್ಧಿಯನ್ನು ಕುರಿತಂತೆ ಒಂದೆಡೆ ಸಂದೇಹಕ್ಕೆ ಎಡೆಮಾಡಿಕೊಡುತ್ತದೆ. ಅನೇಕ NGO ಗುಂಪುಗಳು ಸ್ವಹಿತಾಸಕ್ತಿಯನ್ನು ಹೊಂದಿಕೆಯಲ್ಲದೆ ಆತ್ಮಶ್ಲಾಘನೆಯಲ್ಲಿಯು ತೊಡಗಿವೆ. ದಲಿತ ರಾಜಕಾರಣ ಮತ್ತು ಎನ್‌ಜಿಓ ರಾಜಕಾರಣ ಬೇರೆ ಬೇರೆ ಗ್ರಹೀತಗಳಲ್ಲಿ ಕ್ರಿಯಾಶೀಲವಾಗಿದ್ದು ಗೊಂದಲಕ್ಕೆಡೆಮಾಡುತ್ತವೆ. ಹೀಗಿರುವಲ್ಲಿ ಬರಹಗಾರರು ಒತ್ತಿಹೇಳುವುದೇನೆಂದರೆ ಅವರ ಕೆಲಸವೂ 3 ಹಂತಗಳಲ್ಲಿ-ಸ್ಥಳೀಯ, ರಾಷ್ಟ್ರೀಯ, ಅಂತರಾಷ್ಟ್ರೀಯ ನೆಲೆಗಳಲ್ಲಿವೆ. ಇಲ್ಲಿರುವ ಸೂಚನೆಯೆಂದರೆ ಈ ಎಲ್ಲ ಪ್ರಚಾರಗಳ ಪ್ರಯತ್ನಗಳೂ ಸಹ ಜಾಗತಿಕ ತಂತ್ರಗಳನ್ನು ಬಳಸಿ, ಸ್ಥಳೀಯವಾಗಿ ಮತ್ತು ಅಂತರಾಷ್ಟ್ರೀಯವಾಗಿ ಒತ್ತಡಗಳನ್ನು ರೂಪಿಸಿ ರಾಷ್ಟ್ರೀಯವಾಗಿ ನಿರ್ದಿಷ್ಟ ದಿಕ್ಕಿನತ್ತ ಸಾಗುವಂತೆ ಮಾಡುವುದು. ದಲಿತ ಕಾರ್ಯಕರ್ತರು ಎರಡು ಸಂಗತಿಗಳ ಬಗ್ಗೆ ಸ್ಪಷ್ಟವಾಗಿದ್ದಾರೆ. ಜಾತಿಯೊಂದು ಸಾಂಸ್ಕೃತಿಕ ಭಿನ್ನತೆಯೆಂದು ಈಗಷ್ಟೇ ಪ್ರಕಟಗೊಳ್ಳುತ್ತಿರುವ ಸಾರ್ವಜನಿಕ ವ್ಯಾಖ್ಯಾನ (ವಿಚಾರಧಾರೆ)ಯನ್ನು ಒಪ್ಪಲಾಗದು. ಬಹುಸಂಸ್ಕೃತಿ ಚಿಂತನೆಯ ತರ್ಕವು ಹೇಗಿದೆಯೆಂದರೆ 'ಅದೊಂದು ಭಿನ್ನ ಮ್ಯಾಗಿನಾಸ್' ತರಹ. ಏಶಿಯಾದ ಕಾನೂನು ಸಂಪನ್ಮೂಲ ಕೇಂದ್ರವು ಮತ್ತೊಂದು ರೀತಿಯಲ್ಲಿ ವಾದಿಸುತ್ತದೆ. ಅದರ ಪ್ರಕಾರ, "ಭಿನ್ನತೆಯೆನ್ನುವುದು ಸಮಾನತೆಗೆ ಮತ್ತೊಂದು ಹೆಸರಾದರೆ ಒಪ್ಪಬಹುದು". ಈ ದಾಖಲೆಯು ಹೇಳುವಂತೆ ರಾಜ್ಯಾಂಗವು ಒಂದು ಏಕೀಕರಿಸುವ ವ್ಯಾಖ್ಯಾನವನ್ನು ತಯಾರಿಸಿದ್ದು, ಅದು ಯಜಮಾನೀಯವಾಗಿದ್ದು ಶೋಷಣಾತ್ಮಕವೂ ಆಗಿದೆ. ಅವರ ಪ್ರಕಾರ ಜಾತಿಯು ಜನಾಂಗವೆಂದು ಹೇಳುವುದು ಪ್ರತಿರೋಧದ ವ್ಯಾಖ್ಯಾನ (Discourse)ವಾಗಿದ್ದು ಅದನ್ನು ನಾವು ಹಾಗೆಯೇ ಓದಿ, ಒಪ್ಪಿಕೊಳ್ಳಬೇಕಾಗಿದೆ. ಆ ದಾಖಲೆಯ ಪ್ರಕಾರ "ಅಭಿವ್ಯಕ್ತಿ ಸ್ವಾತಂತ್ರ್ಯವು ದಲಿತರು ಪ್ರತಿರೋಧದ ಹಕ್ಕು ಹಾಗೂ ವಿರುದ್ಧಾತ್ಮಕ ಡಿಸ್ಕೋರ್ಸ್‌ಗಳನ್ನು ರೂಪಿಸಲು ಅನುವು ಮಾಡಿಕೊಡುತ್ತದೆ".

ಇಲ್ಲಿ ಹಕ್ಕು ಹಾಗೂ ಜಾತಿಯ ವಿರುದ್ಧ ಪ್ರತಿಭಟನೆ ಮತ್ತು ವಿರುದ್ಧಾತ್ಮಕ ಡಿಸ್ಕೋರ್ಸ್‌ಗಳನ್ನು ರೂಪಿಸುವುದನ್ನು ಒಪ್ಪಿಕೊಳ್ಳಬಹುದಾದರೂ, ರಾಜ್ಯಾಂಗ ಕುರಿತ ದಲಿತ ವಿಶ್ಲೇಷಣೆಯನ್ನು ಬಹಳ ಸರಳೀಕರಿಸಿದ್ದು, ಒಪ್ಪಲಾಗದು. ಅದು ವಾಸ್ತವ ನೆಲೆಯಲ್ಲಿ ಆರಂಭವಾಗಿ

ರಾಜ್ಯಾಂಗವು ಮೇಲ್ಜಾತಿಯವರದ್ದಾಗಿದೆಯೆಂದೂ ಅದಕ್ಕೆ ದೌರ್ಜನ್ಯಗಳನ್ನು ತಡೆಯಲು ರಾಜಕೀಯ ಇಚ್ಛಾಶಕ್ತಿ ಇಲ್ಲವಾಗಿದೆಯೆಂದು ಹೇಳುತ್ತದೆ; ಆದರೂ, "ಮೀಸಲಾತಿಯು ಖಾಸಗಿ ನಿಗಮಗಳಲ್ಲೂ ಅನುದಾನ ಇಲ್ಲದಿದ್ದಾಗಲೂ ದೊರೆಯಬೇಕೆಂದು ಒತ್ತಾಯಿಸುತ್ತದೆ" ಉದಾರೀಕರಣದ ಈ ಸಂದರ್ಭದಲ್ಲಿ ಅಂಥ ಬೇಡಿಕೆಯು ಆತುರದಿಂದ ಕೂಡಿದ್ದೆಂದು ಅನಿಸುತ್ತದೆ. ಮೀಸಲಾತಿ ತನ್ನಷ್ಟಕ್ಕೆ ಅದೊಂದು ಯಾಂತ್ರಿಕ ತಂತ್ರವಷ್ಟೆ. ಅಂದರೆ ಹೊಸ ಉದ್ಯಮಕ್ಕಾಗಿ ಸಾಲವನ್ನು ಪಡೆಯುವುದು ಮತ್ತಷ್ಟು ಶಕ್ತಿಯುತವಾದದ್ದಲ್ಲವೇ? ಅಂತರಾಷ್ಟ್ರೀಯ ವೇದಿಕೆಯ ಮೂಲಕ ದಲಿತರೇಕೆ ಬಹುರಾಷ್ಟ್ರೀಯ ಕಂಪೆನಿಗಳು ಸೇರಿದಂತೆ ಖಾಸಗೀ ಉದ್ಯಮಕ್ಕೆ ತಮ್ಮ ಬೇಡಿಕೆ ಇಡಬಾರದು? ಖಾಸಗೀ ಉದ್ಯಮಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ದಲಿತ ಮೌಲ್ಯಮಾಪನವು ತಮ್ಮ ಪ್ರಚಾರಾಂದೋಲನವನ್ನು ಮರೆಮಾಡಿದಂತಾಗುತ್ತದೆಯೇ? ದಲಿತರ ರಾಜಕಾರಣದ ಯುಕ್ತಿಗಳು ಜಾಗತಿಕವಾಗುವಾಗ ಅದು ಹೇಗೆ ದಲಿತ ದೃಷ್ಟಿಕೋನವನ್ನು ನೀಡುತ್ತದೆ? ದಲಿತ ದಾಖಲೆಗಳು ಆವೇಶಪೂರ್ಣ ಸ್ಪಷ್ಟ ವಿಶ್ಲೇಷಣೆ ಹಾಗೂ ಉದ್ದೇಶಗಳಿಂದ ಕೂಡಿವೆ. ಈ ಶೋಷಣೆಯ ಬಗೆಗಿನ ಈ ಸಿದ್ಧಾಂತಗಳಿಗೆ ಉತ್ತರಿಸುವುದು ಹೇಗೆ? ಸಮಾಜವಾದ ಮತ್ತು ಸೈಂಟ್‌ಸೈಮನ್‌ನಲ್ಲಿ ಡರ್ಬಿಯಾ ಸಮಾಜವಾದುದನ್ನು ವಿಜ್ಞಾನ ಅಲ್ಲವೆಂದೂ, ಅದು ಗೋವಿನಿಂದ ಕೂಗಿದ ಜೀವಿಯ ಧ್ವನಿಯೆಂದು ತಿರಸ್ಕರಿಸಿದಂತೆ ಮಾಡಬಹುದೇ? ಅದನ್ನು ಕೇವಲ 'ಧ್ವನಿ'ಯೆಂದು ಪರಿಗಣಿಸಿ, ವಿಜ್ಞಾನವಲ್ಲವೆಂದು ನೋಡುತ್ತೇವೆಯೇ? ಅದನ್ನು ಎಲ್ಲ ತಿಳಿದವರಾದ ಡೂಮೋ ಹಾಗೂ ಶ್ರೀನಿವಾಸ್‌ರಂತೆ ಬೌದ್ಧಿಕತೆಯನ್ನು ಬಯಸಿ ಉತ್ತರಿಸಬಹುದೇ? ಇವತ್ತಿನ ಸೂಕ್ತ ರಾಜಕೀಯ ಸಂದರ್ಭದಲ್ಲಿ ಅದು ಮತ್ತಷ್ಟು ಜಟಿಲವಾಗುತ್ತದೆ. ನನ್ನ ಈ ಟೀಕೆಯ ಬ್ರಾಹ್ಮನಿಕಲ್ ಎಂದು ತಿರಸ್ಕರಿಸಬಹುದೇ? ಅಥವಾ ಚರ್ಚೆಗೆ ಪೂರಕವೆಂದು ನೋಡಬಹುದೇ? ಜಾತಿಯನ್ನು ಜನಾಂಗ ಅಲ್ಲವೆಂದು ಯಾವಾಗ ಆಂದ್ರಿ ಬೆಟೆಲ್ಲೆ ಹೇಳುತ್ತಾನೋ, ಆತನ ಅರ್ಹತೆ ಮತ್ತು ಉದ್ದೇಶಗಳನ್ನು ತಪ್ಪಾಗೇನೂ ಭಾವಿಸಬೇಕಿಲ್ಲ.

ಈ ಸಂದರ್ಭದಲ್ಲೇ ಅದೃಷ್ಟವೆಂಬಂತೆ ಮಾರ್ಟಿನ್ ಮಕ್ವಾನ್‌ರವರು "ಜಾತಿಯು ಜನಾಂಗವಾಗಿರಲಿಕ್ಕಿಲ್ಲ" ಎಂಬ ಲೇಖನ ಮುಖ್ಯವಾಗುವುದು. ಈ ಪ್ರಬಂಧವು ಜೀವ ಜಗತ್ತು ಮತ್ತು ವ್ಯವಸ್ಥೆ ನಡುವೆ ಸಾಗಿ, ವಸ್ತುನಿಷ್ಠ ಹೇಳಿಕೆಗಳನ್ನು, ದೌರ್ಜನ್ಯಗಳ ಪಟ್ಟಿಯನ್ನು, ದೈನಂದಿನ ಘಟನೆಗಳನ್ನು ಒಳಗೊಳ್ಳುತ್ತಾ ಓದುಗರ ಪ್ರತಿಕ್ರಿಯೆಯನ್ನು ಕೇಳುತ್ತದೆ. ಅಲ್ಲದೆ, ದಲಿತ ಕಷ್ಟಗಳು ಅಥವಾ ಆರ್ಕಿಮಿಡಿಯನ್ ಸಮಸ್ಯೆಯಂತೆ ವ್ಯಾಖ್ಯಾನಗಳನ್ನು ಬದಲಾಯಿಸುತ್ತಿರಬೇಕೇ? ಎಂದು ಮಕ್ವಾನ್ ಹೇಳುತ್ತಾರೆ. ಅವರ ಪ್ರಬಂಧವು ಶಕ್ತಿಕೇಂದ್ರದಂತೆ ಒಮ್ಮೆಗೆ ದೌರ್ಜನ್ಯ ಮತ್ತು ದೈನಂದಿನ ನಡಾವಳಿಗಳ ಬಗ್ಗೆ ಸಂಗತಿಗಳನ್ನು ನೋಡುತ್ತದೆ. ಅದನ್ನೊಂದು ಗಾಂಧಿ ಅಥವಾ ಲೆವಿನೇಸಿಯನ್ ಉತ್ತರವೆಂದೂ ಪರಿಗಣಿಸದೆ, ಅದೊಂದು ಪ್ರವೇಶವೆಂದಷ್ಟೆ ಓದಬೇಕು:

1) "ಉತ್ತರಭಾರತದ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ತಮ್ಮ ಚೇಂಬರನ್ನು ಗಂಗಾಜಲವನ್ನು ತಂದು ಶುದ್ಧೀಕರಿಸುತ್ತಾನೆ. ಏಕೆಂದರೆ ಈತನಿಗಿಂತ ಮೊದಲಿದ್ದವ ಒಬ್ಬ ದಲಿತನಾಗಿದ್ದ" ಇದೊಂದು ಕೇವಲ ಶುಚಿತ್ವದ ಘಟನೆಯೇ?

2) "ಗುಜರಾತ್ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶ ಪೊಲೀಸರ ಉತ್ತರವನ್ನು ನಿರೀಕ್ಷಿಸುತ್ತಿರುವಾಗ, ಪೊಲೀಸ್ ತಾವು ಕ್ರೂರವಾಗಿ ದಲಿತನೊಬ್ಬನನ್ನು ಹೊಡೆದು ಸಾಯಿಸಿಲ್ಲವೆಂದು ಪ್ರತಿವಾದಿಯ ಮೂಲಕ ತೀವ್ರವಾಗಿ ಸಮರ್ಥಿಸಿಕೊಳ್ಳುವ ಸಂದರ್ಭದಲ್ಲಿ ನೀಡಿದ ಉತ್ತರ ಹೀಗಿತ್ತು. "ನನ್ನ ಒಡೆಯಾ, ಕಾನೂನು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ". ಇಂಥ ವ್ಯಕ್ತಿಗೆ ಬಡ್ತಿ ನೀಡಬೇಕೇ? ಆಶ್ಚರ್ಯವೆಂದರೆ ಆತನಿಗೆ ಬಡ್ತಿ ಸಿಗುತ್ತದೆ.

3) "ದಲಿತ ಮಕ್ಕಳು ತರಗತಿಯ ಮೂಲೆಯಲ್ಲಿ ಪ್ರತ್ಯೇಕವಾಗಿ ಕೂರಬೇಕು. ಹಾಗೆಯೇ ಹಳ್ಳಿಯ ಹೊಟೇಲಿನಲ್ಲಿ ದಲಿತರಿಗೆ 'ಟೀ ಕುಡಿಯಲು ಪ್ರತ್ಯೇಕ ಟೀ ಲೋಟಗಳು ಇವೆ' ಪ್ರತ್ಯೇಕವಾದರೂ ಸಮಾನರೇ.

> **ಅಪರಾಧೀ ರಾಜಕಾರಣ ಸತ್ವಹೀನವಾದುದು. ಗಾಂಧಿಯು 'ಹರಿಜನ' ಐಡಿಯಾದ ಮೂಲಕ ಅದನ್ನು ಪ್ರಯತ್ನಿಸಿದ್ದರು. ಈ ಪ್ರಯತ್ನದಲ್ಲಿ ದಲಿತ ಸಮಸ್ಯೆಯನ್ನು ಹರಿಜನ ಎನ್ನುವುದರ ಮೂಲಕ, ಅದು ಹಿಂದೂ ಸಮಸ್ಯೆ ಹಾಗೂ ಒಬ್ಬ ಹಿಂದೂವಿನ ಜವಾಬ್ದಾರಿ. ಗಾಂಧೀಜಿಯ ಈ ತಂತ್ರ 'ಸ್ವ-ಕಳೆದುಕೊಳ್ಳುವಿಕೆ'ಯ ರಾಜಕಾರಣವಾಗಿದ್ದು ಕ್ರಿಯಾ ತಂತ್ರಗಳನ್ನು ಮರು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಿದ್ದರೂ, ಆ ಪ್ರಕ್ರಿಯೆಯಲ್ಲಿ ಅದು ದಲಿತರೊಳಗಿನ ನಿರೀಕ್ಷಿತ-ನ್ಯಾಯಸಮ್ಮತ ರೋಷವನ್ನು ಕಸಿದುಕೊಂಡಿತು.**

4) "ಕೆಲವು ಶಾಲೆಗಳಲ್ಲಿ ಮಧ್ಯಾಹ್ನ ಊಟ (ಮಿಡ್‌ಡೇ ಮಿಲ್ಸ್)ದ ನಂತರ ದಲಿತೇತರ ವಿದ್ಯಾರ್ಥಿಗಳು ಆಟವಾಡುತ್ತಿದ್ದರೆ ದಲಿತ ಮಕ್ಕಳು ಪಾತ್ರೆಗಳನ್ನು ತೊಳೆಯಬೇಕು" ಒಪ್ಪಿತ ಬಾಲಕಾರ್ಮಿಕ ಪದ್ಧತಿಯೇ?

5) "ಇನ್ನು ಕೆಲವು ಘಟನೆಗಳ ಪ್ರಕಾರ ದಲಿತೇತರ ಮಕ್ಕಳ ಪೋಷಕರು ಶಾಲೆಗೆ ನುಗ್ಗಿ ದಲಿತ ಶಿಕ್ಷಕ-ಶಿಕ್ಷಕಿಯರನ್ನು ಹೊಡೆದಿದ್ದಾರೆ, ಕಾರಣ ಅವರು, ದಲಿತೇತರ ಮಕ್ಕಳಿಗೆ ಹೋಂವರ್ಕ್ ಮಾಡಿಲ್ಲವೆಂದು ಗದರಿಸಿದ್ದಕ್ಕೆ" ದಲಿತರು ಶಿಕ್ಷಕರಲ್ಲವೇ, ನಿಮಗೆ ಇದಕ್ಕಿಂತ ಹೆಚ್ಚಿಗೆ ಮತ್ತಿನ್ನೇನೂ ಬೇಕು?

'ಹೀಗೆ ಮಕ್ವಾನ್‌ರವರು ನೈಜ ಘಟನೆ ಹಾಗೂ ವಸ್ತುನಿಷ್ಠ ಸಂಗತಿಗಳ ಮೂಲಕ ಸುಧಾರಣೆಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ ಮತ್ತು ಜನರ ವರ್ತನೆಗಳನ್ನು ಬದಲಾಯಿಸಿದೆ ಎಂಬುದನ್ನು ತೋರಿಸುತ್ತದೆ. ಅಲ್ಲದೆ, ಇತ್ತೀಚೆಗೆ ದಲಿತರು ಜಾತಿಯ ಬಗ್ಗೆ ಬರೆಯುವಲ್ಲಿ ಪ್ರಸ್ತುತ ಪ್ರತಿಕ್ರಿಯೆಗಳನ್ನು ಗುರುತಿಸುತ್ತಾ ಮಕ್ವಾನ್‌ರವರು ಆ ಮನಸ್ಸಿನ ರಚನೆಯನ್ನು ಬಯಲಿಗೆಳೆಯುತ್ತಾರೆ. ಒಂದು ಚಾರಿತ್ರಿಕ ಹಿನ್ನೆಲೆಯನ್ನು ದಲಿತ ಕಾರ್ಯಕರ್ತರು ಹೆಸರಿಸುತ್ತಾರೆ.

1930-31ರಲ್ಲಿ ಲಂಡನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ "ಎಲ್ಲ ಸಮುದಾಯಗಳ ಮುಂಚೂಣಿಯ ನಾಯಕರು...ಕೂಡಿ ಭವಿಷ್ಯದ ಸಂವಿಧಾನದ ರೂಪುರೇಷೆಗಳನ್ನು ಚರ್ಚಿಸುವಾಗ, ಅಂಬೇಡ್ಕರ್‌ರವರು ನೇರವಾಗಿ ಸಮಾವೇಶಕ್ಕೆ ಹೇಳಿದ್ದೇನೆಂದರೆ ನಿಮ್ಮ ವರ್ಗಗಳು ಯಾವುದೇ ಸಂವಿಧಾನವನ್ನು ತಮ್ಮ ಸ್ವ-ಆಡಳಿತಕ್ಕೆ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅವು ಸಮಾನ ನಾಗರೀಕ ಹಕ್ಕು ಮತ್ತು ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುವುದಿಲ್ಲ" (ದಿವಾಕರ್ ಹಾಗೂ ಮ್ಯಾಥ್ಯೂ 2001:3). ಮೇಲ್ಜಾತಿ ನಾಯಕರು ಅಂಬೇಡ್ಕರ್‌ರವರ ಈ ನಿಲುವನ್ನು ವಿರೋಧಿಸುತ್ತಾರೆ. ಅಲ್ಲದೆ ಅಂಬೇಡ್ಕರ್‌ರವರು ಸ್ವಾತಂತ್ರ್ಯ ಚಳುವಳಿಯನ್ನು ವಿಭಾಗಿಸಿದರೆಂದು ಹಾಗೂ ಅವರು ಬ್ರಿಟಿಷರ ಚಮಚ ಎಂದು ಆರೋಪಿಸುತ್ತಾರೆ..."ಅಂಬೇಡ್ಕರ್‌ರವರಿಗೆ ಅವರ ಹಿತವಚನವೆಂದರೆ, "ಅಸ್ಪೃಶ್ಯರದ್ದು ಆಂತರಿಕ ಸಂಗತಿಯಾಗಿದ್ದು ಸ್ವಾತಂತ್ರ್ಯ ಸಿಗುವವರೆಗೂ ಕಾಯಬೇಕೆಂದು ಒತ್ತಾಯಿಸುತ್ತಾರೆ" (ದಿವಾಕರ್ ಮತ್ತು ಮ್ಯಾಥ್ಯೂ 2001:3) ಇದೇ ಸರಣಿ ಮುಂದುವರೆಯುತ್ತದೆ. ಇದೊಂದು ಕಾಯುವಿಕೆಯ ರಾಜಕಾರಣ. ಅಂದರೆ ಸೂಕ್ತ ಅವಕಾಶಗಳ ರಾಜಕಾರಣ. ಇಲ್ಲಿರುವ ವಾದವೆಂದರೆ ಜಾತಿಯೆನ್ನುವುದೊಂದು ಆಂತರಿಕ ವಿಷಯವಾಗಿದ್ದು, ಅದರ ಬಗ್ಗೆ ಮಾತನಾಡುವುದು ವಿಂಗಡಣೆಯ ಮೂಲವಾಗುತ್ತದೆ. ಮತ್ತು ಕಿರಿಕಿರಿಯನ್ನುಂಟು ಮಾಡುತ್ತದೆ. ಆದರೂ ಅದಕ್ಕೆ ಸೂಕ್ತ ಸಮಯವಾಗಿರಲಿಲ್ಲ.

ದಲಿತರ ವಾದವೆಂದರೆ ಜಾತಿಯನ್ನು ಜನಾಂಗವೆಂದು ನಿರೂಪಿಸುತ್ತಿರುವುದರ ವಿರುದ್ಧದ ಪ್ರಸ್ತುತ ಪ್ರತಿರೋಧಗಳು ಹಾಗೂ ಡರ್ಬನ್ ಜನಾಂಗ ಸಮಾವೇಶದಲ್ಲಿ ಅದರ ಬಗ್ಗೆ ಚರ್ಚಿಸುವ ಪ್ರಯತ್ನದಲ್ಲೂ ಆ ಹಿಂದಿನ ತರಹದ ರಾಜಕಾರಣವೇ ಇದೆ. ಅದರೊಡನೆ ಅದು ಸರಿಯಾದ ರಾಜಕೀಯ ಅಂದರೆ ಒಳಿತಿನ ಪ್ರಜ್ಞೆಯನ್ನು ಕೆಡಿಸುತ್ತದೆ. ನೌಕರಶಾಹಿಗಳು ತಮ್ಮೊಳಗೆ ಕುದಿಯುತ್ತಿರಬಹುದು. "ನಾವು ಮತ್ತು ನಮ್ಮ ಪತ್ನಿಯರು ಡರ್ಬನ್‌ಗೆ ಹೋಗಲು ಕಾಯುತ್ತಿರುವ ಸಂದರ್ಭವನ್ನು ಊಹಿಸಿ...ಅಂತರಾಷ್ಟ್ರೀಯವಾಗಿ ಜಾತಿ ಬಗೆಗಿನ ದೃಶ್ಯಾವಳಿಯನ್ನೊಮ್ಮೆ ಊಹಿಸಿಕೊಳ್ಳಿ". ನಮ್ಮ ಮನೆಯ ಕೊಳಕು ಬಟ್ಟೆಯನ್ನು ಡರ್ಬನ್‌ನಲ್ಲಿ ತೊಳೆಯುವುದೊಂದು ಗೊಂದಲಮಯ ಸಂಗತಿ.

ತಮ್ಮ ಪ್ರಸ್ತುತ ರಾಜಕಾರಣಕ್ಕೆ ದಲಿತ ಕಾರ್ಯಕರ್ತರು, ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್‌ರವರು ತೆಗೆದುಕೊಂಡು ನಾಟಕೀಯ ನಿಲುವನ್ನಾಧರಿಸಿ ನಿರೂಪಿಸಲು ತೊಡಗುತ್ತಾರೆ. ಉದಾಹರಣೆಗೆ : ಪಾಲ್‌ದಿವಾಕರ್ ಹಾಗೂ ಅಜಯ್ ಮ್ಯಾಥ್ಯೂ ಗಮನಿಸುವ ಪ್ರಕಾರ, "ಜಾತಿ ತಾರತಮ್ಯಕ್ಕೆ ಪರಿಹಾರಗಳ ಸೀಮಾರೇಖೆಯನ್ನು ಗ್ರಾಮ, ಜಿಲ್ಲೆ, ರಾಜ್ಯ ಅಥವಾ ರಾಷ್ಟ್ರದ ಸುತ್ತ ಎಳೆಯಲು ಸಾಧ್ಯವಿಲ್ಲವೆಂದು ಅಂಬೇಡ್ಕರ್‌ರವರು ತೋರಿಸಿದ್ದಾರೆ. ಯಾವುದು ಆಂತರಿಕ ಅಥವಾ ಬಾಹ್ಯ ಪರಿಹಾರವೆಂಬುದನ್ನು ಭೌಗೋಳಿಕ ಗಡಿ ಅಥವಾ ರಾಷ್ಟ್ರೀಯ ಸೀಮಾರೇಖೆಗಳಲ್ಲಿ ನಿರ್ಧರಿಸಲಾಗದು. ಪರಿಹಾರವೊಂದು ಆಂತರಿಕ ವಾಗುವುದು. ಅದು ಅಲ್ಲಿನ ಪ್ರಜಾಸತ್ತಾತ್ಮಕ ಸಂವಿಧಾನಬದ್ಧ ಹಾಗೂ ಕಾನೂನು ಅವಕಾಶಗಳನ್ನು,

ಮಂಡಲಿಗಳು...ಇನ್ನಾವುದೇ ವಿಧಾನಗಳನ್ನು ರಾಜ್ಯಾಂಗ ತನ್ನ ಸ್ವ-ಇಚ್ಛೆಯಿಂದ ನಿಗದಿಪಡಿಸಿದ್ದನ್ನು ಬಳಸಿಕೊಂಡಾಗ, ವಿಶ್ವಸಂಸ್ಥೆಯ ಜನಾಂಗೀಯತೆಯ ವಿರುದ್ಧದ ಈ ಸಮಾವೇಶವು ಭಾರತಕ್ಕೆ ಸಂಬಂಧಿಸಿದಂತೆ ಒಂದು ಆಂತರಿಕ ವಿಧಾನವೇ ಆಗಿದೆ. ಏಕೆಂದರೆ 1969ರಲ್ಲಿ ಭಾರತ ಮುಕ್ತವಾಗಿ CERDಯನ್ನು ಒಪ್ಪಿಕೊಂಡಿದೆ. ಆದ್ದರಿಂದ ಅದಕ್ಕೆ ರಾಷ್ಟ್ರೀಯ ನಿಬಂಧನೆ ಇದೆ. ಭಯೋತ್ಪಾದನೆ ಅಥವಾ ಇತರ ಪ್ರಜಾಸತ್ತಾತ್ಮಕವಲ್ಲದ ವಿಧಾನಗಳು ಬಾಹ್ಯ ಪರಿಹಾರಗಳಾಗುತ್ತವೆ. ಆದ್ದರಿಂತ ಜಾತಿ ತಾರತಮ್ಯದ ಸಮಸ್ಯೆಯನ್ನು CERD ಮತ್ತು WEARಗಳಲ್ಲಿ ಎತ್ತುವುದು ಬಾಹ್ಯ ಪರಿಹಾರವೇನೂ ಅಲ್ಲ. ಇದೊಂದು ಸಂವಿಧಾನಾತ್ಮಕ, ಕಾನೂನಾತ್ಮಕ ಮತ್ತು ಪ್ರಜಾಸತ್ತಾತ್ಮಕ ಸಾಧನವಾಗಿದ್ದು, ದಲಿತರು ಮತ್ತು ಇತರ ತಾರತಮ್ಯಗಳಿಗೊಳಗಾಗಿರುವ ಸಮುದಾಯಗಳು ಕಾನೂನನ್ನು ಮತ್ತಷ್ಟು ಸಶಕ್ತಗೊಳಿಸುವುದೇ ಅದರ ಉದ್ದೇಶವಾಗಿದೆ. ಆದರೆ ಆ ಕಾನೂನು ಇಲ್ಲಿಯ ತನಕ ಅವರಿಗೆ ರಕ್ಷಣೆ ನೀಡಲು ಸೋತಿತ್ತು. ಈಗ ಅಂತರಾಷ್ಟ್ರೀಯ ಮಾನವ ಹಕ್ಕುಗಳ ವಿಧಾನಗಳನ್ನು ಬಳಸುವುದರಿಂದ ಆಯಾ ಸರ್ಕಾರಗಳು ಮತ್ತಷ್ಟು ಬಲಗೊಂಡು, ತಮ್ಮ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಕರ್ತವ್ಯಗಳನ್ನು ಪೂರೈಸುವುದರ ಮೂಲಕ ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡಿದಂತಾಗುತ್ತದೆ. ಅಲ್ಲದೆ, ಸಂವಿಧಾನಾತ್ಮಕ ಆದರ್ಶಗಳನ್ನು ಈಡೇರಿಸಲು ರಾಷ್ಟ್ರ ಮತ್ತೊಮ್ಮೆ ಪಣ ತೊಟ್ಟಂತಾಗುತ್ತದೆ. (ದಿವಾಕರ ಮತ್ತು ಮ್ಯಾಥ್ಯೂ 2001:10)

ಆದರೂ ಈ ವಾದ ಜಾಗತಿಕವಾಗಿ ಸರಳವಾಗಿದೆಯಾ? ಉದಾಹರಣೆಗೆ, ದಲಿತರ ಒಳಿತನ್ನು ಬಯಸುವವರು ಅವರ ವಿರುದ್ಧ ತಿರುಗಿಬಿದ್ದರೆ, ಅವರ ಪ್ರತಿಕ್ರಿಯೆ ಹೇಗಿರುತ್ತದೆ? ದೇಶದೊಳಗೆ ಇರುವ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಒಂದು ಪರಿಹಾರವನ್ನು ಕಂಡುಕೊಳ್ಳಬಹುದಿತ್ತಲ್ಲವೇ? ಈ ಪ್ರಶ್ನೆಗಳಿಗೆ ಎಷ್ಟು ಸಂವಾದ ಸಾಧ್ಯ ಎಂಬುದೇ ಆ ಪ್ರಸ್ತುತ ವಾದಗಳೊಳಗಿನ ಸಾಧ್ಯತೆಯನ್ನು ತೋರುತ್ತದೆ. ಎರಡೂ ಕಡೆಗಳಿಂದಲೂ ಇರುವ ಅಪಾಯವೆಂದರೆ ಕೋಮುವಾದಿ ಅತವಾ ಮೂಲಭೂತವಾದಿಯಾಗುವ ಸಾಧ್ಯತೆ. ರಾಜಕೀಯ ದೃಷ್ಟಿಯಲ್ಲಿ ಹೇಳುವುದಾದರೆ ಈ ಡರ್ಬನ್ ಸಮಾವೇಶ ಹೊಸ ಸುಧಾರಣೆಯತ್ತ ಸಾಗುವುದೇ ಅಥವಾ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ, ಮೂಲಭೂತವಾದ, ಕಟಾಚಾರ ಪ್ರವೃತ್ತಿ ಅಥವಾ ಅಪಾರ್ಥಗಳಿಗೆಡೆಮಾಡುವುದೇ? ಇಲ್ಲ ಮತ್ತೊಂದು ಆಸಕ್ತಿಯ ಪ್ರಶ್ನೆಯೆಂದರೆ ಡರ್ಬನ್‌ನ ನಂತರದಲ್ಲಿ ಯಾವ ಸಂದರ್ಭವಿರುವುದು? ಅದು ಕೇವಲ ಶೂನ್ಯ ರಾಜಕಾರಣವೇ? ಎನ್‌ಜಿಓ ಪ್ರೇರಿತ ಕಾರ್ಯಕರ್ತರು ಮತ್ತು ಚುನಾವಣಾ ಕ್ಷೇತ್ರದಲ್ಲಿರುವ ದಲಿತರ ಮಧ್ಯೆ ಇರುವ ಸಂಬಂಧವೇನು? ಸರ್ಕಾರವನ್ನು ಬೆಂಬಲಿಸುವ ದಲಿತರೊಡನೆ ಹೇಗೆ ಸಂಪರ್ಕವಿಟ್ಟುಕೊಳ್ಳುವುದು? ಅವರು ಅಂಕಲ್ ಟೋಮ್ ಅಥವಾ ಅವರ ರಾಜಕಾರಣ ಪ್ರಮಾಣಿಕ ಪ್ರಾಮಾಣಿಕವಾದುದೇ?

ಈ ಪ್ರಶ್ನೆಗಳಿಗೆ ಉತ್ತರಿಸುವುದು ಹೇಗೆ? ಅಧಿಕೃತ ಮಾರ್ಗವನ್ನೇ ಅನುಸರಿಸಿ ಕಾಯುವ ರಾಜಕಾರಣವನ್ನೇ ನಂಬಬೇಕೇ? ಅಥವಾ ಹೊಸದಾಗಿ ಕಂಡುಕೊಂಡಿರುವ ಉತ್ಸಾಹದಲ್ಲಿ ಇವೆಲ್ಲ ವಿಜ್ಞಾನ ಅಥವಾ ಜೀವಶಾಸ್ತ್ರ ಅಲ್ಲ, ಬದಲು ರಾಜಕಾರಣವನ್ನು ಮಾತ್ರ ಒತ್ತಾಯಿಸಬೇಕೆ? ಅಂದರೆ ರಾಜಕಾರಣ ಅನಕ್ಷರತೆಯೆಂದು ಅರ್ಥೈಸಬೇಕೆ? ಭಾರತೀಯ ಸರ್ಕಾರಕ್ಕೆ ಇದೇನಾದರೂ ಆಂತರಿಕ ವಿಷಯವೆಂದಾದಲ್ಲಿ, ಅದು ರಾಷ್ಟ್ರಮಟ್ಟದಲ್ಲಿ ಸಂವಿಧಾನ ಪರಾಮರ್ಶೆ ನಡೆದು, ಜೀತ ಪದ್ಧತಿಯ ಬಗ್ಗೆ ಒಂದು ವರದಿಯನ್ನಾದರೂ ತಪ್ಪೊಪ್ಪಿಗೆಯಾಗಿ ಹೊರ ತರಬಹುದೇ? ಸಮಾಜ ವಿಜ್ಞಾನಿಗಳ ಗುಂಪು ಅಥವಾ ಯಂತ್ರಜ್ಞರು ಕಸ ಎತ್ತುವ ಸಂಗತಿಯಲ್ಲಿ ತೊಡಗಿಸಿಕೊಂಡಿರುವರೇ? ಹಾಗಾದರೆ ಅದರರ್ಥವೇನು? ಜಾತಿಯನ್ನು ಆಂತರಿಕ ವಿಷಯವೆಂದು ಹೇಳಿದಷ್ಟಕ್ಕೆ ಜವಾಬ್ದಾರಿಯಿಂದ ಮುಕ್ತರಾಗಬಹುದೇ? ರಾಜ್ಯಾಂಗ ಮತ್ತು ನಾಗರೀಕ ಸಮಾಜವಾದ ನಾವು, ಯಾವುದಾದರೂ ಒಂದು ವಿಷಯಕ್ಕೆ ಅಂದರೆ ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡಲಿ ಕಂಕಣಬದ್ಧರಾಗಿದ್ದೇವೆಯೇ? ಇಂಥ ಕಲ್ಪನೆಯು ಮಲ ಹೊರುವ ಪದ್ಧತಿಯ ಸುಧಾರಣೆಯತ್ತ ಸಾಗಿ, ದಲಿತ ದೃಷ್ಟಿಕೋನವನ್ನು ತೆಗೆದುಕೊಂಡು ಹೊಸ ನಗರ ವ್ಯವಸ್ಥೆಯತ್ತ ಸಾಗಬಹುದೇ?

> 'ಹುಟ್ಟು' ಎನ್ನುವುದು ರಕ್ತ ಮತ್ತು ರಕ್ತ ಸಂಬಂಧಗಳನ್ನು ಕುರಿತದ್ದು. ಅದು ಅನುವಂಶೀಯವಾದುದು. ಜಾತಿ ಈ ಪರಿಭಾಷೆಯಿಂದಲೇ ಜನಾಂಗದೊಂದಿಗೆ ಸಾಮ್ಯತೆಯನ್ನು ಹೊಂದುವುದು. ಅಡ್ವೋಕಸಿ ಅಪ್‌ಡೇಟ್ ಅದಕ್ಕೆ ಜನಪದೀಯ ಸಿದ್ಧಾಂತವಾದ ಬಣ್ಣವನ್ನು ಸೇರಿಸುತ್ತದೆ. ಆದ್ದರಿಂದ, ರಕ್ತವು ವರ್ಣಸಿದ್ಧಾಂತದಲ್ಲಿಯಷ್ಟೇ ಇರುವುದಲ್ಲದೆ, ಆರ್ಯ ಮತ್ತು ದ್ರಾವಿಡ ಜನಾಂಗಗಳ ಪರಿಭಾಷೆಗಳಲ್ಲೂ ಇದೆ. ಅದರ ಪ್ರಕಾರ 'ವರ್ಣ ಎಂದರೆ ಬಣ್ಣ'-ಹಾಗೂ 'ವರ್ಣವ್ಯವಸ್ಥೆಯು ಮೂಲ ಚರ್ಮದ ಬಣ್ಣವನ್ನು ಆಧರಿಸಿದೆಯೆಂದು ಕಾಣುತ್ತದೆ. ಕ್ರಮೇಣ ಅದು ಅಂತರ್‌ವಿವಾಹ ಮತ್ತು ರಕ್ತ ಬೆರೆತು ತಳಿ ಮತ್ತು ರಕ್ತವಾಗಿ ಪರಿವರ್ತನೆಗೊಳ್ಳುತ್ತದೆ. ದಕ್ಷಿಣ ಭಾರತದಲ್ಲಿ, ಇತರ ಭಾಗಗಳನ್ನು ಹೊರತುಪಡಿಸಿ ಇರುವ ನಂಬಿಕೆಯೆಂದರೆ ಇಲ್ಲಿನ ಜನರೆಲ್ಲ ದ್ರಾವಿಡ ಜನಾಂಗವಾಗಿದ್ದಾರಲ್ಲದೆ ಆರ್ಯನ್ನರು ಅಲ್ಲ. ಆರ್ಯನ್ನರ ಅಧಿಕಾರದ ವಿರುದ್ಧ ದಕ್ಷಿಣದಲ್ಲಿ ತೀವ್ರವಾದ ರಾಜಕೀಯ ಆಂದೋಲನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಜಾತಿ ಆಧಾರಿತ ತಾರತಮ್ಯವು ಜನಾಂಗೀಯವೆಂದು ಕರೆಯಬಹುದಾಗಿದೆ"

ಇಲ್ಲೊಂದು ಪ್ರಾಕ್ಟಿಕಲ್ ಪ್ರಶ್ನೆಯಿದೆ. ಈ ಆಂದೋಲನ ಯಶಸ್ವಿಯಾಗುವುದೇ? ಅದಕ್ಕೊಂದು ಪ್ರತಿರೋಧ ವ್ಯಕ್ತವಾದರೆ? ಈ ಸಂದರ್ಭದಲ್ಲೇ ಅದರ ಯಶಸ್ಸಿನ ಬಗ್ಗೆ ಸಂದೇಹ ತಾಳುವುದು. ಒಂದು ಮಟ್ಟದಲ್ಲಿ ಅದನ್ನು ದಲಿತರ ಸಾಂಕೇತಿಕ ರಾಜಕಾರಣವನ್ನಾಗಿ ನೋಡಬಹುದು. ಜಾಗತಿಕ ಪ್ರಪಂಚದಲ್ಲಿ ಸಂಕೇತಗಳು ಬಹಳ ಮುಖ್ಯ. ಸಾಂಕೇತಿಕವಾಗಿಯಾದರೂ ಜಾತಿಯನ್ನು ಜನಾಂಗದೊಳಗೆ ಸೇರಿಸಿದಲ್ಲಿ, ಅದೇ ಗೆಲುವಾಗುತ್ತದೆ. ಯಾವ ರೀತಿಯ ಗೆಲುವಾಗುತ್ತದೆ.

ಇದಕ್ಕೆ ಅನೇಕ ರೀತಿಗಳಲ್ಲಿ ಉತ್ತರಗಳನ್ನು ನೀಡಬಹುದಾಗಿದೆ. ಕೇವಲ ಮಾಹಿತಿಯ ಮಟ್ಟದಲ್ಲಿ ಕಾಣುವುದಾದರೆ ದಲಿತ ರಾಜಕಾರಣಿಗಳು ನಮ್ಮ ಮಹತ್ವದ ಆಧುನಿಕರಷ್ಟೇ ಅಲ್ಲ, ಅವರು ನಮ್ಮ ಜಾಗತಿಕ ವ್ಯಕ್ತಿಗಳೂ ಹೌದು. ಗ್ರಾಮವು ಹಿಮ್ಮುಖ ಚಲನೆಯ ಕೊಳೆತುನಾರುವ ಕೂಪವಾಗಿದೆ ಮತ್ತು ಬೋನಾಗಿದೆ ಎಂದು ಹೇಳಿದ ಅಂಬೇಡ್ಕರವರ ಮಾತನ್ನು ಗಾಂಧೀಜಿಯ ಗ್ರಾಮವ್ಯಾಖ್ಯೆಯೊಡನೆ ಹೋಲಿಸಿ ಯೋಚಿಸಿ ನೋಡಿ. ಹಾಗೆಯೇ ಮೈಖಲ್ ಇಗ್ನಾಟಿಫ್ ಹಾಗೂ ಮಾರ್ತಾ ನಸೆಬಮ್‌ರವರು ಕರೆಯುವ ನಾಗರೀಕ ಅಂತರಾಷ್ಟ್ರೀಯ ವಾದಕ್ಕೆ ಅಪೀಲು ಸಲ್ಲಿದವರಲ್ಲಿ ದಲಿತರೇ ಮೊದಲಿಗರು. ಈ ಅಪೀಲಿನಲ್ಲಿರುವ ನೈತಿಕತೆಯ ಜವಾಬ್ದಾರಿಯು ರಾಜ್ಯಾಂಗವನ್ನು ದಾಟಿ ಅಂತರಾಷ್ಟ್ರೀಯ ನಾಗರೀಕ ಸಮಾಜದೆಡೆ ಸಾಗುತ್ತದೆ. ಅಂಥ ನಾಗರೀಕ ಅಂತರಾಷ್ಟ್ರೀಯವಾದ ಅಗತ್ಯವಾಗಿದ್ದು ಇಂಡಿಯಾಕ್ಕೆ ಕನ್ನಡಕವಾಗುತ್ತದೆ. ಅಲ್ಲದೆ ಅನಿವಾಸಿ ಭಾರತೀಯರ ಭಾವನಾತ್ಮಕ ರಾಷ್ಟ್ರ ಕಲ್ಪಿಸಿದೆ ಅಥವಾ ಯಾಂತ್ರಿಕ ಜಾಗತೀಕರಣಕ್ಕೆ ಪ್ರತಿ-ಸಂಸ್ಕೃತಿಯೂ ಆಗುತ್ತದೆ. ಈ ನಾಗರೀಕ ಅಂತರಾಷ್ಟ್ರೀಯವಾದವು ಮಲ ಹೊರುವಿಕೆ, ಜೀತ ಮುಂತಾದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತದೆಯಾದರೆ, ಅನಿವಾಸಿ ಭಾರತೀಯರು ತೊಡಗಿಸಿಕೊಂಡಿರುವುದಕ್ಕಿಂತಲೂ ಭಿನ್ನವಾಗುತ್ತದೆ. ಕಷ್ಟದ ಬಗೆಗಿನ 'ಉಪ ಸಂಸ್ಕೃತಿ' ಚಿಂತನೆಯಾದ ಅನಿವಾಸಿಯರ ಆಲೋಚನೆಯು ನಿರ್ವಚನಾ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.

ಜಾಗತೀಕರಣ ಮತ್ತು ಹಕ್ಕುಗಳ ರಾಜಕಾರಣದ ನಡುವಿನ ಸಂಬಂಧವನ್ನು ದಲಿತರೇ ಮೊದಲಿಗೆ ಕಂಡುಕೊಂಡದ್ದು. ದಲಿತರ ಇಂಥ ಪ್ರಯತ್ನಗಳು ವ್ಯಾವಹಾರಿಕ ದೃಷ್ಟಿಯಿಂದ ಕೂಡಿವೆಯಾದರೂ, ಮಾನವ ಹಕ್ಕುಗಳ ಶಕ್ತಿಯನ್ನು ಮತ್ತು ಅದರ ಅಂತರಾಷ್ಟ್ರೀಯ ವ್ಯಾಪ್ತಿಯನ್ನು ದಲಿತರು ಗುರುತಿಸಿದ್ದಾರೆ. ನೋರ್ಬಟ್ ಬೊಬ್ಬಿಯೋ ಮಾನವ ಹಕ್ಕುಗಳ ಬಗ್ಗೆ ಹೇಳುವ ಅಭಿಪ್ರಾಯಗಳಲ್ಲಿ ದಲಿತರ ಆಲೋಚನೆಯು ಪ್ರತಿಧ್ವನಿಸುತ್ತದೆ: "ಈ ಆಲೋಚನೆಯು ಮಹತ್ವಕಾಂಕ್ಷೆಯ, ವೈಭವೋಪೇತ, ಕೇವಲ ಸಮಾಧಾನದ ಅಥವಾ ಕೃತ್ರಿಮ ಭರವಸೆಯೆಂದು ನನಗೆ ಗೊತ್ತಿಲ್ಲ; ಆದರೆ, ವಕ್ರಗೊಂಡ ದಿಮ್ಮಿಯ ಅಥವಾ ತಪ್ಪಾಗಿ ತಿಳಿದ ಪ್ರಾಣಿಯ ಕಲ್ಪನೆಯನ್ನು ತಿದ್ದಿಕೊಳ್ಳಲು ಇದು ನಿಮ್ಮನ್ನು ಆಹ್ವಾನಿಸುತ್ತದೆ. ಮತ್ತೊಂದೂ ವೈರುಧ್ಯಾತ್ಮಕ ವಿವರಣೆಗೆ ಎಡೆಯಿಲ್ಲ. ಮತ್ತು ಮಾನು ಮಹತ್ವಾಕಾಂಕ್ಷೆ, ಅದಕ್ಕೆ ಆತನ

ದುಸ್ಥಿತಿ ಹಾಗೂ ಆತನ ಭವ್ಯತೆಯ ಸಾಮರ್ಥ್ಯ ಕಾರಣವಾಗುತ್ತದೆ" (ಬೊಬ್ಬಿಯೋ 1996 :63)

ಆತನ ಪ್ರಕಾರ ಮಾನವ ಹಕ್ಕುಗಳು ಒಂದು ಮಹತ್ವದ ಕರೆಯನ್ನೀಯುತ್ತದೆ. ಇಲ್ಲಿರುವ ಪ್ರಶ್ನೆಯೆಂದರೆ ಈ ಕಾವ್ಯಾತ್ಮಕ ವಿಶ್ವವಾದವು ಜಾತಿ ನಿರ್ದಿಷ್ಟತೆಯ ಧ್ವನಿಯನ್ನು ಆಚರಿಸುತ್ತಿರುವ ಭಾರತಕ್ಕೆ ಎಚ್ಚರಿಕೆಯ ಶಕ್ತಿಯಾಗಬಹುದೇ? ಅಥವಾ ನಿರ್ದಿಷ್ಟತೆ ವಿಶ್ವಸ್ಥ ಮತ್ತು ಬಹುರೂಪಗಳನ್ನು ಅರ್ಥೈಸಲು ಅನೇಕ ಮತ್ತು ಬಹುಧ್ವನಿಗಳು ನಮಗೆ ಅಗತ್ಯವೇ? ಖಚಿತವಾಗುವ ಅಂಶವೆಂದರೆ ದಲಿತ ಭಾಷೆಗಿದು ತೀವ್ರವಾದ ಸವಾಲಾಗುತ್ತದೆ. ಅದರ ಏಕಾರ್ಥ ಸಾಮರ್ಥ್ಯವನ್ನು ಅದು ಬದಿಗೆ ಸರಿಸುವುದಾದರೂ ಹೇಗೆ? ಅಲ್ಲಿ ಎರಡು ಜವಾಬ್ದಾರಿಗಳಿವೆ. ಒಂದು, ವಿಶ್ವಸ್ಥ ವಾದಸರಣಿಯನ್ನು ಸಾಂದ್ರೀಕರಿಸುವುದು. ಎರಡು, ಹೀಗೆ ಮಾಡುವಾಗ ದಕ್ಷಿಣ ಏಶಿಯಾದ ಧ್ವನಿ ಮತ್ತು ಐಡೆಂಟಿಟಿಗೆ ಅವರು ಕೊಡುಗೆಯನ್ನೀಯುವುದು. ಹಾಗಾದಲ್ಲಿ ದಕ್ಷಿಣ ಏಶಿಯಾದ ಪರ್ಯಾಯಗಳು ಸಾಧ್ಯವೆನಿಸುತ್ತವೆ. ಅವರ ಆಕ್ರೋಶದಲ್ಲಿ ಈ ಸಮಸ್ಯೆಯ ಅಳಿವೂ ಇರುವುದು ಗೋಚರಿಸುತ್ತದೆ. ಮತ್ತೊಂದು ಪಾಂಡಿತ್ಯದ ಪ್ರಶ್ನೆ ಉದಾಹರಣೆಗೆ, ಮಕ್ವಾನ್‌ರವರ ಪ್ರಬಂಧದಲ್ಲಿ ಕಾಲದ ಕುರಿತಂತೆ ಗಾಢವಾದ ಸಮಸ್ಯೆಯಿದೆ. ಅವರು ರೈಸಾಲೀ (1915), ಮದ್ರಾಸ್ ಜನಗಣತಿ ವರದಿ (1911) ಹಾಗೂ ಇತ್ತೀಚಿನ ದಲಿತ ದೌರ್ಜನ್ಯಗಳನ್ನು ಪಟ್ಟಿಮಾಡುವಾಗ ಅವೆಲ್ಲವೂ ಅನಿರೀಕ್ಷಿತವೆಂಬಂತೆ ಕಾಣುತ್ತದೆ. ಅಡಿ ಟಿಪ್ಪಣಿಯಲ್ಲಿ ದಿನಾಂಕಗಳನ್ನು ಕೊಟ್ಟಿದ್ದರೂ ಸಹ ಏಕಕಾಲಿಕತೆಯು, ಬಹುಕಾಲಿಕತೆಯನ್ನು ಅಳಿಸಿ ಹಾಕುತ್ತದೆ. ಆದರೆ ಬಹುಕಾಲಿಕತೆಯು (ಡೈಕ್ರೊನಿ) ಬದಲಾವಣೆಯನ್ನು ಅರ್ಥೈಸಲು ಬಹುಮುಖ್ಯ. ಅಂದರೆ ಮೂಲಭೂತವಾಗಿ ವಿದ್ವಾಂಸರೊಡನೆ ಜಾತಿಯ ಬಗ್ಗೆ ಸಂವಾದ ಅವಶ್ಯವಿದೆ. ಪ್ರಸ್ತುತ ಸವಾಲುಗಳನ್ನು, ಮೆದುಧೋರಣೆ, ಚಲನೆ ಮತ್ತು ಜಾತಿಯರಾಜಕೀಯದ ಸಾಧ್ಯತೆಗಳನ್ನು ದಲಿತರು ಅರ್ಥೈಸುವಾಗ ಮತ್ತಷ್ಟು ಚರ್ಚೆ ಅಗತ್ಯವಾಗುತ್ತದೆ. ದಲಿತ ಓದು ವ್ಯಾಪಕವಾದ ಸಾಮಾಜಿಕ ವಿಜ್ಞಾನ ಮತ್ತು ನಾಗರಿಕತೆಯ ಓದುಗಳಲ್ಲಿ ನೆಲೆಯೂರಬೇಕಾಗುತ್ತದೆ. ಮಂಡಲಿಸ್ಟ್ ಚೌಕಟ್ಟಿನ, ಬೌದ್ಧಿಕತೆಯು ವಿರೋಧದಲ್ಲಿ ದಲಿತ ವಿಚಾರಧಾರೆ ಸಿಕ್ಕಿಕೊಳ್ಳಬಾರದು. ಅದು ಮುಚ್ಚಿದ ವಾಸ್ತವಗಳ ಬಗ್ಗೆ ಮಾತನಾಡುವಾಗಲೂ ತೆರೆದ ಮನಸ್ಸಿನಿಂದಿರುವುದು ಮುಖ್ಯವಾಗುತ್ತದೆ.

ಎರಡನೆಯ ಉದಾಹರಣೆಯನ್ನೀಗ ಪರಿಗಣಿಸೋಣ. ಅಡ್ವೋಕೆಸಿ ಅಪ್‌ಡೇಟ್ ದಲಿತ ಪದವನ್ನು ನೋವಿನ ರಾಜಕಾರಣದಿಂದ ತೆಗೆದುಕೊಳ್ಳುತ್ತದೆ. ಆದರೆ ಗೋಪಾಲ್‌ಗುರು (1998) ಅಂಥ ಹೆಸರಿಸುವ ರಾಜಕಾರಣ ಅರ್ಥೈಸಲಿ ಸಾಲದೆಂದು ಹೇಳುತ್ತಾರೆ. ದಲಿತ ಎನ್ನುವ ವರ್ಗೀಕರಣವು ಅನೇಕ ವ್ಯತ್ಯಾಸಾತ್ಮಕ ಪಯಣದಲ್ಲಿ ತೊಡಗಿದೆ. ಪ್ರತಿಯೊಂದು ನಾಮಕರಣದ ಘಟನೆಯೂ ಸಹ ಸಾಮಾಜಿಕ ಮತ್ತು ರಾಜಕೀಯ ಸಂದರ್ಭವನ್ನು ಒಳಗೊಂಡಿರುವುದರಿಂದ ಆ ವರ್ಗೀಕರಣವು ಹೇಗೆ ಬಂದಿದೆಯೆಂಬುದನ್ನು ಅರ್ಥೈಸಬೇಕಾಗುತ್ತದೆ.

ಅದರ ಚಾರಿತ್ರಿಕ ಪಯಣವು ಆರಂಭವಾಗುವುದು ಮೇಲ್ಜಾತಿ ಸುಧಾರಕರಿಂದ. ಉದಾಹರಣೆಗೆ ಎಸ್.ಎಂ. ಮತ್ ಅಸ್ಪೃ (ಮುಟ್ಟಲಾಗದ) ಉಪಯೋಗಿಸದರೆ, ವಿ. ಆರ್ ಸಿಂಧೆ 'ನಿಮ್ನ ವರ್ಗಗಳು' ಎಂಬುದನ್ನು ಉಪಯೋಗಿಸುತ್ತಾರೆ. ಅನಂತರದಲ್ಲಿ ಗಾಂಧೀ 'ಹರಿಜನ' ಪದವನ್ನು ಪರಿಚಯಿಸುತ್ತಾರೆ. ಅಂಬೇಡ್ಕರ್‌ರವರು ದಲಿತ ಪದವನ್ನು ಮೊದಲಿಗೆ ಉಪಯೋಗಿಸಿದ್ದು ತಮ್ಮ ಬಹಿಷ್ಕೃತ ಭಾರತದಲ್ಲಿ. ಆದರೂ ಅವರು ಬೇರೆ ಬೇರೆ ಪದಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸುತ್ತಾರೆ. ಅದೊಂದು ಪ್ರಕ್ರಿಯಾತ್ಮಕ, ಜ್ಞಾನ ಮಿಮಾಂಸಾ ಮತ್ತು ರಾಜಕೀಯ ಪ್ರಯೋಗಶೀಲತೆಯಿಂದ ಕೂಡಿತ್ತಲ್ಲದೆ, ಐಡೆಂಟಿಟಿ ಮತ್ತು ಹಂಚಿಕೆಯ ರಾಜಕೀಯವನ್ನು ಮಾಡುವ ಪ್ರಯತ್ನವಾಗಿತ್ತು. ಅನಂತರದಲ್ಲಿ ದಲಿತ ಪರಿಕಲ್ಪನೆಯು ಒಳಗೊಳ್ಳುವ ಜಾತಿ, ವರ್ಗ ಮತ್ತು ಲಿಂಗತ್ವ ಐಡೆಂಟಿಟಿಗಳನ್ನು ಮೇಳೈಸುವ ಪ್ರಯತ್ನ ಕಾಣುತ್ತದೆ. ಅದೊಂದು ಸಮರ್ಪಕ ರೂಪಿಕೆಯಾದದ್ದು ರಾಜ್ಯಾಂಗ ಘೋಷಿತ ಅಕರ್ಮಕ ವರ್ಗೀಕರಣಗಳಿಂದಾಚೆಗೆ ಸಾಗುತ್ತದೆ. ಇಂಥ ರಾಜಕೀಯಕೃತ ಪಯಣವು ಅಡ್ವೋಕೆಸಿ ಅಪ್‌ಡೇಟ್‌ನಲ್ಲಿ ಕಾಣಸಿಗುವುದಿಲ್ಲ.

ಡರ್ಬನ್‌ಗುರಿ ಸಾಧ್ಯವಾಗದಿದ್ದರೂ ಸಹ ದಲಿತ ಚಳುವಳಿಯು ಮತ್ತೊಂದು ಸಾಂಕೇತಿಕ ಭೌಗೋಳಿಕತೆಯನ್ನು ಸೃಷ್ಟಿಸುವ ಮೂಲಕ ಒಂದು ನಾಟಕೀಯ ಗುಣವನ್ನು ಪಡೆಯುತ್ತದೆ. ಈ ನಾಟಕದಲ್ಲಿ ರಾಜ್ಯಾಂಗ ಮತ್ತು ದಲಿತರ ಮಧ್ಯೆ ವೈರುಧ್ಯವಿದ್ದರೂ, ಅಲ್ಲಿ ಮೂರನೇ ಪರಿಕಲ್ಪನೆಯೂ ಇದೆ. ಅದೇ ವೀಕ್ಷಕನಾಗಿರುವ ಭಾರತೀಯ ಪ್ರಜೆ. ನನ್ನ ಪ್ರಕಾರ ದಲಿತ ಪ್ರಣಾಳಿಕೆಗಳು ಕೇವಲ ಕಾನೂನಾತ್ಮಕ, ರಾಜಕೀಯ ಪ್ರಣಾಳಿಕೆಗಳಾಗದೆ, 'ಜಾತ್ಯಾತೀತ ಪ್ರಾರ್ಥನೆ'ಯಾಗಿ ನಾವು ಕಾಣಬೇಕಾಗುತ್ತದೆ. ಏನನ್ನು ಭಿನ್ನಧಾರೆಗಳೆಂದು ಓದುತ್ತೇವೋ ಅವನ್ನು ಐಕ್ಯತೆಯ ಪ್ರಯತ್ನಗಳೆಂದೂ ಗುರುತಿಸಬೇಕಾದರೆ ನಾವು ಸರ್ಕಾರ ಮತ್ತು ದಲಿತರ ಮಧ್ಯೆ ಪ್ರವೇಶಿಸಿ, ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಪ್ರತಿರೋಧದ ರಾಜಕಾರಣವನ್ನು ಮಾಡುತ್ತಾ ದಲಿತರೂ ಮುಸ್ಲಿಮರಂತೆ ಸಾಕಷ್ಟು ಪಡೆದಿದ್ದಾರೆಂದು ಮಾಡಿದಲ್ಲಿ ಅದೊಂದು ದುರಂತವೇ ಸರಿ. ಈ ದುರಂತವು ಕೇವಲ ದರ್ಬನ್‌ನ ಆಟದ ಮೈದಾನದಲ್ಲಷ್ಟೆ ಇರದೆ, ಭಾರತದ ಪ್ರತಿಯೊಂದು ನಗರದಲ್ಲೂ ಇದೆ. ಡರ್ಬನಿಗೆ ಹೋಗುವುದರ ಮೂಲಕ ಒಬ್ಬರು ಗಾಂಧಿಯ ನಂತರದ, ಅಂಬೇಡ್ಕರ್‌ರವರ ನಂತರದ ರಾಜಕಾರಣವನ್ನು ಮರುಶೋಧಿಸಬಹುದೇನೋ. ದಲಿತ ಆಂದೋಲನವು ಇದನ್ನು ಪ್ರಚೋದಿಸುತ್ತದೆಯಾದರೆ ಸದ್ಯಕ್ಕೆ ಸಾಕೆಂದು ಭಾವಿಸಬಹುದು.

(ಮಾರ್ಟಿನ್ ಮಕ್ವಾನಾ, ಗೋಪಾಲ್‌ಗುರು, ಪ್ರಕಾಶಂ, ಲೂವಿಸಾ ಹಾಗೂ ಚಂದ್ರಿಕಾ ಪಾರಮರ್ ಇವರೊಡನೆ ಮಾಡಿದ ಸಂಭಾಷಣೆ, ನೀಡಿದ ಸೂಚನೆಗಳು, ಜಗಳಗಳು ಮತ್ತು ದಾಖಲೆಗಳಿಗೆ ನಾನು ಋಣಿಯಾಗಿದ್ದೇನೆ).

(ಸೌಜನ್ಯ : ಇ.ಪಿ.ಡಬ್ಲ್ಯೂ)

ವಿವೇಕಾನಂದರ ಹಿಂದೂ ಧರ್ಮ



"ನಾನು ಹಿಂದೂ ದೇಶದಲ್ಲಿ ಅನೇಕ ಮಂದಿ ಧಾರ್ಮಿಕ ಆಷಾಡಭೂತಿಗಳನ್ನು ನೋಡಿದ್ದೇನೆ. ಅವರು ಇರುವೆಗಳಿಗೆ ಸಕ್ಕರೆಯನ್ನು ಹಾಕುತ್ತಾರೆ. ಆದರೆ ತುಚ್ಛವಾದ ಹಣದಾಸೆಗೆ ತಮ್ಮ ಸಹೋದರನ ರಕ್ತ ಹೀರಲು ಹಿಂದೆ ಮುಂದೆ ನೋಡುವುದಿಲ್ಲ."

* * *

"ಕರ್ಮ ಎಂದರೆ ಇತರರ ಸೇವೆ ಮಾಡುವುದಕ್ಕೆ, ಅವರನ್ನು ಪ್ರೀತಿಸುವುದಕ್ಕೆ ನಾವು ಸತತ ಮಾಡುವ ಪ್ರಯತ್ನ"

* * *

"ಮಾನವನ ಸರ್ವ ಶ್ರೇಷ್ಠ ಪೂರ್ಣ ವಿಕಾಸ ತ್ಯಾಗವೊಂದರಿಂದಲೇ ಸಾಧಿತವಾಗುವುದು. ಯಾರು ಅನ್ಯರಿಗೋಸ್ಕರ ಎಷ್ಟೆಷ್ಟು ತ್ಯಾಗಮಾಡಬಲ್ಲರೋ ಅವರು ಮನುಷ್ಯರಲ್ಲಿ ಅಷ್ಟಷ್ಟು ಶ್ರೇಷ್ಠರಾಗುವರು. ಕೆಳಗಿನ ಮೆಟ್ಟಿಲಾದ ಪ್ರಾಣಿ ಜಗತ್ತಿನಲ್ಲಿ ಯಾವುದು ಎಷ್ಟೆಷ್ಟು ನಾಶಪಡಿಸಬಲ್ಲದೋ ಅದು ಅಷ್ಟು ಬಲಶಾಲಿಯಾದ ಮೃಗವಾಗುವುದು".

* * *

"ಬನ್ನಿ, ಮನುಷ್ಯರಾಗಿ ಪುರೋಹಿತರನ್ನು ಒದ್ದೋಡಿಸಿ, ಅವರು ಎಲ್ಲಾ ಪ್ರಗತಿಗೂ ವಿರೋಧವಾಗಿದ್ದಾರೆ. ಅವರೆಂದೂ ಬದಲಾಗುವುದಿಲ್ಲ. ಅವರ ಹೃದಯವೆಂದೂ ವಿಶಾಲವಾಗುವುದಿಲ್ಲ. ಅವರು ಶತಮಾನಗಳ ಮೂಢನಂಬಿಕೆಯ ಸಂತಾನ. ಮೊದಲು ಪುರೋಹಿತಶಾಹಿಯನ್ನು ಮೂಲೋಚ್ಚಾಟನೆ ಮಾಡಿ, ಬನ್ನಿ ಮನುಷ್ಯರಾಗಿ"

* * *

"ದೀನ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮ ಮೆಟ್ಟಿ ತುಳಿಯುವಂತೆ ಬೇರಾವ ಧರ್ಮವೂ ತುಳಿಯುವುದಿಲ್ಲ. ●

ಹಿಂದೂ ವಿವಾಹಗಳ ಸುತ್ತ ಮುತ್ತ

ಭಾರತೀಯರಲ್ಲಿ ಭಿನ್ನಗೋತ್ರ ವಿವಾಹವು, ಯಾರೂ ಉಲ್ಲಂಘಿಸುವ ಧೈರ್ಯ ತೋರದ ಒಂದು ನಂಬಿಕೆಯೆಂದು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಹೀಗಾಗಿ ಅವುಗಳೊಳಗೇ ಇರುವ ಜಾತಿಗಳ ಸ್ವಜಾತಿ ವಿವಾಹವು ಇದ್ದೂ ಕೂಡ ಭಿನ್ನಗೋತ್ರ ವಿವಾಹವನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲಾಗುತ್ತಿದೆ. ಭಿನ್ನಗೋತ್ರ ವಿವಾಹದ ನಿಯಮವನ್ನು ಮೀರಿದವರಿಗಿಂತ ಕಠಿಣತರವಾದ ದಂಡವನ್ನು ಸ್ವಜಾತಿ ವಿವಾಹದ ನಿಯಮವನ್ನು ಮುರಿದವರಿಗೆ ವಿಧಿಸಲಾಗುವುದು.

(ಹಿಂದಿನ ಸಂಚಿಕೆಯಿಂದ)

ಆದ್ದರಿಂದ, ಸ್ವಜಾತಿ ವಿವಾಹವು ಭಾರತೀಯರಿಗೆ ಹೊರಗಿನದೆಂಬ ಸಂಗತಿಗಿಂತ ಪ್ರಮುಖವಾಗಿ ನೀವು ನೆನಪಿಡಬೇಕಾದ್ದು ಬೇರಾವುದೂ ಇಲ್ಲ. ಭಾರತದ ಬೇರೆ ಬೇರೆ ಗೋತ್ರಗಳು ಭಿನ್ನ ಗೋತ್ರ ವಿವಾಹ ಪದ್ಧತಿಯವೇ ಆಗಿವೆ: ಕುಲದೇವತಾರಾಧನಾ ಸಂಸ್ಥೆಗಳಲ್ಲಿರುವ ಇತರ ಗುಂಪುಗಳೂ ಹೀಗೆಯೇ ಇವೆ. ಭಾರತೀಯರಲ್ಲಿ ಭಿನ್ನಗೋತ್ರ ವಿವಾಹವು, ಯಾರೂ ಉಲ್ಲಂಘಿಸುವ ಧೈರ್ಯ ತೋರದ ಒಂದು ನಂಬಿಕೆಯೆಂದು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಹೀಗಾಗಿ ಅವುಗಳೊಳಗೇ ಇರುವ ಜಾತಿಗಳ ಸ್ವಜಾತಿ ವಿವಾಹವು ಇದ್ದೂ ಕೂಡ ಭಿನ್ನಗೋತ್ರ ವಿವಾಹವನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲಾಗುತ್ತಿದೆ. ಭಿನ್ನಗೋತ್ರ ವಿವಾಹದ ನಿಯಮವನ್ನು ಮೀರಿದವರಿಗಿಂತ ಕಠಿಣತರವಾದ ದಂಡವನ್ನು ಸ್ವಜಾತಿ ವಿವಾಹದ ನಿಯಮವನ್ನು ಮುರಿದವರಿಗೆ ವಿಧಿಸಲಾಗುವುದು. ಆದ್ದರಿಂದ ಭಿನ್ನಗೋತ್ರ ವಿವಾಹ ಪದ್ಧತಿಯೇ ನಿಯಮವಾಗಿದ್ದು ಜಾತಿ ಇರುವುದಿಲ್ಲವೆಂಬುದನ್ನು ನೀವು ಕೂಡಲೆ ನೋಡಬಹುದು, ಏಕೆಂದರೆ, ಭಿನ್ನಗೋತ್ರ ವಿವಾಹವೆಂದರೆ ಐಕ್ಯವೆಂದರ್ಥ. ಆದರೆ ನಮ್ಮಲ್ಲಿ ಜಾತಿಗಳಿವೆ. ಅದರ ಪರಿಣಾಮವಾಗಿ, ಭಾರತ ಕುರಿತಂತೆ, ಜಾತಿಗಳ ಸೃಷ್ಟಿಯೆಂದರೆ ಭಿನ್ನಗೋತ್ರ ವಿವಾಹದ ಮೇಲೆ ಸ್ವಜಾತಿ ವಿವಾಹದ ಅಧಿಕ ಸ್ಥಾನವೆಂಬುದು ಅಂತಿಮ ವಿಶ್ಲೇಷಣೆ, ಆದಾಗ್ಯೂ ಮೂಲ ಭಿನ್ನ ಗೋತ್ರ ವಿವಾಹ ಜನಾಂಗದಲ್ಲಿ, ಸ್ವಜಾತಿ ವಿವಾಹ ಸುಲಭ ಸಾಧ್ಯತೆಯೊಂದು (ಜಾತಿಯ ಸೃಷ್ಟಿಗೆ ಸಮನಾಗಿರುವುದು) ಗಂಭೀರ ಸಮಸ್ಯೆಯೇ ಆಗಿದೆ. ಭಿನ್ನಗೋತ್ರ ವಿವಾಹ ಪದ್ಧತಿಯ ವಿರುದ್ಧವಾಗಿ ಸ್ವಜಾತಿ ವಿವಾಹ ಪದ್ಧತಿ ಸಂರಕ್ಷಣೆಗಾಗಿ ಬಳಸುವ ವಿಧಾನಗಳ ಪರಿಶೀಲನೆಯಲ್ಲಿಯೇ ನಾವು ನಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿರೀಕ್ಷೆಯಿಟ್ಟುಕೊಳ್ಳಬಹುದು.

ಈ ರೀತಿಯಲ್ಲಿ ಭಿನ್ನಗೋತ್ರ ವಿವಾಹದ ಮೇಲೆ ಸ್ವಜಾತಿ ವಿವಾಹದ ಮೇಲಧಿಕಾರವೆಂದರೆ ಜಾತಿಯ ಸೃಷ್ಟಿಯೆಂದೇ ಅರ್ಥ. ಆದರೆ ಇದು ಅಷ್ಟು ಸುಲಭದ ವ್ಯವಹಾರವಲ್ಲ. ಈಗ ಉದಾಹರಣೆಯಾಗಿ ತನ್ನನ್ನೇ ತಾನು ಜಾತಿಯನ್ನಾಗಿಸಲು ಇಚ್ಛಿಸುವ ಒಂದು ಕಾಲ್ಪನಿಕ ಗುಂಪನ್ನು ತೆಗೆದುಕೊಂಡು ಅದು ಸ್ವಜಾತಿ ವಿವಾಹ ಜಾರಿಗೆ ತರಲು ಯಾವ ವಿಧಾನಗಳನ್ನು ಅನುಸರಿಸಬೇಕಾದೀತೆಂಬುದನ್ನು ವಿಶ್ಲೇಷಿಸೋಣ. ಒಂದು ಗುಂಪು ತನ್ನ ಜಾತಿಯಲ್ಲೇ ಮದುವೆ ಮಾಡಿಕೊಳ್ಳಲು ಇಚ್ಛಿಸಿದರೆ, ಹೊರಗಿನ ಗುಂಪುಗಳೊಂದಿಗೆ ಅಂತರ್ಜಾತೀಯ ಮದುವೆ ಮಾಡಿಕೊಳ್ಳುವುದರ ವಿರುದ್ಧ ಕೇವಲ ಒಂದು ಔಪಚಾರಿಕ ನಿಷೇಧ ಮಾತ್ರ ಪ್ರಯೋಜನವಾಗುವುದಿಲ್ಲ. ಅದರಲ್ಲಿಯೂ ತಮ್ಮ ವಂಶದಲ್ಲಿಯೇ ಮದುವೆಯಾಗುವ, ಪದ್ಧತಿಯನ್ನು ಜಾರಿಗೆ ತರುವ ಪೂರ್ವದಲ್ಲೇ, ವೈವಾಹಿಕ ಸಂಬಂಧಗಳೆಲ್ಲಾ ಭಿನ್ನಗೋತ್ರ ವಿವಾಹ ಪದ್ಧತಿಯು ನಿಯಮವಾಗಿದ್ದರಂತೂ ಸಾಂಪ್ರದಾಯಿಕವಾದ ತಡೆಯಪ್ಪಣೆಯಿಂದ ಅನುಕೂಲವಿಲ್ಲ. ಅದೂ ಅಲ್ಲದೆ, ಪರಸ್ಪರ ನಿಕಟ ಸಂಪರ್ಕದಲ್ಲಿರುವ ಎಲ್ಲ ಗುಂಪುಗಳಲ್ಲೂ ಚೆನ್ನಾಗಿ ಕಲೆಯುವಿಕೆ ಹಾಗೂ ಸಂಕರಗೊಳ್ಳುವಿಕೆಯಿಂದಾಗಿ ಸಮರೂಪ ಹೊಂದಿದ ಸಮಾಜವಾಗಿ ಬಲಗೊಳ್ಳುವ ಪ್ರವೃತ್ತಿಯೊಂದು ಇದ್ದೇ ಇದೆ. ಈ ಬಗೆಯ ಪ್ರವೃತ್ತಿಯನ್ನು, ಜಾತಿಯ ರಚನೆಯಲ್ಲಿರುವ ಆಸಕ್ತಿಯಿಂದ, ಬಲವಾಗಿ ನಿಷ್ಫಲಗೊಳಿಸಬೇಕಾದರೆ, ಒಂದು ಗೆರೆಯೆಳೆದು ಆವೃತ್ತದಿಂದ ಆಚೆಗೆ ಜನರು ಮದುವೆ ಒಪ್ಪಂದಗಳನ್ನು ಮಾಡಕೂಡದೆಂದು ಹದ್ದಿನಲ್ಲಿಡುವುದು ಅನಿವಾರ್ಯವಾಗಿದೆ.

ಅಷ್ಟಾದರೂ, ಹೊರಗಿನವರೊಂದಿಗೆ ಮದುವೆಗಳನ್ನು ತಡೆಹಿಡಿಯುವ ಈ ಅಂಕೆಯು ತನ್ನೊಳಗಿನಿಂದಲೇ ಸಮಸ್ಯೆಗಳನ್ನು ಹುಟ್ಟಿಸುತ್ತದೆ, ಮತ್ತು ಅವುಗಳಿಗೆ ಪರಿಹಾರ ಅಷ್ಟು ಸುಲಭವಾಗಿರುವುದಿಲ್ಲ. ಸ್ಥೂಲವಾಗಿ ಹೇಳುವುದಾದರೆ, ರೂಢಿಯ ಒಂದು ಗುಂಪಿನಲ್ಲಿ ಹೆಂಗಸರೂ ಗಂಡಸರೂ ಹೆಚ್ಚು ಕಡಿಮೆ ಸಮನಾಗಿ ಹಂಚಿಕೊಂಡಿರುತ್ತಾರೆ. ಸಾಮಾನ್ಯವಾಗಿ ಹೇಳುವುದಾದರೆ, ಸಮವಯಸ್ಕರಲ್ಲಿ ಸಮಾನತೆಯೊಂದು ಇದ್ದೇ ಇರುತ್ತದೆ. ಆದರೂ ವಾಸ್ತವ ಸಮಾಜಗಳಲ್ಲಿ ಯಾವಾಗಲೂ ಈ ಸಮಾನತೆಯು ಅರಿವಿಗೆ ಬರುವುದೇ ಇಲ್ಲ. ಅದೇ ಕಾಲದಲ್ಲಿ ತಾನೊಂದು ಜಾತಿಯಾಗಬಯಸುವ ಗುಂಪಿಗೆ ಲಿಂಗಗಳ ನಡುವೆ ಸಮಾನತೆಯನ್ನುಳಿಸಿ ಕಾಪಾಡುವುದು ಅಂತಿಮ ಗುರಿಯಾಗಿರುತ್ತದೆ. ಏಕೆಂದರೆ ಅದಿಲ್ಲದೆ ಸ್ವಜಾತಿ ವಿವಾಹ ಅಸ್ತಿತ್ವದಲ್ಲಿರುವುದು ಹಿಂದಿನಂತೆ ಸಾಧ್ಯವಾಗುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸ್ವಜಾತಿ ವಿವಾಹ ಪದ್ಧತಿಯನ್ನು ಸಂರಕ್ಷಿಸಬೇಕಾದಲ್ಲಿ ತಮ್ಮೊಳಗಿನವರೊಂದಿಗೆ ಲೈಂಗಿಕ ಸಂಪರ್ಕದ ಹಕ್ಕನ್ನು ಕಲ್ಪಿಸಿಕೊಡಬೇಕು. ಇಲ್ಲವಾದಲ್ಲಿ ಗುಂಪಿನ ಸದಸ್ಯರನ್ನು ತಮಗಿಷ್ಟ ಬಂದ ರೀತಿಯಲ್ಲಿ ತಾವು ನೋಡಿಕೊಳ್ಳುವಂತೆ ಪರಿಧಿಯಿಂದಾಚೆಗೆ ಅಟ್ಟಿಬಿಡಲಾಗುವುದು. ಆದರೆ ಲೈಂಗಿಕ ಹಕ್ಕುಗಳನ್ನು ತಮ್ಮೊಳಗೆಯೆ ದೊರಕಿಸುವುದಕ್ಕಾಗಿ ತಾನೊಂದು ಜಾತಿಯಾಗಿ ಉಳಿಯಬೇಕೆಂದು ಬಯಸುವ ಗುಂಪಿನೊಳಗೆ ಮದುವೆಯಾಗಬಲ್ಲ ಘಟಕಗಳಲ್ಲಿ ಸ್ತ್ರೀ-ಪುರುಷರ ಸಂಖ್ಯೆ ಸಮಾನತೆಯನ್ನು ಉಳಿಸಿಕೊಂಡು ಬರುವುದೂ ತೀರ ಅಗತ್ಯ. ಅಂಥದೊಂದು ಸಮಾನತೆಯ ಸಂರಕ್ಷಣೆಯಿಂದಲೇ ಗುಂಪಿನ ಅಗತ್ಯವಾದ ಸ್ವಗೋತ್ರ ವಿವಾಹ ಪದ್ಧತಿಯನ್ನು ಸುಭದ್ರವಾಗಿಡುವುದು ಸಾಧ್ಯ, ಮತ್ತು ಇದರಲ್ಲಿ ತುಂಬ ಅಂತರವಿದ್ದರೆ ಅದು ಗುಂಪನ್ನು ಮುರಿಯುವುದು ನಿಶ್ಚಿತ.

ಹೀಗಾಗಿ ಜಾತಿ ಸಮಸ್ಯೆಯು ಅಂತಿಮವಾಗಿ, ಮದುವೆಗೆ ಪ್ರಾಪ್ತ ವಯಸ್ಕರಾದ ಸ್ತ್ರೀ-ಪುರುಷ ವೈರುಧ್ಯಗಳನ್ನು ಸರಿಪಡಿಸುವ ಒಂದು ಅಂಶವಾಗಿ ಮಾರ್ಪಡುತ್ತದೆ. ಅದರ ಪಾಡಿಗೆ ಅದನ್ನು ಬಿಟ್ಟರೂ, ಈ ಎರಡು ಘಟಕಗಳಲ್ಲಿರುವ ಅನುರೂಪತೆಯನ್ನು ಗಂಡ-ಹೆಂಡತಿ ಒಟ್ಟಿಗೆ ಸತ್ತಾಗ ಮಾತ್ರ ಕಾಣಬಹುದಾಗಿದೆ. ಆದರೆ ಇದೊಂದು ಅಪರೂಪದ ಸಂಗತಿ. ಹೆಂಡತಿಗಿಂತ ಮುಂಚೆಯೇ ಗಂಡ ಸತ್ತು ಒಬ್ಬ ಹೆಚ್ಚುವರಿ ಹೆಣ್ಣನ್ನು ಉಳಿಸಿಹೋಗಬಹುದು; ಅಂಥ ಪ್ರಸಂಗದಲ್ಲಿ ಗಂಡನಿಲ್ಲದ ಆಕೆಯನ್ನು ಇತಿಶ್ರೀ ಮಾಡಬೇಕಾಗುತ್ತದೆ, ಹಾಗೆ ಮಾಡದಿದ್ದರೆ ಆಕೆ ಅಂತರ್ಜಾತೀಯ ವಿವಾಹದ ಮೂಲಕ ಆ ಗುಂಪಿನ ಸ್ವಜಾತಿ

ವಿವಾಹ ಪದ್ಧತಿಯನ್ನು ಮುರಿಯುತ್ತಾಳೆ. ಇದೇ ರೀತಿಯಲ್ಲಿ ಹೆಂಡತಿ ಸತ್ತು ಗಂಡ ಉಳಿದು ಹೆಚ್ಚುವರಿ ಮನುಷ್ಯನಾಗಲೂಬಹುದು; ಆಗ ಆ ಗುಂಪು ಅವನ ಮಡದಿಯ ದಾರುಣ ಸಾವಿಗೆ ಕನಿಕರಿಸಲೂಬಹುದು. ಆದರೆ ಅವನನ್ನೂ ನಿವಾರಿಸಲೇಬೇಕು, ಇಲ್ಲವಾದರೆ ಅವನೂ ಗುಂಪಿನ ಹೊರಗಿನಿಂದ ಮದುವೆಯಾಗಿ ಸ್ವಜಾತಿ ವಿವಾಹ ನಿಯಮವನ್ನು ನುಚ್ಚುಗೊಳಿಸುತ್ತಾನೆ. ಹೀಗೆ ಹೆಚ್ಚುವರಿಯಾದ ಹೆಣ್ಣು ಮತ್ತು ಗಂಡು ಜಾತಿಗೆ ಕಂಟಕವಾಗುತ್ತಾರೆ. ಹಾಗಾಗದಂತೆ ನೋಡಿಕೊಳ್ಳಬೇಕು; ಅದೇ ಗುಂಪಿನ ನಿಗದಿತ ವಲಯದೊಳಗೇ ಸರಿಯಾದ ಸಂಗಾತಿಗಳನ್ನು ಹುಡುಕದಿದ್ದರೆ (ಅವರ ಪಾಡಿಗೇ ಅವರನ್ನು ಬಿಟ್ಟಲ್ಲಿ ಅವರು ಯಾರನ್ನೂ ಹುಡುಕಲಾರರು, ಮತ್ತು ಇದನ್ನು ನಿಯಂತ್ರಿಸದಿದ್ದಲ್ಲಿ ಸುಮ್ಮನೆ ಟಳಾಯಿಸುವ ಜೋಡಿಗಳು ಇದ್ದಾವು) ಅವರು ಎಲ್ಲೆ ಮೀರುವ, ಹೊರಗಡೆ ಮದುವೆಯಾಗುವ, ಮತ್ತು ಜಾತಿಗೆ ಹೊರತಾದ ಸಂತಾನ ಕೊಡುವ ಸಂಭವವಿದೆ.

ಮೇಲೆ ಹೇಳಿದ ಹೆಚ್ಚುವರಿ ಗಂಡು ಮತ್ತು ಹೆಚ್ಚುವರಿ ಹೆಣ್ಣು ಕುರಿತು ನಮ್ಮ ಕಾಲ್ಪನಿಕ ಗುಂಪು ಏನು ಮಾಡಬಹುದೆಂಬುದನ್ನೀಗ ನೋಡೋಣ. ಮೊದಲು ಹೆಚ್ಚುವರಿ ಹೆಣ್ಣಿನ ವಿಚಾರ ಪರಿಶೀಲಿಸೋಣ. ಜಾತಿಯ ಸ್ವಗೋತ್ರ ವಿವಾಹ ಪದ್ಧತಿಯನ್ನು ಕಾಪಾಡುವ ಸಲುವಾಗಿ ಎರಡು ರೀತಿಯಲ್ಲಿ ಆಕೆಯ ವಿಷಯವನ್ನು ಇತ್ಯರ್ಥ ಮಾಡಬಹುದಾಗಿದೆ.

ಪ್ರಥಮಃ ಅವಳ ಮೃತ ಗಂಡನ ಚಿತೆಯಲ್ಲೇ ಅವಳನ್ನೂ ಸುಟ್ಟು ಅವಳ ಕಥೆ ಮುಗಿಸಬಹುದು. ಆದರೆ ಲೈಂಗಿಕ ಅಸಮಾನತೆಯ ಸಮಸ್ಯೆಯನ್ನು ನಿವಾರಿಸುವಲ್ಲಿ ಇದೊಂದು ಅಪ್ರಾಯೋಗಿಕ ವಿಧಾನವಾದೀತು. ಕೆಲವು ಕಡೆಗಳಲ್ಲಿ ಇದು ಸರಿಹೋಗಬಹುದು. ಅದರಿಂದಾಗಿ

ಜಾತಿ ಸಮಸ್ಯೆಯು ಅಂತಿಮವಾಗಿ, ಮದುವೆಗೆ ಪ್ರಾಪ್ತ ವಯಸ್ಕರಾದ ಸ್ತ್ರೀ-ಪುರುಷ ವೈರುಧ್ಯಗಳನ್ನು ಸರಿಪಡಿಸುವ ಒಂದು ಅಂಶವಾಗಿ ಮಾರ್ಪಡುತ್ತದೆ. ಅದರ ಪಾಡಿಗೆ ಅದನ್ನು ಬಿಟ್ಟರೂ, ಈ ಎರಡು ಘಟಕಗಳಲ್ಲಿರುವ ಅನುರೂಪತೆಯನ್ನು ಗಂಡ-ಹೆಂಡತಿ ಒಟ್ಟಿಗೆ ಸತ್ತಾಗ ಮಾತ್ರ ಕಾಣಬಹುದಾಗಿದೆ.

ಪ್ರತಿಯೊಬ್ಬ ಹೆಚ್ಚುವರಿ ಸ್ತ್ರೀಯನ್ನೂ ಹೀಗೆ ನಿವಾರಿಸಲಾಗದು; ಇದು ಸುಲಭ ಪರಿಹಾರವಾದರೂ ಕಷ್ಟಸಾಧ್ಯವಾಗಿದೆ. ಈ ರೀತಿಯಲ್ಲಿ ಹೆಚ್ಚುವರಿ ಸ್ತ್ರೀ (ವಿಧವೆ)ಯನ್ನು ನಿವಾರಿಸದಿದ್ದಲ್ಲಿ ಗುಂಪಿನಲ್ಲೇ ಉಳಿಯುತ್ತಾಳೆ. ಆದರೆ ಅವಳ ಇರುವಿಕೆಯಲ್ಲೇ ಎರಡು ಅಪಾಯಗಳಿವೆ. ಆಕೆ ಜಾತಿಯ ಹೊರಗೆ ಮದುವೆಯಾಗಿ ಸ್ವಜಾತಿ ಪದ್ಧತಿಯನ್ನು ಉಲ್ಲಂಘಿಸಬಹುದು, ಇಲ್ಲವೆ ಆಕೆ ಜಾತಿಯೊಳಗೇ ಮದುವೆಯಾಗಲೂಬಹುದು ಮತ್ತು ಅದರಿಂದ ಜಾತಿಯೊಳಗೆ ಸಮರ್ಥ ವಧುಗಳಿಗೆ ಮೀಸಲಿದ್ದ ವಿವಾಹದ ಅವಕಾಶಗಳಿಗೆ ಲಗ್ಗೆ ಹಾಕಬಹುದು. ಆದ್ದರಿಂದ, ಯಾವುದೇ ರೀತಿಯಲ್ಲಿ ಆಕೆಯೊಂದು ಪಿಡುಗು; ಆಕೆಯ ಸತ್ತ ಗಂಡನೊಂದಿಗೆ ಆಕೆಯನ್ನೂ ದಹಿಸಲಾಗದಿದ್ದರೂ ಯಾವುದಾದರೊಂದನ್ನು ಮಾಡಲೇಬೇಕು.

ಎರಡನೆಯ ಪರಿಹಾರೋಪಾಯವೆಂದರೆ ಅವಳಿಗೆ ಉಳಿದ ಜೀವನಪರ್ಯಂತ ವೈಧವ್ಯವನ್ನು ವಿಧಿಸುವುದು. ವಸ್ತುನಿಷ್ಠ ಪರಿಣಾಮದ ದೃಷ್ಟಿಯಿಂದಲಂತೂ ವೈಧವ್ಯವನ್ನು ಹೇರುವುದಕ್ಕಿಂತಲೂ ಸುಡುವುದೇ ಉತ್ತಮ ಪರಿಹಾರ. ವಿಧವೆಯನ್ನು ಸುಡುವುದರಿಂದ ಒಬ್ಬ ಹೆಚ್ಚುವರಿ ಹೆಣ್ಣಿಗೆ ಸಂಭವಿಸಬಹುದಾದ ಎಲ್ಲ ಮೂರು ಕೇಡುಗಳನ್ನು ನಿವಾರಿಸಿದಂತೆ ಆಗುತ್ತದೆ. ಸತ್ತು ಇಲ್ಲವಾಗುವುದರ ಮೂಲಕ. ಆಕೆ ಜಾತಿಯ ಒಳಗಾಗಲೀ ಹೊರಗಾಗಲಿ ಮದುವೆಯಾಗುವ ಸಮಸ್ಯೆಯಿರುವುದಿಲ್ಲ. ಆದರೆ ಹೀಗೆ ಸುಡುವುದಕ್ಕಿಂತಲೂ ಕಡ್ಡಾಯದ ವೈಧವ್ಯ ಉತ್ತಮವೇಕೆಂದರೆ ಅದು ಹೆಚ್ಚು ಪ್ರಾಯೋಗಿಕವಾಗಿದೆ. ತೌಲನಿಕವಾಗಿಯೂ ಇದು ಮಾನವೀಯವಾಗಿರುವುದಲ್ಲದೆ ದಹನದಂತೆ ಇದೂ ಪುನರ್ವಿವಾಹದ ಕೇಡಿನಿಂದ ಕಾಪಾಡುತ್ತದೆ. ಆದರೆ ಗುಂಪಿನ ನೈತಿಕತೆಯನ್ನು ರಕ್ಷಿಸುವಲ್ಲಿ ಇದು ಸೋಲುತ್ತದೆ. ಕಡ್ಡಾಯ ವೈಧವ್ಯದಲ್ಲಿ ಸ್ತ್ರೀ ಇರುತ್ತಾಳೆಂಬುದರಲ್ಲಿ ಸಂಶಯವಿಲ್ಲ; ವಿಧಿಬದ್ಧ ಪತ್ನಿಗಿರುವ ಸಹಜ ಹಕ್ಕುಗಳಿಂದ ಆಕೆಯನ್ನು ಭವಿಷ್ಯ ಜೀವನದಲ್ಲಿ ಪದಚ್ಯುತಗೊಳಿಸುವುದರಿಂದಾಗಿ ಅನೈತಿಕ ನಡತೆಗೆ ಆಕರ್ಷಣೆ ಹೆಚ್ಚಾಗುತ್ತದೆ. ಆದರೆ ಇದು ಯಾವುದೇ ರೀತಿಯಲ್ಲೂ ಒಂದು ದುಸ್ತರವಾದ ಕಷ್ಟವಲ್ಲ. ಇನ್ನು ಮರಳುಮಾಡುವ ಸಲೆಯಾಗದ ಒಂದು ಪರಿಸ್ಥಿತಿಯಲ್ಲಿರುವಂತೆ ಆಕೆಯನ್ನು ಕೆಳದರ್ಜೆಗೆ ಇಳಿಸಬಹುದು.

(ಮುಂದಿನ ಸಂಚಿಕೆಗೆ)

(21ನೇ ಪುಟದಿಂದ)

ಪ್ರಸಿದ್ಧ ಇಂಗ್ಲೀಷ್ ನಾಟಕಕಾರ ಷೇಕ್ಸ್‌ಪಿಯರ್ 'ಮ್ಯಾಕ್‌ಬೆತ್' ನಾಟಕದಲ್ಲಿ ಒಂದು ಪಾತ್ರದ ಮೂಲಕ ಹೇಳುತ್ತಾನೆ. 'ಮನುಷ್ಯನ ಮನಸ್ಸಿನಲ್ಲಿನ ಯೋಜನೆಗಳನ್ನು, ಮುಖದಲ್ಲಿ ಕಾಣುವ ಯಾವ ಕಲೆಯೂ ಇಲ್ಲ' ('There is no art to find mind's construction on face") ಎಂದು. ಪ್ರಧಾನಿಗಳ ಮನಸ್ಸಿನಲ್ಲಿ ಏನಿದೆಯೋ ತಿಳಿಯುತ್ತಿಲ್ಲ. ಆದರೆ ಧಾರ್ಮಿಕ ಕಲಹವನ್ನು ಮತ್ತೊಮ್ಮೆ ಬಡಿದೆಬ್ಬಿಸಿದ್ದು 'ಸಂಘ ಪರಿವಾರದ ಹಿಂದುತ್ವ' ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಅದೊಂದೆ ಕಾರಣದಿಂದ ಪ್ರಸ್ತುತ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದೆ ಎನ್ನುವುದು ಜಗಜ್ಜಾಹೀರಾಗಿರುವ ಸತ್ಯವಾಗಿದೆ.

ಸಂಘ ಪರಿವಾರದವರ ಕಾರ್ಯ ವೈಖರಿಯ ಸ್ಪಷ್ಟರೂಪ ಈಗ ನಮ್ಮ ಮುಂದಿದೆ. ಆದಿವಾಸಿ ಸಮುದಾಯಗಳು, ಗುಡ್ಡಗಾಡು ಪ್ರದೇಶಗಳು ಜನರ ನಡುವೆ ಇದ್ದುಕೊಂಡು, ಸಾಮಾಜಿಕ ಸೇವೆ ನಡೆಸುತ್ತಾ(?) ಈ ಸಮುದಾಯಗಳಲ್ಲಿ ದ್ವೇಷ, ಸಂಕುಚಿತ ದೃಷ್ಟಿಕೋನ-'ಹಿಂದುತ್ವ'-ವನ್ನು ಬಿತ್ತುವುದು. ಆರ್.ಎಸ್.ಎಸ್.ನ ಕೆಲಸ. ಗುಜರಾತ್-ಹಿಂಸಾಚಾರದಲ್ಲಿ ಭಾಗವಹಿಸಿದವರು ಬಹುತೇಕ ಹಿಂದುಳಿದ ವರ್ಗದವರು, ಆದಿವಾಸಿಗಳು, ಬುಡಕಟ್ಟು ಜನಾಂಗದವರಾಗಿದ್ದನ್ನು ಗಮನಿಸಬಹುದು. ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತ ಧಾರ್ಮಿಕ ಕಲಹವನ್ನು ಬಡಿದೆಬ್ಬಿಸುವುದು, ವಿ.ಎಚ್.ಪಿಯ ಕೆಲಸ. ಇನ್ನು ನೇರವಾಗಿ ಗಲಭೆಗಳಲ್ಲಿ ಭಾಗವಹಿಸುವುದು ಭಜರಂಗದಳ, ವಿಎಚ್‌ಪಿ ಮತ್ತು ಇತರ ಪುಡಿ ಕರಸೇವಕರ ಕೆಲಸ. ಸರ್ಕಾರದಲ್ಲಿಯೇ ಇದ್ದುಕೊಂಡು, ಕಾನೂನಿನ ಪರಿಧಿಯೊಳಗೆ, 'ಕೇಸರೀಕರಣ' ಪ್ರಕ್ರಿಯೆಯನ್ನು ಮುತುವರ್ಜಿಯಿಂದ ಮಾಡುವ ಕೆಲಸ ಬಿಜೆಪಿಯದು. ಜೊತೆಗೆ ಶಿವಸೇನೆಯಂತಹ ಕಟ್ಟಾ ಹಿಂದೂವಾದಿ ಪಕ್ಷಗಳ ಬೆಂಬಲ ಸಂಘ ಪರಿವಾರಕ್ಕಿದೆ. ಇವುಗಳೆಲ್ಲ 'ಹಿಂದುತ್ವ' ಕುಟುಂಬದ ಕೂಸುಗಳು.

ಕಡಿ, ಕೊಚ್ಚು, ಕೊಲ್ಲು ಎಂಬುದೇ ಈಗ ಚಾಲ್ತಿಯಲ್ಲಿರುವ ಹಿಂದುತ್ವ. ವಾಜಪೇಯಿ ಅದಕ್ಕೆ ಮುಖವಾಡ ಹಾಕಿ ಬೇರೆ ಅರ್ಥವನ್ನು ಕೊಡಲು ಪ್ರಯತ್ನಿಸುತ್ತಿದ್ದಾರೆ.

ವಿಎಚ್‌ಪಿಯ ಪ್ರವೀಣ್ ತೊಗಾಡಿಯ 'ಹಿಂದೂರಾಷ್ಟ್ರ' ಕಟ್ಟುವ ಮಾತನಾಡುತ್ತಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ಅಶ್ಲೀಲವಾಗಿ, ಪ್ರಚೋದನಕಾರಿಯಾಗಿ ಮಾತನಾಡುತ್ತಾರೆ. ಶಿವಸೇನೆಯ ಬಾಳ್‌ಠಾಕ್ರೆ ಹಿಂದೂಗಳಿಗೆ 'ಆತ್ಮಹತ್ಯಾದಳ' ಕಟ್ಟಲು ಕರೆಕೊಡುತ್ತಾರೆ. ನರೇಂದ್ರ ಮೋದಿ 'ಅಲ್ಪಸಂಖ್ಯಾತರ ಮನನೋಯದಂತೆ-'ಹಂ ದೋ ಹಮಾರೆ ಪಚ್ಚೀಸ್', ನಾವಿಬ್ಬರು, ನಮಗೆ ಇಪ್ಪತ್ತೈದು ಮಾತನಾಡುತ್ತಾರೆ. ಗುಜರಾತ್‌ನಲ್ಲಿ ಭಾರೀ ಮತೀಯವಾದಿ ಹಿಂಸಾಚಾರ ನಡೆಸಲಾಗುತ್ತದೆ. ಆರ್.ಎಸ್.ಎಸ್.ನವರು, 'ಹಿಂದೂಗಳಿಗೆ ಒಪ್ಪಿಗೆಯಾಗುವಂತಿದ್ದರೆ ಸರಿ, ಇಲ್ಲವಾದರೆ..." ಎಂದು ಗೋಳ್‌ವಾಲ್ಕರ್ ಧಾಟಿಯಲ್ಲಿ ಅಲ್ಪಸಂಖ್ಯಾತರಿಗೆ ಬೆದರಿಕೆ ಒಡ್ಡುತ್ತಾರೆ. ಬಿಜೆಪಿ ಅಧ್ಯಕ್ಷ ವೆಂಕಯ್ಯನಾಯ್ಡು 'ಗುಜರಾತ್ ಫಾರ್ಮುಲಾ'ವನ್ನು ದೇಶಾದ್ಯಂತ ಪ್ರಯೋಗಿಸಲಾಗುವುದೆಂದು ನಾಚಿಕೆ ಬಿಟ್ಟು ಹೇಳಿಕೊಳ್ಳುತ್ತಾರೆ. ಯಾವ ಫಾರ್ಮುಲಾ? ಗಲಭೆಯೆಬ್ಬಿಸಿ, ಚುನಾವಣೆಯ ಲಾಭಗಳಿಸುವ ದೇಶದ್ರೋಹಿ ಫಾರ್ಮುಲಾನೆ?

ಇದು ಒಂದು ರೀತಿಯ 'ಹಿಂದುತ್ವ'ವಾದರೆ ಪ್ರಧಾನಿ ವಾಜಪೇಯಿ ಮತ್ತು ಇತ್ತೀಚಿನ ಸೇರ್ಪಡೆ, ಉಪ-ಪ್ರಧಾನಿ ಎಲ್.ಕೆ. ಅಡ್ವಾನಿಯವರು ಪ್ರತಿಪಾದಿಸುವುದು ಇನ್ನೊಂದು ರೀತಿಯದು. 'ಹಿಂದುತ್ವ'ದ ನಿಜವಾದ ನಾಯಕ ಇದೇ ಅದ್ವಾನಿಯೆನ್ನುವುದು ಎಲ್ಲರಿಗೂ ತಿಳಿದ ವಿಷಯ. ಮೊಟ್ಟ ಮೊದಲ ಬಾರಿಗೆ ಅದ್ವಾನಿಯವರು ನಡೆಸಿದ ರಥಯಾತ್ರೆಯ-ಮೋದಿ ಆಗ ಇವರ ಆಪ್ತನಾಗಿದ್ದನ್ನು ಗಮನಿಸಬೇಕು-ದೇಶಾದ್ಯಂತ ಬಡಿದೆಬ್ಬಿಸಿದ ಕೋಮುಗಲಭೆ ಉತ್ಕರ್ಷಕ್ಕೆ ತಲುಪಿ ಪರ್ಯವಸನವಾದದ್ದು, ಉನ್ಮತ್ತ ಕರಸೇವಕರು ಬಾಬ್ರಿ ಮಸೀದಿಯನ್ನು ಕೆಡವಿದಾಗ ಮಾತ್ರ.

ಮಸೀದಿ ಕೆಡವಿದ್ದು ಕೇವಲ ಸ್ಯಾಂಪಲ್ ಅಷ್ಟೆ ಎಂದು ಈಗ ತಿಳಿದು ಬರುತ್ತಿದೆ. ಗುಜರಾತ್‌ನಲ್ಲಿ ಸರ್ಕಾರವೇ ಹಿಂದೆಂದೂ ಕೇಳರಿಯದ ಜನಾಂಗೀಯ ಹಿಂಸಾಚಾರ (ನಿರ್ಮೂಲನೆ) ವನ್ನು ನಡೆಸಿ, ಆ ಮೂಲಕ ಅಧಿಕಾರ ಗಳಿಸಿದ್ದು, ಈಗ ಚಾಲ್ತಿಯಲ್ಲಿರುವ ನಿಜವಾದ 'ಹಿಂದುತ್ವ'. 'ಇದು ಸಂಘಪರಿವಾರದವರು ಪರಿಪಾಲಿಸುತ್ತಿರುವ 'ಹಿಂದುತ್ವ', ಪ್ರಧಾನಿಯವರು ಗೋವಾದಲ್ಲಿ ಹೇಳಿದ್ದಲ್ಲ.



ದಯವಿಟ್ಟು ಓದಿರಿ

ಡಾ|| ಬಾಬಾಸಾಹೇಬ್ ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆ ಬಗ್ಗೆ ಅದೆಷ್ಟೋ ಕೃತಿಗಳು ಕನ್ನಡದಲ್ಲಿ ಬಂದಿದ್ದರೂ ಡಾ|| ಅಂಬೇಡ್ಕರ್‌ರವರ ಸಹವರ್ತಿಯಾಗಿದ್ದ ಧನಂಜಯ ಕೀರ್‌ರವರು ಬರೆದಿರುವ 'ಆಂಗ್ಲ ಕೃತಿ' ಇಂದಿಗೂ ಓದುಗರನ್ನು ಬಹುವಾಗಿ ಆಕರ್ಷಿಸುತ್ತಿರುವುದನ್ನು ಮರೆಯುವಂತಿಲ್ಲ.

ಸ್ವತಃ ಅಂಬೇಡ್ಕರ್‌ರವರಿಂದಲೇ ಅನುಮೋದಿಸಲ್ಪಟ್ಟಿದ್ದ ಈ ಆಂಗ್ಲ ಗ್ರಂಥವನ್ನು ಲೇಖಕ ಮಂಗ್ಳೂರ ವಿಜಯರವರು ಇದೀಗ ಕನ್ನಡಕ್ಕೆ ಅನುವಾದಿಸಿದ್ದು, ಕನ್ನಡ ಭಾಷಾ ಓದುಗರಿಗಾಗಿ ಲಭ್ಯವಿದೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಸಂಬುದ್ಧ ಪ್ರಕಾಶನ**
ವಿದ್ಯಾ ಟ್ಯುಟೋರಿಯಲ್ಸ್ ಪಕ್ಕ, ವಿ. ನಾಗೇನಹಳ್ಳಿ, ಬೆಂಗಳೂರು-560 032
ದೂರವಾಣಿ : 3433787 ಬೆಲೆ : ರೂ. **375/-**



ಭಾರತೀಯ ಸಂಸ್ಕೃತಿಯು ತನ್ನ ಹಲವಾರು ವೈಶಿಷ್ಟತೆಗಳಿಂದಾಗಿ ಜಗತ್ತಿನ ಇತಿಹಾಸಕಾರರ, ಅಧ್ಯಯನಶೀಲರ ಸಂಶೋಧನೆ ಮತ್ತು ಬರಹಗಾರರ ಗಮನ ಸೆಳೆದಿದೆ.

ಮೇಲಿಂದ ಮೇಲೆ ಈ ಬಗ್ಗೆ ಅನೇಕ ಚಿಂತನೆ ಹಾಗೂ ಸಂಶೋಧನೆಗಳು ನಡೆದಿದ್ದರೂ ಕಳೆದ ಕಾಲು ಶತಮಾನದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ನಮ್ಮ ನಡುವಿನ ಅಪರೂಪದ ಚಿಂತಕ ದಿವಂಗತ ಡಾ|| ಡಿ.ಆರ್. ನಾಗರಾಜ್ ಕಂಡ ವಿಭಿನ್ನ ದೃಷ್ಟಿಯ ಸಂಸ್ಕೃತಿ ಚಿಂತನ ಕುರಿತು ಬರೆದ ಕೃತಿ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಕನ್ನಡ ಪುಸ್ತಕ ಪ್ರಾಧಿಕಾರ**
ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018
ಬೆಲೆ : ರೂ. **200/-**



ಶಾಂತಿ, ದಯೆ, ಕರುಣೆ, ಪ್ರೀತಿ ಮತ್ತು ಸಮಾನತೆಯಂತ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಮಹಾನ್ ದಾರ್ಶನಿಕ ಭಗವಾನ್ ಬುದ್ಧನ ಬದುಕು ಮತ್ತು ಸಂದೇಶಗಳನ್ನು ಕುರಿತು ಸಂಸ್ಕೃತದಲ್ಲಿ ಅಶ್ವಘೋಷ ಬರೆದ ಬುದ್ಧ ಚರಿತ ಕೃತಿ ಎಲ್ಲ ಕಾಲಕ್ಕೂ ಒಂದು ಅಮೂಲ್ಯ ಕೃತಿ. ಸಂಸ್ಕೃತದಲ್ಲಿರುವ ಈ ಕೃತಿಯನ್ನು ಪುನರ್ ಸೃಷ್ಟಿಸಿ ಕನ್ನಡದ ಓದುಗರಿಗಾಗಿ ನೀಡಿರುವವರು ಹಿರಿಯ ವಿದ್ವಾಂಸ ಡಾ|| ಎಲ್. ಬಸವರಾಜುರವರು. ಈಗ ಮಾರುಕಟ್ಟೆಯಲ್ಲಿ ದೊರೆಯುತ್ತದೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಲೋಹಿಯಾ ಪ್ರಕಾಶನ**
'ಕ್ಷಿತಿಜ' ಈಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583103
ದೂರವಾಣಿ : 08392/57412 ಬೆಲೆ : ರೂ. **180/-**